ಶ್ರೀ ಬಿ.ಎಸ್.ಯಡಿಯೂರಪ್ಪ:-ಲೈಸೆನ್ಸ್ ಕೊಟ್ಟಿರುವ ಕಡೆ ಮಂತ್ರಿಗಳ ಹೆಸರು ಇದೆ . . . .

ಛೇರ್ಮನ್:-ಅದು ಏನೂ ರೆಕಾರ್ಡ್‌ಗೆ ಹೋಗುವುದಿಲ್ಲ. ಏನಿದ್ದರೂ ತಾವು ಬರೆದು ಕಳುಹಿಸಿ.

(ಈ ಸಮಯದಲ್ಲಿ ಭಾರತೀಯ ಜನತಾ ಪಾರ್ಟಿ ಸದಸ್ಯರು ಘೋಷಣೆಗಳನ್ನು ಕೂಗುತ್ತಾ ಸಭಾತ್ಯಾಗ ಮಾಡಿದರು.)

1992-93ನೇ ಸಾಲಿನಲ್ಲಿ ವಿತ್ತೀಯ ಕಾರ್ಯಕಲಾಪಗಳು

1992-93ನೇ ಸಾಲಿಗೆ ಸಂಬಂಧಿಸಿದ ಬೇಡಿಕೆಗಳ ಮೇಲಿನ ಚರ್ಚೆಗೆ ಮುಖ್ಯ ಮಂತ್ರಿಗಳಿಂದ ಉತ್ತರ ಹಾಗೂ ಮತಕ್ಕೆ ಹಾಕುವುದು.

ಶ್ರೀ ಎಸ್.ಬಂಗಾರಪ್ಪ:- (ಮುಖ್ಯ ಮಂತ್ರಿಯವರು):-ಮಾನ್ಯ ಸಭಾಧ್ಯಕ್ಷರೆ, ನಮ್ಮ ಇಲಾಖೆಗಳಿಗೆ ಸಂಬಂಧಪಟ್ಟ ಹಾಗೆ ಸನ್ಮಾನ್ಯ ಸದಸ್ಯರು, ಅನೇಕ ಜನ ಮಾನ್ಯ ಮಿತ್ರರು ಚರ್ಚೆಯಲ್ಲಿ ಭಾಗವಹಿಸಿ ಹಲವಾರು ವಿಷಯಗಳ ಬಗ್ಗೆ ಬೆಳಕು ಚೆಲ್ಲತಕ್ಕ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದಾರೆ. ನಾನು ತಮ್ಮ ಮುಖಾಂತರ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಮಾನ್ಯ ವಿರೋಧಪಕ್ಷದವರಿಗೆ ಅಭಿನಂದನೆಯನ್ನು ಸಲ್ಲಿಸತಕ್ಕ ಸಂದರ್ಭ ನನಗೆ ಸಿಗಲಿಲ್ಲವೆಂದು ನನ್ನ ಮನಸ್ಸಿಗೆ ನೋವಾಗಿದೆ. ಏಕೆಂದರೆ ಎಷ್ಟೋ ಸಾರಿ ವಿನಂತಿ ಮಾಡಿದರೂ ಕೂಡ ಅವರು ಬಂದು ಚರ್ಚೆಯಲ್ಲಿ ಭಾಗವಹಿಸಲಿಲ್ಲ. ನಾನು ಒಂದು ಮಾತಿನ ಪ್ರಯೋಗ ಮಾಡಿದರೆ ರಾಜ್ಯದ ಜನತೆ ತಿಳಿದುಕೊಳ್ಳಲಾರರು ಎಂದು ಭಾವಿಸಿದ್ದೇವೆ. ಅವರ ಮೊಂಡುತನ ಇವತ್ತು ಚರ್ಚೆಯಿಂದ ಬಲು ದೂರ ಅವರನ್ನು ಇಟ್ಟಿದೆ. ಅದಕ್ಕಾಗಿ ನನಗೆ ನೋವಾಗಿದೆ. ಮಾನ್ಯ ವಿರೋಧಪಕ್ಷದ ನಾಯಕರ ಆದಿಯಾಗಿ ಬನ್ನಿ ಈಗಲಾದರೂ ಚರ್ಚೆಯಲ್ಲಿ ಭಾಗವಹಿಸಿ ಎಂದು ನಾನು ನಿನ್ನೆ ಹೇಳಿದೆ. ಅವರು ಇಲ್ಲ, ನಾವು ಡಿಮಾಂಡ್ಸ್ ಮೇಲಿನ ಚರ್ಚೆಗೆ ಬರುವುದಿಲ್ಲವೆಂದರು. ಆದರೆ ನನಗೆ ಗೊತ್ತಿದೆ. ಅಪ್ರೊಪ್ರಿಯೇಷನ್ ಬಿಲ್ಲಿಗೆ ಬಂದು ಬೆಂಬಲ ಕೊಡುತ್ತೇವೆ ಎನ್ನುವ ಮಾತನ್ನು ಆಡಿದ್ದಾರೆ. ಅದಕ್ಕಾದರೂ ಬಂದು ಭಾಗವಹಿಸಲಿಯೆಂದು ನಾನು ಮತ್ತೊಮ್ಮೆ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇವತ್ತು ಸರ್ಕಾರದ ಆದ್ಯಕರ್ತವ್ಯ. ನಮ್ಮ ಇಲಾಖೆಗಳಿಗೆ ಸಂಬಂಧಪಟ್ಟಂತೆ ಚರ್ಚೆಯಾಗಿರತಕ್ಕ ಸಂದರ್ಭದಲ್ಲಿ ನಾನು ಮತ್ತು ಶ್ರೀಮತಿ ನಾಗರತ್ನಮ್ಮನವರು, ಮಾನ್ಯ ಮಂಜುನಾಥ್‌ರವರು, ಸಣ್ಣ ಉಳಿತಾಯ ಖಾತೆಯ ರಾಜ್ಯ ಸಚಿವರು, ನಾವೆಲ್ಲರೂ ಉತ್ತರ ಕೊಡತಕ್ಕ ಸಂದರ್ಭ ಇದೆ. ಇದು ಆದಮೇಲೆ ಧನ ವಿನಿಯೋಗ ಮಸೂದೆ ಅಂದರೆ ಅಪ್ರೊಪ್ರಿಯೇಷನ್ ಬಿಲ್ ಬರತಕ್ಕದ್ದು ಇದೆ. ನಾನು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರುಗಳಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಎಲ್ಲ ಬೇಡಿಕೆಗಳ ಬಗ್ಗೆ ಚರ್ಚೆಯಲ್ಲಿ ಭಾಗವಹಿಸಿ ಬೆಳಕು ಚೆಲ್ಲತಕ್ಕ ಪ್ರಾಮಾಣಿಕ ಪ್ರಯತ್ನವನ್ನು ರಾಜ್ಯದ ಜನತೆಯ ಪ್ರತಿನಿಧಿಗಳಾಗಿ ಜನತೆಯ ಹಿತದೃಷ್ಟಿಯಿಂದ ತಾವು ಚರ್ಚೆಯಲ್ಲಿ ಭಾಗವಹಿಸಿದ್ದೀರಿ. ತಾವು ಆ ಕರ್ತವ್ಯವನ್ನು ನೆರವೇರಿಸಿದ್ದೀರಿ. ನಮ್ಮ ಇಲಾಖೆಗಳಿಗೆ ಸಂಬಂಧಪಟ್ಟಂತೆ ಡಿಮಾಂಡ್ ನಂಬರ್ 15 ರಿಂದ42ರವರೆಗೆ ನನಗೆ ಸಂಬಂಧಪಟ್ಟಿದ್ದು. ಈ ಇಲಾಖೆಗಳ ಮೇಲೆ ಮಾತನಾಡಿರತಕ್ಕ ಹಿರಿಯ ಸದಸ್ಯರು, ಕಿರಿಯ ಸದಸ್ಯರು ಎಲ್ಲರೂ ಮಾತನಾಡಿದ್ದಾರೆ. ಅವರು ಏನೇನು ಪ್ರಾಮುಖ್ಯವಾದ ವಿಚಾರಗಳನ್ನು ಹೇಳಿದ್ದಾರೆ, ಅದಕ್ಕೆ ಅನಂತರ ಬರುತ್ತೇನೆ. ಮಾತವಾಡಿರತಕ್ಕ ಹಿರಿಯ ಸದಸ್ಯರುಗಳಾದ ಮಾನ್ಯ ಎ.ಕೆ. ಅನಂತಕೃಷ್ಣ, ವಿಶ್ವನಾಥ್, ಇದಿನಬ್ಬ, ರಾಜೂಗೌಡ, ವಾಟಾಳ್ ನಾಗರಾಜ್, ಶ್ರೀಮತಿ ರೇಣುಕರಾಜೇಂದ್ರ, ಕೆ.ಸಿದ್ದಯ್ಯ ಇತ್ಯಾದಿ ಇದ್ದರೆ ಉಳಿದಿರತಕ್ಕ ಸದಸ್ಯರು ಮಾನ್ಯ ಕರಿಯಣ್ಣನವರು, ಶಿವರಾಮೇಗೌಡರು, ಬಾಬುರಾವ್‌ಚವಾಣ್, ಇತ್ಯಾದಿ ಮಾನ್ಯ ಸದಸ್ಯರುಗಳು ಇದ್ದಾರೆ. ನಾನು ಅವರೆಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅವರು ಬಹಳವಿವರವಾಗಿ ಮಾತನಾಡಿದ್ದಾರೆ. ಶ್ರೀಮಾನ್ ಅನಂತಕೃಷ್ಣರವರು ಮತ್ತಿತರ ಮಾನ್ಯ ಸದಸ್ಯರು ಯಾರೇ ಇರಬಹುದು ಅವರೆಲ್ಲ ನಮ್ಮ ಆಡಳಿತ ಯಂತ್ರದ ಬಗ್ಗೆ, ಜಿಎಡಿ, ಜನರಲ್ ಅಡ್ಮಿನಿಸ್ಟ್ರೇಟಿವ್ ಡಿಪಾರ್ಟ್‌ಮೆಂಟ್ ಬಗ್ಗೆ ಮಾತನಾಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಒಟ್ಟಾರೆ ಆಡಳಿತ ಯಂತ್ರ ಯಾವರೀತಿ ಇದೆ, ಹೇಗೆ ಹೋಗಬೇಕು ಎನ್ನುವ ವಿಚಾರದಲ್ಲಿ

ಹೇಳಿದ್ದಾರೆ. ಈಗಿರತಕ್ಕ ಪದ್ಧತಿ ವ್ಯವಸ್ಥೆ ಸಂಪೂರ್ಣವಾಗಿ ಸರಿಯಾಗಿದೆ ಎನ್ನತಕ್ಕ ಮಾತನ್ನು ನಾನು ಆಡುವುದಿಲ್ಲ. ಏಕೆಂದರೆ ನಾನು ಕೂಡ ನನ್ನ ಅಪ್ರೋಚ್‌ನಲ್ಲಿ ಫೇರ್ ಆಗಿರಬೇಕು. ಮಾನ್ಯ ವಿರೋಧ ಪಕ್ಷದ ನಾಯಕರು ಇದ್ದಾಗ ಅವರು ಏನು ಹೇಳಬಹುದಾಗಿತ್ತು ಎಂಬುದನ್ನು ನಾನು ಊಹಿಸಬಲ್ಲೆ. ಏಕೆಂದರೆ ಅವರು ಮಾತನಾಡಲಿಲ್ಲ ಎನ್ನತಕ್ಕಂಥ ಕಾರಣದಿಂದಲೇ ನಾವು ಈ ವಿಚಾರ ಹೇಳತಕ್ಕಂಥಾದ್ದು ಸರಿಯಲ್ಲ. ಅವರು ಇದ್ದರೆ ಅವರ ಟೀಕಾಸ್ತ್ರಗಳು, ಟಿಪ್ಪಣಿ ಪೂರಕಗಳು ಏನೇನು ಬರುತ್ತಿದ್ದವು ಎಂದು ನಾನು ಊಹಿಸಬಲ್ಲೆ. ಆದರೆ ಇವತ್ತು ಎಲ್ಲ ಸಂಪೂರ್ಣವಾಗಿ ಸರಿಯಿದೆ ಎನ್ನತಕ್ಕಂಥ ಮಾತನಾಡುವುದಿಲ್ಲ. ಸರಿ ಇದೆ. ಆದರೆ ಇನ್ನೂ ಸರಿಯಾಗಬೇಕಾದದ್ದು ಬೇಕಾದಷ್ಟು ಇದೆ. ಇವತ್ತು ಲಂಚ ರುಷುವತ್ತುಗಳ ಬಗ್ಗೆ ನಾವು ಮಾತನಾಡುತ್ತೇವೆ. ಇದು ಏಕೆ ಆಗುತ್ತಿದೆ ಎಂದು ನಾವು ಊಹಿಸಬೇಕು. ನಾನು ಕಳೆದಸಾರಿ ಅಧಿವೇಶನದಲ್ಲಿ ಕೂಡ ಹೇಳಿದ್ದೇನೆ. ನಮ್ಮ ಕರ್ನಾಟಕ ರಾಜ್ಯದಲ್ಲಿ, ನಮ್ಮ ಆಡಳಿತದಲ್ಲಿ ಲಂಚ ಸ್ವಲ್ಪವೂ ಇಲ್ಲ ಎಂದು ನಾನು ಹೇಳುವುದಿಲ್ಲ. ಸ್ವಲ್ಪವೂ ಇಲ್ಲ ಎಂತಲೂ ನಾನು ಹೇಳುವುದಿಲ್ಲ. ಅದಕ್ಕೆ ಅರ್ಥ ಇದೆ. ಈ ಪಿಡುಗನ್ನು ತೊಡೆದುಹಾಕಬೇಕು ಎಂದು ಇದ್ದರೆ ಪ್ರಯತ್ನ ಜನತೆಯ ಹಿತದೃಷ್ಟಿಯಿಂದ ಪ್ರಾಮಾಣಿಕವಾಗಿ ಇರಬೇಕು. ಈ ಪ್ರಯತ್ನ ಬರೇ ರಾಜ್ಯ ಸರ್ಕಾರದಿಂದ ಮಾತ್ರ ಸಾಧ್ಯವಿಲ್ಲ. ನಾನು ಪದೇ ಪದೇ ಈ ಮಾತನ್ನು ಹೇಳಿದ್ದೇನೆ. ಇದೆಲ್ಲ ಇಂಟರ್‌ಲಿಂಕ್ಸ್ ಆಗಿರುವಂಥಾದ್ದು. ಕೇಂದ್ರ, ರಾಜ್ಯಗಳ ಎಲ್ಲ ಸರ್ಕಾರಗಳು ಕೂಡ ರೆಡಿ ಆಗಬೇಕು. ಅಪಾದಮಸ್ತಕವಾಗಿ ಇದರ ಅಭ್ಯಾಸ ನಡೆಯಬೇಕು. ನಮ್ಮ ಚಿಂತನೆಯ ಮೂಸೆಯಲ್ಲಿ ವಿಚಾರಗಳನ್ನು ತಿಕ್ಕಿ ತಿಕ್ಕಿ ನೋಡಬೇಕು. ಅದರಿಂದ ಒಡಮೂಡಿ ಬರತಕ್ಕಂಥ ವಿಚಾರಧಾರೆಗಳ ಹಿನ್ನೆಲೆಯಲ್ಲಿ ನಾವು ನಮ್ಮ ಕಾನೂನನ್ನು ರೂಪಿಸಬೇಕು ಮತ್ತು ಅದನ್ನು ಜಾರಿ ಕೊಡಬೇಕು. ಪ್ರತಿಫಲ ಕೂಡ ಪ್ರಾಮಾಣಿಕವಾಗಿ ಪಡೆಯುವುದು ಆಗಬೇಕು. ಏತಕ್ಕಾಗಿ? ಇವತ್ತು ಹೆಬ್ಬೆಟ್ಟು ಒತ್ತತಕ್ಕ ಜನರು ಇದ್ದಾರೆ. ಅವಿದ್ಯಾವಂತ ವರ್ಗದ ಮಧ್ಯೆ ಹುಟ್ಟಿಬಂದಿರತಕ್ಕಂಥ ನಮ್ಮ ರಾಜಕಾರಣ ನಮ್ಮ ಚಿಂತನೆಯಲ್ಲಿ ಆಡಗಿದೆ. ಇದಕ್ಕೆ ಒಂದು ವ್ಯವಸ್ಥೆ ಬರದೇ ಇದ್ದರೆ ಮಾತ್ರ ಜನರ ಶಾಪದಿಂದ ದೂರ ಅಥವಾ ಅವರ ಶಾಪದಿಂದ ವಿಮುಕ್ತರಾಗಿ ನಾವು ಉಳಿಯುವುದಕ್ಕೆ ಸಾಧ್ಯವಿಲ್ಲ. ಇವತ್ತಲ್ಲ ನಾಳೆ ಇದಕ್ಕೆ ಕೈತೊಳೆದು ಬೆನ್ನು ಹತ್ತಬೇಕಾಗುತ್ತದೆ. ಇದನ್ನು ಹಾಗೆಯೇ ಬಿಡುವುದಕ್ಕೆ ಆಗುವುದಿಲ್ಲ, ಇದನ್ನು ಬಿಡಲೂಬಾರದು. ಇವತ್ತು ನಮ್ಮ ಆಡಳಿತ ವ್ಯವಸ್ಥೆಯಲ್ಲಿ ಎರಡು ವಿಚಾರಗಳಿವೆ. ಒಂದು ಸ್ಪಷ್ಟವಾಗಿ ಕಡತಗಳ ವಿಲೇವಾರಿ ಮಾಡುವುದು ಆಗಬೇಕೆಂದು ಇದ್ದರೆ, ಅದು ಹೇಗೆ ಆಗಬೇಕು ಎನ್ನುವಂಥಾದ್ದು. ಮತ್ತೊಂದು ಲಂಚರುಶುವತ್ತುಗಳನ್ನು ದೂರ ಇಟ್ಟುಕೊಂಡು ನಾವು ಯಾವ ರೀತಿಯಾದ ಚಿಂತನೆಯ ಹಿನ್ನೆಲೆಯಲ್ಲಿ ನಮ್ಮ ಕಾನೂನನ್ನು ರೂಪಿಸಬೇಕು, ಜಾರಿ ಕೊಡಬೇಕು ಎನ್ನುವಂಥಾದ್ದು. ಇದು ಬಹಳ ಮುಖ್ಯವಾದುದು. ಕಡತಗಳ ವಿಲೇವಾರಿಯಲ್ಲಿ ವಿಳಂಬ ತಪ್ಪಿಸಿ ಅಥವಾ ಕೆಂಪುಪಟ್ಟಿಯಿಂದ ಹೊರಗಡೆ ತರಬೇಕೆಂದು ಇದ್ದರೆ ನಾವು ಪ್ರಾಮಾಣಿಕ ಪ್ರಯತ್ನ ಏನಾದರೂ ನಡೆಸಿದ್ದೇವೆಯೇ ಎಂದು ವಿಚಾರ ಮಾಡೋಣ. ಈ ಲಂಚದ ಬಗ್ಗೆ ನಾನು ಅನಂತರ ಬರುತ್ತೇನೆ. ಯಾವುದೇ ಒತ್ತಡಕ್ಕೆ ಒಳಗಾಗದೆ ನಾನು ನನ್ನ ವಿಚಾರಧಾರೆಗಳನ್ನು ಸಭೆಯ ಮುಂದೆ ಇಡತಕ್ಕಂಥ ಪ್ರಯತ್ನ ಮಾಡುತ್ತಿದ್ದೇನೆ. ಅಧಿಕಾರದಲ್ಲಿ ಇವತ್ತು ನಾವು ಇರಬಹುದು, ನಾಳೆ ಕಿತ್ತುಕೊಂಡು ಹೊರಟುಹೋಗಬಹುದು. ಈ ಪಕ್ಷ ಹೋಗಬಹುದು, ಮತ್ತೊಂದು ಪಕ್ಷ ಬರಬಹುದು. ಜನತಾದಳ ಸರ್ಕಾರ ಕೂಡ ಇಲ್ಲಿ ಇತ್ತು. ಅದಕ್ಕೆ ಮೊದಲು ಕಾಂಗ್ರೆಸ್ ಸರ್ಕಾರ ಇತ್ತು ಮತ್ತೂ ಈಗಲೂ ಕೂಡ ಕಾಂಗ್ರೆಸ್ ಸರ್ಕಾರ ಇದೆ. ಜನತಾದಳ ಇದ್ದಾಗ ಇದೇ ಬಿ.ಜೆ.ಪಿ.ಯವರು ಬೆಂಬಲ ಕೊಟ್ಟು ಸರ್ಕಾರ ಮಾಡಿದರು. 1983 ರಲ್ಲಿ ಶ್ರೀ ರಾಮಕೃಷ್ಣ ಹೆಗಡೆಯವರ ನಾಯಕತ್ವದಲ್ಲಿ ಸರ್ಕಾರ ಇದ್ದಾಗ ಅವರಿಗೆ ಬಹುಮತ ಇರಲಿಲ್ಲ. ಅಂದರೆ ಇದೇ ಸದನದಲ್ಲಿ ಇರಲಿಲ್ಲ. ಬಿ.ಜೆ.ಪಿ. ಸ್ವತಂತ್ರರು, ಇತರರಿಂದ ಬೆಂಬಲ ಪಡೆದು ಸರ್ಕಾರ ರಚನೆ ಮಾಡಿ ನಡೆಸತಕ್ಕಂಥ ಕಾಲದಲ್ಲಿ ಯಾವ ವ್ಯವಸ್ಥೆ ಇತ್ತೋ, ಇವತ್ತು ಆ ಆಡಳಿತ ಯಂತ್ರದ ದೃಷ್ಟಿಯಿಂದ ಭಾರಿ ಬದಲಾವಣೆ ಆಗಿದೆಯೆಂದು ನಾನು ತಿಳಿದಿಲ್ಲ. ನಾವು ನೇರವಾಗಿ ಒಪ್ಪಿಕೊಳ್ಳೋಣ. ಅದಕ್ಕೆ ಮೊದಲು ಏನು

ಇತ್ತೋ, ಅದು ಮುಂದುವರೆಯಿತು. ಈಗಲೂ ಅದು ಮುಂದುವರೆದಿದೆ. ನಿರ್ಭೀತವಾಗಿ ಈ ಮಾತನ್ನು ನಾವು ಆಡಿಕೊಳ್ಳೋಣ. ಕೆಲವು ವಿಚಾರಗಳಲ್ಲಿ ಬದಲಾವಣೆ ಮಾಡತಕ್ಕಂಥ ಪ್ರಯತ್ನ ನಾವು ಮಾಡಿರಬಹುದು. ಆದರೆ ಇನ್ನೂ ಮೂಲಭೂತವಾಗಿ ನಾವು ಮಾಡಿದ್ದೇವೆ ಎಂದು ಹೇಳಶುವುದಕ್ಕೆ ನಾನು ಸಿದ್ಧನಿಲ್ಲ. ನಾವೆಲ್ಲ ಬದಲಾವಣೆ ಮಾಡಿದ್ದೇವೆ ಎಂಬ ಮಾತನ್ನು ಆಡಿದರೆ ನಾವು ಜನತೆಗೆ ದ್ರೋಹ ಮಾಡಿದಹಾಗೆ ಆಗುತ್ತದೆ. ನಾವು ಅಂತಹ ರಾಜಕಾರಣ ಮಾಡಿಲ್ಲ. ನಮ್ಮ ಸರ್ಕಾರದವರು, ಯಾರೂ ಕೂಡ ಜನತೆಯನ್ನು ವಂಚಿಸಿ, ಅಧಿಕಾರದಲ್ಲಿ ಉಳಿಯತಕ್ಕ ಪ್ರಯತ್ನವನ್ನು ಮಾಡಲಾರೆವು. ನಾನು ಅದಕ್ಕಾಗಿಯೇ ಹೇಳಿದ್ದು. ಈ ವ್ಯವಸ್ಥೆ ಏನಿದೆ, ಇದೊಂದು ರೀತಿಯ ಕುವ್ಯವಸ್ಥೆ, ಕೆಟ್ಟ ವ್ಯವಸ್ಥೆ. ಈ ವ್ಯವಸ್ಥೆಯಿಂದ ಜನತೆಯನ್ನು ನಾವು ಹೊರಗಡೆ ತರಬೇಕಾಗಿದೆ. ಇಲ್ಲದಿದ್ದರೆ ಈಗಿರತಕ್ಕ ಕುವ್ಯವಸ್ಥೆಯಿಂದ ಜನತೆಯನ್ನು ದೂರ ಇಡಬೇಕಾಗಿದೆ. ಅದಕ್ಕೆ ನಾವು ಏನು ಮಾಡಬೇಕೆಂಬ ವಿಚಾರದಲ್ಲಿ ಗಮನ ಹರಿಸಬೇಕು. ಈ ಮಿಚಾರ ಆಮೂಲಾಗ್ರವಾಗಿ ಬರಬೇಕೆಂದಿದ್ದರೆ, ಆಪಾದನೆಯಿಂದ ಅಥವಾ ಆಪಾದನೆ ಚೌಕಟ್ಟಿನೊಳಗೆ ಆಗಿರತಕ್ಕಂಥ ಅಧಿಕಾರಿ ವರ್ಗಗಳು ಯಾವುವು ಎನ್ನುವುದನ್ನು ಸ್ವಲ್ಪ ವಿಚಾರ ಮಾಡೋಣ. ನಾವು ಅಧಿಕಾರಿಗಳು ಎನ್ನುವ ಮಾತನ್ನು ಆಡಿಬಿಡುತ್ತೇವೆ. ಇದರಲ್ಲಿ ರಾಜ್ಯಸರ್ಕಾರ ನೇಮಕ ಮಾಡಿರತಕ್ಕ ಅಧಿಕಾರವರ್ಗಗಳು ಕೆಲವು ಇವೆ. ಆದರೆ ಒಂದು ಮಾತನ್ನು ನೆನಪಿನಲ್ಲಿಡಬೇಕು. ಎಲ್ಲಾ ಅಧಿಕಾರಿಗಳೂ ಕೂಡ ಕೆಟ್ಟವರಾಗುವುದಕ್ಕೆ ಸಾಧ್ಯವಿಲ್ಲ, ಎಲ್ಲಾ ಅಧಿಕಾರಿಗಳೂ ಒಳ್ಳೆಯವರಾಗುವುದಕ್ಕೆ ಸಾಧ್ಯವೂ ಇಲ್ಲ. ಇವತ್ತು ಎಲ್ಲರೂ ಕೆಟ್ಟವರಿದ್ದಾರೆಂದು ಹೇಳಿದರೆ, ನಾಳೆ ಬಾಗಿಲು ಮುಚ್ಚಿಕೊಂಡು ಹೊರಟುಹೋಗುವುದು ಬಹಳ ಒಳ್ಳೆಯದು. ಒಳ್ಳೆಯ ಅಧಿಕಾರಿಗಳೂ ಇದ್ದಾರೆಂಬ ಅಭಿಪ್ರಾಯ ಸಹಜವಾಗಿ ಈ ಸದನದಲ್ಲಿ ಒಡಮೂಡಿ ಬಂದಿದೆ. ಈ ಸಂದರ್ಭದಲ್ಲಿ ಒಳ್ಳೆಯವರೂ ಇದ್ದಾರೆ, ಕೆಟ್ಟವರೂ ಇದ್ದಾರೆ. ಆ ಅಧಿಕಾರಿಗಳು ಯಾರು ಎಂದರೆ ನಮ್ಮ ಅಣ್ಣತಮ್ಮಂದಿರೇ, ನಮ್ಮ ಅಕ್ಕತಂಗಿಯರೇ, ಅವರು ಹೋಗಿ ಸರ್ಕಾರಿ ಸೇವೆಗೆ ಸೇರಿದ್ದಾರೆ. ಸರ್ಕಾರದವರು ಕರೆದಾಗ ಅರ್ಜಿ ಹಾಕುತ್ತಾರೆ, ಸಂದರ್ಶನ ಬರುತ್ತದೆ ಪಕ್ಷಾತೀತವಾಗಿ ನಾವೇ ಶಿಫಾರಸ್ ಮಾಡುತ್ತೇವೆ. ಕರ್ನಾಟಕ ಲೋಕಸೇವಾ ಆಯೋಗ ಅಥವಾ ನೇಮಕಾತಿ ಸಮಿತಿಗಳು ಇತ್ಯಾದಿ ಇತ್ಯಾದಿಗಳ ಬಗ್ಗೆ ನಾವೆಲ್ಲಾ ಶಿಫಾರಸ್ ಮಾಡುತ್ತೇವೆ. ಈಗ ನಾವು ಹೊಸದಾದ ವಿಚಾರಧಾರೆ ಇಟ್ಟುಕೊಂಡಿದ್ದೇವೆ. ಜಿಲ್ಲಾಮಟ್ಟಕ್ಕೆ ಸಿ ಅಂಡ್ ಡಿ ಕ್ಲಾಸಿಗೆ ಅಂದರೆ 3 ಮತ್ತು 4ನೇ ದರ್ಜೆ ನೌಕರರಿಗೆ, ಸಂದರ್ಶನ ಸಮಿತಿ ಮಾಡಬೇಕು ಎನ್ನತಕ್ಕಂಥ ವಿಚಾರವನ್ನು ನಾವು ಈಗಾಗಲೇ ಮಾಡಿದ್ದೇವೆ. ಏಕೆಂದರೆ, ಅವರನ್ನು ದೂರ ಕಳುಹಿಸುವುದು ಬೇಡ ಖರ್ಚುವೆಚ್ಚ ಜಾಸ್ತಿಯಾಗುತ್ತದೆಂದು ನಾವು ವಿಚಾರ ಮಾಡಿದ್ದೇವೆ. ನಿನ್ನೆ ಒಂದು ಸಲಹೆಯನ್ನು ವಿಧಾನ ಪರಿಷತ್ತಿನಲ್ಲಿ ಮಾಡಿದೆ. ಏನೆಂದರೆ, ಕ್ಲಾಸ್ ಎ ಅಂಡ್ ಬಿ ಗೂ ಕೂಡ ಈ ರೀತಿ ಏಕೆ ಮಾಡಬಾರದು. ಲೋಕಸೇವಾ ಆಯೋಗ ಏನಿದೆ, ಅದು ಬೇಕಾಗಿಲ್ಲ, ಸಾಕಾಗಿ ಹೋಗಿದೆ ಎನ್ನುವ ಮಾತನ್ನು ಆಡಿದರು. ಮಾನ್ಯ ಅಧ್ಯಕ್ಷಿಣಿಯವರೇ, ತಮ್ಮ ಮುಖಾಂತರ ಈ ಸದನದ ಗಮನಕ್ಕೆ ತರುವಹಾಗಿದ್ದರೆ, ಇವತ್ತು ಲೋಕಸೇವಾ ಆಯೋಗವನ್ನು ಕಿತ್ತುಹಾಕತಕ್ಕ ಅಧಿಕಾರ ನಮ್ಮ ಹತ್ತಿರ ಇಲ್ಲ, ಅದೊಂದು ಸ್ವಾಯತ್ತ ಸಂಸ್ಥೆ. ಅವರು ಈ ರಿತಿ ಮಾಡಿದ್ದಾರೆ ಎಂದು ಹೇಳಬಹುದು. ಅವರು ಆ ರೀತಿ ಮಾಡಿರತಕ್ಕ ಸಂದರ್ಭದಲ್ಲಿ ಲೋಕಸೇವಾ ಆಯೋಗದ ಬಗ್ಗೆ ಒಂದು ಮಾಡಬಹುದು. ಅವರು ಏನು ಆಯ್ಕೆ ಪಟ್ಟಿ ಮಾಡುತ್ತಾರೆ, ಆ ಪಟ್ಟಿಯಲ್ಲಿ ಯಾವುದನ್ನು ಒಪ್ಪಬಹುದು, ಯಾವುದನ್ನು ಬಿಡಬಹುದು ಎನ್ನುವುದನ್ನು ರಾಜ್ಯಸರ್ಕಾರದವರು ತೀರ್ಮಾನ ಮಾಡಬಹುದು. ಇಂಜಿನಿಯರುಗಳಿಗೆ ಸಂದರ್ಶನ ಅವರು ಕೊಡಬೇಕೇ ಅಥವಾ ನಾವೇ ಮಾಡಬಹುದೇ, ಅಥವಾ ಕ್ಲಾಸ್-1, ಕ್ಲಾಸ್-2 ಅಧಿಕಾರಿಗಳಿಗೆ ಕೊಡಬಹುದೇ ಬಿಡಬಹುದೇ ಎನ್ನುವುದನ್ನು ನಾವು ವಿಚಾರ ಮಾಡಬಹುದು. ಮತ್ತೆ ಅವರು ಆಯ್ಕೆ ಮಾಡಿರತಕ್ಕಪಟ್ಟಿ ಸರ್ಕಾರಕ್ಕೆ ಏನು ಬರುತ್ತದೆ, ಅದನ್ನೂ ಕೂಡ ಒಪ್ಪಬಹುದೇ ಬಿಡಬಹುದೇ ಎಂಬ ಅಧಿಕಾರ ರಾಜ್ಯ ಸರ್ಕಾರಕ್ಕೆ ಇದೆ. ಮೊನ್ನೆ ಈ ವಿಷಯ ಇಲ್ಲಿ ಬಂತು. ಅವತ್ತು ಮಾನ್ಯ ಕರಿಯಣ್ಣನವರು ಮತ್ತು ಬೇರೆ ಬೇರೆ ಸದಸ್ಯರು ಹೇಳಿದರು. ನನಗೆ ನೆನಪು ಇರುವಹಾಗೆ,

ಇಂಜಿನಿಯರ್ಸ್ ವಿಚಾರದಲ್ಲಿ ಹರಿಜನ ಅಭ್ಯರ್ಥಿಯನ್ನು ಆಯ್ಕೆ ಮಾಡುವ ವಿಚಾರದಲ್ಲಿ ಕೂಡ ಬೇರೆಯವರು ಬಂದೇ ಇಲ್ಲವೆಂದು, ಎಸ್.ಸಿ.ಯವರಲ್ಲಿ ಒಂದು ವರ್ಗದವರನ್ನು ಆಯ್ಕೆ ಮಾಡಿದ್ದಾರೆ, ಬೇರೆಯವರು ಯಾರೂ ಬಂದಿಲ್ಲ ಎನ್ನತಕ್ಕಂಥ ಆಪಾದನೆ ಮಾಡಿ, ನನಗೆ ಪತ್ರ ತಂದುಕೊಟ್ಟರು. ನಾವು ಪರೀಕ್ಷೆ ಮಾಡಬೇಕೆಂಬ ದೃಷ್ಟಿಯಿಂದ ವಿವರಗಳನ್ನು ಕಳುಹಿಸಿಕೊಡಿ ಎಂದು ಹೇಳಿ, ವಿವರ ಪಡೆಯತಕ್ಕ ಪ್ರಯತ್ನ ಮಾಡಿದೆವು. ಅವರಿಂದ ಬಂದ ವಿವರ ನೋಡಿದರೆ, ಕೆಲವು ವರ್ಗದವರು ಕೈಬಿಟ್ಟುಹೋಗಿದ್ದಾರೆಂದು ನನ್ನ ಗಮನಕ್ಕೆ ಬಂತು. ಏಕೆಂದರೆ, ಇವತ್ತು ಲೋಕಸೇವಾ ಆಯೋಗ ಇರಬಹುದು ಅಥವಾ ನೇಮಕಾತಿ ಸಮಿತಿಗಳು ಇರಬಹುದು. ಇವು ಎಲ್ಲಾ ವರ್ಗದವರಿಗೆ ನ್ಯಾಯವನ್ನು ಕೊಡತಕ್ಕ ವಿಚಾರವನ್ನು ಮಾಡಬೇಕೇ ವಿನಹ, ಒಂದೇ ವರ್ಗದವರನ್ನು ತೆಗೆದುಕೊಂಡು ತುಂಬುವುದಲ್ಲ. ಆ ರೀತಿ ಮಾಡುವುದಕ್ಕೆ ಬಿಡುವುದಿಲ್ಲ. ಈ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ. ಏಕೆಂದರೆ, ಸರ್ಕಾರದ ನೀತಿ ಇದೆ, ಸಾಮಾಜಿಕ ನ್ಯಾಯ ಎಂಬ ಮಾತನ್ನು ನಾವೇನು ಆಡುತ್ತೇವೆ, ಇದನ್ನು ಕೊಡಬೇಕೆಂದರೆ, ಈ ನೀತಿಯ ಹಿನ್ನೆಲೆಯಲ್ಲಿ ಮತ್ತು ಕಾನೂನು ಚೌಕಟ್ಟಿನಲ್ಲಿ ಈ ಆಯ್ಕೆ ಕೂಡ ನಡೆಯಬೇಕು. ಕಾನೂನು ಸರಿಯಿಲ್ಲ ಎಂದು ಬೇಕಾದರೆ ಅವರು ಬರೆಯಲಿ, ಕಾನೂನು ಸರಿ ಇಲ್ಲ ಎಂದರೆ ನಾವು ಅದನ್ನು ಸರಿ ಮಾಡೋಣ, ಮಾನ್ಯ ಸದಸ್ಯರು ತಾವು ಇದ್ದೀರಿ, ತಮ್ಮ ಅಭಿಪ್ರಾಯ ಕೊಡಿ, ಅದನ್ನು ಮಾಡಿ ಅವರಿಗೆ ತಿಳಿಸೋಣ. ಅದರೆ ಕಾನೂನು ಸರಿ ಇದ್ದರೂ ಕೂಡ ಮಾಡಿರುವುದಿಲ್ಲ ಎಂದರೆ ಆ ಪಟ್ಟಿಯನ್ನು ನಮ್ಮ ಅನುಮೋದನೆಯಿಂದ ದೂರ ಇಡಬೇಕಾಗುತ್ತದೆ. ಅದನ್ನು ಅನುಮೋದನೆ ಮಾಡಿದರೆ ನಾವು ಸಾಮಾಜಿಕ ನ್ಯಾಯ ಕೊಡುವುದಕ್ಕೆ ಆಗುವುದಿಲ್ಲ, ಅದು ಅಂತಿಮವಾಗಿ ಅನ್ಯಾಯಕ್ಕೆ ಒಳಗಾಗುತ್ತದೆ. ಈ ದೃಷ್ಟಿಯಿಂದ ನಾವು ಇದರ ಬಗ್ಗೆ ಹೇಳಬಹುದೇ ವಿನಹ ಪಿ ಎಸ್ ಸಿ ಯನ್ನೇ ವಜಾ ಮಾಡಿ ಎಂದರೆ ಕಾನೂನಿನ ಚೌಕಟ್ಟಿನಲ್ಲಿ ನಾವು ಅದನ್ನು ಮಾಡುವುದಕ್ಕೆ ಬರುವುದಿಲ್ಲ. ಅದು ಸಾಧ್ಯ ಇಲ್ಲದಿರುವ ವಿಚಾರ. ಆದರೆ ಪದೇ ಪದೇ ಪಿ.ಎಸ್.ಸಿ.ಗೆ ನಾವು ತಿಳಿಸಿದ್ದೇವೆ. ಅನ್ಯಾಯ ಮಾಡದಂತೆ ತಿಳಿಸಿದ್ದೇವೆ. ಆದರೆ ಅಧ್ಯಕ್ಷರು ನನ್ನ ಹತ್ತಿರ ಬಂದು ಮಾತನಾಡಬೇಕಾದರೆ ನಾನು ಅವರ ಗಮನಕ್ಕೂ ಕೂಡ ತಂದಿದ್ದೇನೆ. ನೋಡಿ ಇದು ಸರಿಯಲ್ಲ ಉದಾಹರಣೆಗೆ ಎಸ್.ಸಿ. ಅಭ್ಯರ್ಥಿಗಳನ್ನು ತೆಗೆದುಕೊಳ್ಳುತ್ತಿಲ್ಲ ಎಂದು ಹೇಳಿದ್ದೇವೆ. ಹಿಂದೆ ಎಸ್.ಸಿ.ಗೆ ಲಂಬಾಣಿ ಕೋಮು ಸೇರದಿರತಕ್ಕಂಥ ವಿಚಾರ ಇತ್ತು. ಬಾಂಬೆ ಕರ್ನಾಟಕ ಏರಿಯಾದಲ್ಲಿ ಒಂದು ರೀತಿ ಇದ್ದರೆ, ಹಳೇ ಮೈಸೂರು ರಾಜ್ಯದಲ್ಲಿ ಒಂದು ರೀತಿ ಇತ್ತು. ಈಗ ಅದನ್ನು ಒಂದೇ ವರ್ಗಕ್ಕೆ ತಂದಿದ್ದೇವೆ. ಕಾನೂನು ಬದಲಾವಣೆ ಮಾಡಿದ್ದೇವೆ. ಎಸ್.ಸಿ. ಎಂದರೆ, ಹರಿಜನ, ಲಂಬಾಣೀಸ್ ಇತ್ಯಾದಿ ಕೆಲ ವರ್ಗಗಳನ್ನು ನಾವು ಸೇರಿಸಿ ಇಟ್ಟಿದ್ದೇವೆ. ಆದರೆ ಅಲ್ಲೇನೆ ಎಡ, ಬಲ, ಇತ್ಯಾದಿ ಇವೆ ಎಂಬ ಅಭಿಪ್ರಾಯವನ್ನೂ ಕೂಡ ನಾವು ಗಣನೆಗೆ ಒಂದೊಂದು ಸಾರಿ ತೆಗೆದುಕೊಳ್ಳಬೇಕಾಗುತ್ತದೆ. ನ್ಯಾಯ ಕೊಡುವ ಸಂದರ್ಭದಲ್ಲಿ ಆ ವರ್ಗದ ಅಭ್ಯರ್ಥಿಗಳೇ ಇಲ್ಲ ಎಂದರೆ ಏನೂ ಮಾಡುವುದಕ್ಕೆ ಬರುವುದಿಲ್ಲ, ಇದ್ದಾರೆ ಎಂದು ಕಂಡು ಬಂದಾಗ ನ್ಯಾಯ ಕೊಡತಕ್ಕದ್ದು ಸರಕಾರದ ಆದ್ಯ ಕರ್ತವ್ಯವಾಗುತ್ತದೆ. ಈ ನೀತಿಯನ್ನು ಬಿಟ್ಟು ಹೋಗುವುದಕ್ಕೆ ನಾವು ತಯಾರಾಗಿಲ್ಲ. ಅದಕ್ಕಾಗಿ ಹೇಳಿದ್ದು, ಈ ವಿಚಾರವನ್ನು ಗಮನಿಸಿ ಪಿ.ಎಸ್.ಸಿ.ಯವರ ಗಮನಕ್ಕೂ ನಾವು ತಂದಿದ್ದೇವೆ. ಅಲ್ಲಿ ಅಭ್ಯರ್ಥಿಗಳಿದ್ದರೂ ಏತಕ್ಕೆ ಮಾಡಲಿಲ್ಲ, ನೀವು ಮಾಡಬೇಕಾಗಿತ್ತು ಎಂಬ ಮಾತನ್ನು ನಾವು ಹೇಳಿದ್ದೇವೆ. ಲಂಬಾಣಿ ಕೋಮಿನವರು ಇದ್ದರೂ ಕೂಡ ಏತಕ್ಕೆ ಮಾಡಲಿಲ್ಲ, ಆಮೇಲೆ ಸುಡುಗಾಡು ಸಿದ್ಧರು ಎನ್ನತಕ್ಕಂಥ ಜಾತಿಯವರು ಎಲ್ಲೋ ಒಬ್ಬೊಬ್ಬರು ಅಪರೂಪವಾಗಿ ಬರುತ್ತಾರೆ. ಆ ಸಂದರ್ಭ ನೋಡಿ ಕಾಯುತ್ತಿರಬೇಕು, ಬಂದಾಗ ಚಕ್ ಎಂದು ಹಿಡಿಯಬೇಕು. ಸೋಸಿಯಲ್ ಜಸ್ಟೀಸ್ ಅಥವಾ ಸಾಮಾಜಿಕ ನ್ಯಾಯಎಂದರೆ, ಸಮಾಜದಲ್ಲಿ ಶತಮಾನಗಳಿಂದ ತುಳಿತಕ್ಕೆ ಸಿಕ್ಕಿ ಜರ್ಝರಿತವಾಗಿ ಹೋಗಿರತಕ್ಕಂಥ ವರ್ಗಗಳು ಏನು ಇವೆ, ಆ ವರ್ಗದ ಜನ ಅಪರೂಪವಾಗಿ ಸಿಕ್ಕಿರತಕ್ಕಂಥ ಸಂದರ್ಭ ಬಂದಾಗ ಈ ವರ್ಗವನ್ನು ಹುಡುಕಿ ಹುಡುಕಿ ನ್ಯಾಯ ಕೊಡುವುದೇ ಸಾಮಾಜಿಕ ನ್ಯಾಯ, ಇನ್ನೆಂಥಹದು ಸಾಮಾಜಿಕ ನ್ಯಾಯ? ಸೋಷಿಯಲ್ ಜಸ್ಟೀಸ್ ಎಂಬುದು

ಈ ದೇಶದಲ್ಲಿ ಎಲ್ಲಿ ಸಿಗುತ್ತದೆ? ಎಲ್ಲಿಂದ ತರಬೇಕಾಗುತ್ತದೆ? ಇದನ್ನು ನಾವು ಗಮನಿಸಬೇಕು. ಇದೇ ಸಾಮಾಜಿಕ ನ್ಯಾಯದ ಅರ್ಥದ ಹಿನ್ನೆಲೆಯಲ್ಲಿ ನಾವು ವಿಚಾರ ಮಾಡುತ್ತೇವೆ, ನ್ಯಾಯ ಕೊಡತಕ್ಕ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ. ಈವಿಚಾರ ಪಿ.ಎಸ್.ಸಿ.ಗೆ ಇರಬೇಕು, ನೇಮಕಾತಿ ಸಮಿತಿಗಳಿಗೆ ಇರಬೇಕು. ನಾವು ಸ್ವಲ್ಪ ತಡ ಮಾಡಿದ್ದೇವೆ. ಏತಕ್ಕೆಂದರೆ, ಕೆಲವಾರು ವಿಚಾರದಲ್ಲಿ ನ್ಯಾಯ ಕೊಡತಕ್ಕಂಥ ಸಂದರ್ಭದಲ್ಲಿ, ಭಿನ್ನ ಭಾವವನ್ನು ಅಂದರೆ ನಗರ ಪ್ರದೇಶಗಳು ಬೇರೆ, ಗ್ರಾಮೀಣ ಪ್ರದೇಶಗಳು ಬೇರೆ, ಆ ಮಕ್ಕಳು ಬೇರೆ, ಈ ಮಕ್ಕಳು ಬೇರೆ ಎಂಬ ವಿಚಾರ ನಾವು ಇಟ್ಟಿಲ್ಲ. ಆದರೆ ಗ್ರಾಮೀಣ ಪ್ರದೇಶದಲ್ಲಿ ಇವತ್ತು ವಿದ್ಯೆ ಓದತಕ್ಕಂಥ ಸೌಲಭ್ಯ, ನಂಬರ್ಸ್‌ನ್ನು ಜಾಸ್ತಿ ತೆಗೆಯುವುದಕ್ಕಾಗಲಿ, ಜಾಸ್ತಿ ಮಾರ್ಕ್ಸ್ ತೆಗೆಯುವುದಕ್ಕಾಗಲಿ ಅವರಿಗೆ ವ್ಯವಸ್ಥೆ ಏನಿದೆ? ಚೆನ್ನಾಗಿ ಮಾಡಿಲ್ಲ ಎಂದು ಹೇಳುವುದು ಬಹಳ ಸುಲಭ ಆದರೆ ಅವರು ಓದತಕ್ಕಂಥ ಪರಿಸ್ಥಿತಿ ಅಲ್ಲಿ ಇದೆಯೋ ಎಂಬುದು ವಾಸ್ತವಾಂಶ. ಅದನ್ನು ನೋಡಿದರೆ ಆಒಂದು ಹೆಣ್ಣು ಮಗು ಅಥವಾ ಗಂಡು ಮಗು ಹೆಚ್ಚು ಮಾರ್ಕ್ಸ್ ತೆಗಿಯುವುದಕ್ಕೆ ಆಗುವುದಿಲ್ಲ. ಆದರೆ ಪಟ್ಟಣ ಅಥವಾ ನಗರ ಪ್ರದೇಶಗಳಲ್ಲಿ ಇರತಕ್ಕಂಥವರಿಗೆ ಸ್ವಲ್ಪ ಸೌಲಭ್ಯಗಳು ಜಾಸ್ತಿ ಇರುತ್ತವೆ. ಕಾನ್ವೆಂಟ್ ಸ್ಕೂಲ್ಸ್ ಮತ್ತೊಂದು ಇತ್ಯಾದಿ ಇತ್ಯಾದಿ. ಹಿಂದೆ ಒಂದು ಸಲ ನಾನೇ ಹೇಳಿದ್ದೇನೆ. ಕೌನ್ಸಿಲ್‌ನಲ್ಲಿ ಈ ವಿಚಾರ ಬಂತು. ಪಕ್ಷಾತೀತವಾಗಿ ವಿರೋಧಪಕ್ಷದ ನಾಯಕರಾದ ಶ್ರೀಮಾನ್ ನಾಣಯ್ಯನವರು ಒಂದು ಮಾತನ್ನು ಬಹಳ ಚೆನ್ನಾಗಿ ಹೇಳಿದರು. ಎಲ್ಲರೂ ಒಪ್ಪಿಕೊಂಡರು. ಇವತ್ತು ನಾವು ಮೆಡಿಕಲ್ ಕಾಲೇಜು, ಎಂಜಿನಿಯರಿಂಗ್ ಕಾಲೇಜುಗಳಿಗೆ ಪ್ರವೇಶಾವಕಾಶ ಕೊಡಬೇಕೆಂದರೆ ನಂಬರ್‌ಗಳ ಆಧಾರದ ಮೇಲೆ ಕೊಡುತ್ತೇವೆ. ಸರಕಾರಿ ಸೇವೆಗೆ ಅವಕಾಶ ಕೊಡುವುದು ನಂಬರ್‌ಗಳ ಮೇಲೆ ಕೊಡುತ್ತೇವೆ. ಆದರೆ ಅಲ್ಲಿ ನಂಬರ್ ತೆಗೆಯತಕ್ಕಂಥ ವ್ಯವಸ್ಥೆ ಏನಿದೆ ಎನ್ನುವುದರ ಬಗ್ಗೆ ನಾವು ವಿಚಾರ ಮಾಡೋಣ. ನಾನು ಒಂದೊಂದು ಸಾರಿ ಸಾಮಾನ್ಯರಿಗೆ ಅರ್ಥ ಮಾಡುವ ರೀತಿಯಲ್ಲಿ ಆಡುತ್ತಿರುತ್ತೇನೆ. ತಮ್ಮ ತಮ್ಮ ರೀತಿಯಲ್ಲಿ ತಾವು ಕೂಡ ಆಡುತ್ತಿರುತ್ತೀರಿ. ನನ್ನ ರೀತಿಯಲ್ಲಿ ಒಂದು ಮಾತನ್ನು ನಾನು ಆಡುತ್ತೇನೆ. ಒಂದು ಮಗು ನಗರ ಪ್ರದೇಶದಲ್ಲಿ ಹುಟ್ಟಿ ಬರಬೇಕಾದರೆ ಅದು ಏನು ತೆಗೆದುಕೊಂಡು ಹುಟ್ಟಿ ಬರುತ್ತದೆ ಎಂದು ವಿಚಾರ ಮಾಡೋಣ. ಅಂದರೆ ಆ ಒಂದು ವಾತಾವರಣ, ಪರಿಸರ ಏನು ಎಂದರೆ ಆ ಮಗು ಹುಟ್ಟಬೇಕಾದರೆ ಸ್ಲೇಟು, ಪುಸ್ತಕ ಕೈಯಲ್ಲಿ ಹಿಡಿದುಕೊಂಡೇ ಹುಟ್ಟಿ ಬರುತ್ತದೆ. ನಾವು ವಿಚಾರ ಮಾಡೋಣ. ಕಣ್ಣು ಬಿಟ್ಟ ತಕ್ಷಣ ಸ್ಲೇಟು ಬುಕ್ಕು ನೋಡುತ್ತಾರೆ. ಅದರ ಅರ್ಥ ಏನೆಂದರೆ, ಕಣ್ಣು ಬಿಟ್ಟಾಗ ಕಾಣಿಸತಕ್ಕಂಥಾದ್ದು ಸ್ಲೇಟ್ ಪುಸ್ತಕ ವಿದ್ಯಾವಂತ ತಂದೆ ತಾಯಿಗಳು. ಇದು ಸಂತೋಷ ಪಡತಕ್ಕಂಥ ವಿಚಾರ. ನಾನು ಇದನ್ನು ಖಂಡಿಸುತ್ತಿಲ್ಲ. ನಾನು ಇದನ್ನು ನಿಜವಾಗಿಯೂ ಸ್ವಾಗತ ಮಾಡುತ್ತೇನೆ. ಇದು ಬಹಳ ಸಂತೋಷದ ವಿಚಾರ. ಆ ಮಗು ಸ್ಲೇಟು ಪುಸ್ತಕ ನನ್ನದು ಎಂದು ಅಲ್ಲಿಂದ ಪ್ರಾರಂಭ ಮಾಡುತ್ತದೆ. ಅಲ್ಲಿಂದ ಓದುವುದಕ್ಕೆ ಪ್ರಾರಂಭ ಮಾಡುತ್ತದೆ. ಅದಕ್ಕೆ ತಂದೆ ತಾಯಿಗಳ ಆಶೀರ್ವಾದ ಇರುತ್ತದೆ. ಆ ಮಗು ಒಳ್ಳೆಯ ರೀತಿಯಲ್ಲಿ ಬುದ್ಧಿವಂತಿಕೆಯ ದೃಷ್ಟಿಯಿಂದ, ವಿದ್ಯೆ ಪಡೆಯುವ ದೃಷ್ಟಿಯಿಂದ ಬೆಳವಣಿಗೆಯಾಗುತ್ತದೆ. ಅದರ ತಂದೆತಾಯಿಗಳು ವಿಚಾರ ಮಾಡುತ್ತಾರೆ. ಯಾವ ಕಾನ್ವೆಂಟ್ ಬೆಸ್ಟ್, ಇಲ್ಲವೇ ಮತ್ತೊಂದು ಸ್ಕೂಲ್ ಬಹಳ ಒಳ್ಳೆಯದು. ಇತ್ಯಾದಿ ಶಾಲೆಗಳಿಗೆ ಮಕ್ಕಳನ್ನು ಸೇರಿಸತಕ್ಕಂಥಾ ಸದಾವಕಾಶ ಇಲ್ಲಿ ಜಾಸ್ತಿ ಇದೆ. ನಂಬರುಗಳನ್ನು ಕೊಡತಕ್ಕಂಥಾದ್ದರಲ್ಲಿ ಇದೇ ವಿಚಾರದಾರೆ ಇದೆ. ಇದೇ ಸ್ಲೇಟ್ ಪುಸ್ತಕಗಳು ಹೆಚ್ಚಿನ ಅಂಕಗಳನ್ನು ಮಗು ಪಡೆಯುವುದಕ್ಕೆ ಬುದ್ಧಿ ಬೆಳೆಯುವುದಕ್ಕೆ ಕಾರಣವಾಗುತ್ತದೆ. ಆದರ ಆಧಾರದ ಮೇಲೆ ನಾವು ಇವತ್ತು ಸರ್ಕಾರಿ ಸೇವೆ ಇರಬಹುದು ಸರ್ಕಾರಿ ಸೀಟಿಗೆ ಸೀಮಿತಗೊಳಿಸಿ ಹೇಳುವಹಾಗಿದ್ದರೆ ಮೆಡಿಕಲ್ ಇಂಜಿನಿಯರಿಂಗ್ ಕಾಲೇಜುಗಳು ಇರಬಹುದು, ನಾವು ಸೀಟ್ ಕೊಡುತ್ತೇವೆ, ಅವರು ಪಡೆಯುತ್ತಾರೆ, ಮೆರಿಟ್ ಕೋಟ ಇತ್ಯಾದಿ ಎಲ್ಲಾ ಪಡೆಯುತ್ತಾ ಹೋಗುತ್ತಾರೆ. ಅದರಲ್ಲೂ ಅಗ್ರಿಕಲ್ಚರ್ ಕಾಲೇಜು ಇರಬಹುದು. ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಮುಖೇನ ಅವರ ಗಮನ ಸೆಳೆಯುತ್ತೇವೆ. ಹಳ್ಳಿಯಲ್ಲಿ ನಮ್ಮ ಮಕ್ಕಳು ಯಾವ ರೀತಿಯಲ್ಲಿ ಹುಟ್ಟುತ್ತವೆ? ಅವು ಅಲ್ಲಿ ಏನು ತೆಗೆದುಕೊಂಡು

ಹುಟ್ಟಿ ಬರುತ್ತವೆ? ಹಳ್ಳಿಯಲ್ಲಿ ಏನು ತೆಗೆದುಕೊಂಡು ಹುಟ್ಟಿಬರುತ್ತವೆ ಎಂದರೆ, ಮಣ್ಣಿನ ಹೆಂಟೆ, ಸಗಣಿ, ಬಾರಿಕೋಲು, ಕಸ, ಗೊಬ್ಬರ, ಎತ್ತು , ನೇಗಿಲು, ನಗ, ಗಾಡಿ ಎತ್ತು ಇವನ್ನು ತೆಗೆದುಕೊಂಡು ಹುಟ್ಟಿ ಬರುತ್ತವೆ. ಅರ್ಥಾತ್ ಅಲ್ಲಿ ಒಂದು ಮಗು ಹುಟ್ಟಿ ಕಣ್ಣು ಬಿಟ್ಟ ತಕ್ಷಣ ಕಾಣತಕ್ಕಂಥ ವಸ್ತುಗಳು ಇವೆಲ್ಲ. ಈ ವಸ್ತುಗಳು ಯಾವುವು ಕೂಡ ನಂಬರುಗಳು ಮತ್ತೊಂದು ಕೊಡುವುದಿಲ್ಲ, ಮಾರ್ಕ್ಸ್ ಕೊಡುವುದಿಲ್ಲ. ಇನ್ನು ಸ್ಕೂಲ್ ವಿಚಾರ ಮಾಡೋಣ. ಯಾವುದೇ ಪಕ್ಷದ ಸರ್ಕಾರ ಇರಬಹುದು. ನಾವು ಬಹಳ ವರ್ಷಗಳಿಂದ ಸ್ಕೂಲ್ಸ್‌ನ್ನು ಇಟ್ಟಿದ್ದೇವೆ, ಆ ಸ್ಕೂಲ್‌ಗಳ ಬಗ್ಗೆ ಅನೇಕ ಸಾರಿ ಹೇಳಿದ್ದೇವೆ. ಅಲ್ಲಿ ಉಪಾಧ್ಯಾಯರು ಇಲ್ಲ, ಮಕ್ಕಳ ಸಂಖ್ಯೆ ಜಾಸ್ತಿ ಇದೆಯೆಂದು ಹೇಳಿದ್ದೇವೆ. ಮಕ್ಕಳ ಸಂಖ್ಯೆ ಜಾಸ್ತಿ ಇದ್ದೇ ಇದೆ. ಈ ದೇಶದಲ್ಲಿ ಮಕ್ಕಳ ಸಂಖ್ಯೆ ಕಡಿಮೆ ಆಗುವುದಿಲ್ಲ, ಅದಕ್ಕೇನೂ ಕೊರತೆ ಆಗುವುದಿಲ್ಲ. ಇದರ ಬಗ್ಗೆ ನಾವು ಭಾಷಣ ಮಾಡುತ್ತಲೇ ಇದ್ದೇವೆ. ಅದು ಒಂದು ರೀತಿ ಬೋರ್‌ವೆಲ್ ತೆಗೆದ ಹಾಗೆ. ಅಲ್ಲಿ ಬೋರ್‌ವೆಲ್‌ಗಳನ್ನು ತೆಗೆಯುತ್ತಿದ್ದರೆ ಆ ಲೈನ್ ಮೇಲೆ ಒತ್ತಡ ಬೀಳುತ್ತಿರುತ್ತದೆ. ಹಾಗೆ ಮಕ್ಕಳು ಹುಟ್ಟುತ್ತವೆ. ವರ್ಷಕ್ಕೆ ಒಂದೊಂದು ಮಗು ಹುಟ್ಟುತ್ತಿರುತ್ತದೆ. ನಾವು ಒಂದು ಆಸ್ಟ್ರೇಲಿಯಾ ದೇಶವನ್ನು ತಯಾರು ಮಾಡಿ ಮಾಡಿ ಕೊಡುಗೆಯಾಗಿ ಕೊಡುತ್ತಿದ್ದೇವೆ. ನಾವು ಇಷ್ಟೆಲ್ಲ ಮಾತನಾಡುತ್ತೇವೆ. ನಮ್ಮ ಪರಿಸ್ಥಿತಿ ಯಾವ ಮಟ್ಟಕ್ಕೆ ಹೋಗಿದೆ ಎಂದರೆ ಅನೇಕ ಆಸ್ಟ್ರೇಲಿಯಾ ದೇಶಗಳನ್ನು ಸೇರಿಸಿ ನಮಗೆ ಸ್ವಾತಂತ್ರ್ಯ ಪೂರ್ವ ಮತ್ತು ನಂತರ ತೆಗೆದುಕೊಂಡು ಬಂದು ತುಂಬಿ, ಯಾವ ಪಕ್ಷದ ಸರ್ಕಾರ ಬಂದರೂ ಕೂಡ, ಅದು ಇಲ್ಲಿರಬಹುದು, ಉತ್ತರ ಪ್ರದೇಶ ಇರಬಹುದು, ಮಹಾರಾಷ್ಟ್ರ ಇರಬಹುದು ಅಥವಾ ತಮಿಳುನಾಡು ಇರಬಹುದು, ರಾಜಸ್ತಾನ್ ಇರಬಹುದು, ಕೇರಳ ಇರಬಹುದು ಯಾವುದೇ ರಾಜ್ಯ ಯಾವುದೇ ಪಕ್ಷದ ಸರ್ಕಾರ ಇರಬಹುದು, ಇದನ್ನು ನಿಭಾಯಿಸುವುದಕ್ಕೆ ಬರುವಹಾಗಿಲ್ಲ. ಅಂತಹ ಪರಿಸ್ಥಿತಿ ಇದೆ. ಈಗಲೇ ಪರಿಸ್ಥಿತಿ ತುಂಬಾ ಬಿಗಡಾಯಿಸಿಬಿಟ್ಟಿದೆ. ಅದು ಏತಕ್ಕೂ ಬರುವ ಹಾಗಿಲ್ಲ ಎಂದರೆ ನಾವು ಸೈಟ್ ಕೊಡಬೇಕಾದರೆ ಸೈಟುಗಳು ಸಾಕಾಗುತ್ತಿಲ್ಲ, ಮನೆ ಕೊಡಬೇಕೆಂದರೆ ಅದು ಸಾಕಾಗುತ್ತಿಲ್ಲ. ಯಾವುದು ಕೊಡಬೇಕಾದರೂ ಸಾಕಾಗುತ್ತಿಲ್ಲ. ಹೀಗೆ ನಾವು ಯೋಜನೆ ಹಾಕಿ ಹಾಕಿ ಯಾವ ಮಟ್ಟಕ್ಕೆ ಬಂದಿದ್ದೇವೆ ಎಂದರೆ, ಆ ಪಕ್ಷದವರು ಆ ಕೇರಿಗೆ ಹತ್ತು ಮನೆಗಳನ್ನು ಕೊಟ್ಟಿದ್ದರೆ ನಾವು 20 ಮನೆ ಕೊಟ್ಟಿದ್ದೇವೆ. ಆದ್ದರಿಂದ ನೀವು ಜಾಸ್ತಿ ವೋಟು ಕೊಡಬೇಕು ಎಂದು ಓಟು ತೆಗೆದುಕೊಂಡು ಬಂದು ನಾವು ಅಧಿಕಾರ ಹಿಡಿದುಕೊಳ್ಳುತ್ತೇವೆ. ಇದು ವಾಸ್ತವಾಂಶ. ಆದರೆ ಕೇರಿಯಲ್ಲಿ ಉಳಿದಿರತಕ್ಕಂಥವರಿಗೆ ಇನ್ನೂ ಸೈಟ್ ಮನೆ ಸಿಕ್ಕಿಲ್ಲ, ಅವರು ಗುಡಿಸಲಲ್ಲಿ ಇದ್ದಾರಲ್ಲ ಅವರ ಬಗ್ಗೆ ಏನು ಎನ್ನತಕ್ಕಂಥ ವಿಚಾರ ಮಾಡುವ ಶಕ್ತಿ, ಸರ್ವಶಕ್ತಿ, ರಾಜಕೀಯ ಪ್ರಜ್ಞೆ ಪಾಪ ಅವರಿಗೆ ಉಳಿದಿಲ್ಲ. ಕೊಡುವ ಪ್ರಯತ್ನ ವಾನು ಮಾಡುತ್ತೇವೆ ಎಂದು ಭಾಷಣ ಮಾಡಿ ಮಾಡಿ ಓಟು ತೆಗೆದುಕೊಂಡು ಬರುವುದು ನಮಗೂ ತಪ್ಪಿಲ್ಲ. ನಾವು ಕೂಡ ಇದರಲ್ಲಿ ಸಿಕ್ಕಿಹಾಕಿಕೊಂಡು ನರಳುತ್ತಿದ್ದೇವೆ. ನಮ್ಮ ರಾಷ್ಟ್ರದ ರ್‍ಾಜಕಾರಣ ಪರಿಸ್ಥಿತಿ ಯಾವ ಮಟ್ಟಕ್ಕೆ ಹೋಗಿದೆ, ಅಲ್ಲಿರತಕ್ಕಂತಹ ಒಂದು ಪರಿಸ್ಥಿತಿ ಏನು ಎಂದು ನಾನು ಇಲ್ಲಿ ಹೇಳುವುದಾದರೆ, ಹಳ್ಳಿಯಲ್ಲಿರತಕ್ಕಂಥ ಒಬ್ಬ ವ್ಯಕ್ತಿಯನ್ನು ಅಂದರೆ ಪರಸ್ಯಪ್ಪನನ್ನು ಚುನಾವಣೆಯ ಕಾಲದಲ್ಲಿ ಎಷ್ಟು ಗೌರವವಾಗಿ ಕಾಣುತ್ತೇವೆ, ಚುನಾವಣೆ ಮುಗಿದ ಮೇಲೆ ಅವನು ಸಿಗುವುದಿಲ್ಲ. 5 ವರ್ಷಕ್ಕೆ ಒಂದು ಸಾರಿ ಚುನಾವಣೆ ಬರುತ್ತದೆ. ಇದು ವಾಸ್ತವಾಂಶ ಚುನಾವಣೆ ಒಂದೊಂದು ಸಾರಿ 2 ವರ್ಷಕ್ಕೆ ಬರುತ್ತದೆ. ಸರ್ಕಾರ ಬಿದ್ದಾಗ 6 ತಿಂಗಳಿಗೂ ಬರಬಹುದು, 3 ವರ್ಷಕ್ಕೂ ಬರಬಹುದು. ಹಳ್ಳಿಯಲ್ಲಿ ಅವನನ್ನು ಹೇಗೆ ಕರೆಯುತ್ತಾರೆಂದರೆ ಪರಸ್ಯಾ ಎಂದು ಏಕ ವಚನದಲ್ಲಿ ಕರೆಯುತ್ತಾರೆ. ಕರೆಯುವುದು ಇದು ಗ್ರಾಮೀಣ ಭಾಷೆ. ಪರಸ್ಯಾ ಎಂದು ಅವನನ್ನು ಏಕವಚನದಿಂದ ಕರೆಯುತ್ತಾರೆ. ಅವನು ಬಹುವಚನ ಎಂದೂ ಕಂಡಿಲ್ಲ, ಎಂದೆಂದೂ ಕಂಡಿರುವುದಿಲ್ಲ. ಪರಸ್ಯಾನನ್ನು ಕರೆಯೋ ಎನ್ನುತ್ತಾರೆ. ಅವನಿಗೂ ಕೂಡ ಹೀಗೆ ಕರೆಸಿಕೊಂಡು ರೂಢಿಯಾಗಿಬಿಟ್ಟಿರುತ್ತದೆ. ಏಕೆಂದರೆ ಅವನು ಹೆಬ್ಬೆಟ್ಟು ಒತ್ತುವವನು. ಅವನು ವಿದ್ಯೆಯಿಂದ ಬಹು ದೂರ ಇರತಕ್ಕಂಥ ಅಥವಾ ವಿದ್ಯೆಯಿಂದ ವಂಚಿತವಾಗಿರತಕ್ಕಂಥ ವರ್ಗಗಳ ಮಧ್ಯೆ ಹುಟ್ಟಿ ಬೆಳೆದು ಬಂದಿರತಕ್ಕಂಥವನು. ಅವನು ನಾಲ್ಕು

ಮುಕ್ಕಾಲು ವರ್ಷ ಪರಸ್ಯಾ ಆಗಿ ಏಕವಚನದಲ್ಲಿಯೇ ಉಳಿದಿರುತ್ತಾನೆ. ಚುನಾವಣೆ ಹತ್ತಿರ ಬಂದ ಹಾಗೆ ಪರಸ್ಯಾ ಹೋಗಿ ಪರಸ್ಯಪ್ಪ ಆಗುತ್ತಾನೆ. ಇನ್ನೇನು ಎಲೆಕ್ಷನ್ ಬಂತು, ಎಲೆಕ್ಷನ್ ಇನ್ನು 20 ದಿವಸ ಇದೆ ಎಂದಾಗ ಪರಸ್ಯಪ್ಪಾ ಎಂದು ಕರೆಯಲ್ಪಡುತ್ತಾನೆ. ಆಗ ಅವನಿಗೆ ಸ್ವಲ್ಪ ಗೌರವ ಸಿಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನೀವು ಏನೇನು ಮಾಡಿ ಅಧಿಕಾರಕ್ಕೆ ಬಂದಿದ್ದೀರಿ ಅದನ್ನು ಇಷ್ಟೊಂದು ವರ್ಣಿಸಿದ್ದೀರಲ್ಲಾ. ಮುಂದಾದರೂ ಅದಕ್ಕೆ ಏನಾದರೂ ಬದಲಾವಣೆ ತರುತ್ತೀರಾ, ಅದನ್ನು ಸ್ವಲ್ಪ ಹೇಳಿ.

ಶ್ರೀ ಎಸ್.ಬಂಗಾರಪ್ಪ:- ಇರಲಿ. ಯಡಿಯೂರಪ್ಪನವರೆ ವಾಸ್ತವಾಂಶ, ಪರಿಸ್ಥಿತಿ ಎನ್ನುವುದರ ವಿವರಣೆ ಕೊಡುತ್ತಿದ್ದೇನೆ. ನಾನು ಪಕ್ಷಾತೀತವಾಗಿ ಮಾತನಾಡುತ್ತಿದನೆ. ಆದರೆ ಒಬ್ಬ ವ್ಯಕ್ತಿಯನ್ನು ಯಾವ ರೀತಿಯಾಗಿ ಮಾಡುತ್ತದೆ ಈ ರಾಷ್ಟ್ರದ ರಾಜಕಾರಣ ಎನ್ನತಕ್ಕ ಮಾತನ್ನು ನಾನು ಹೇಳುತ್ತಿದ್ದೇನೆ. ಏಕೆಂದರೆ, ಅವನನ್ನು ಗಮನದಲ್ಲಿಟ್ಟು ನಾವು ಆಡಳಿತ ನಡೆಸತಕ್ಕಂಥ ವಿಚಾರ ಇದರಲ್ಲಿ ಆಗಿರತಕ್ಕಂಥಾದ್ದು. ಮಾನ್ಯ ಸಭಾಧ್ಯಕ್ಷಿಣಿಯವರೇ, ಚುನಾವಣೆ ಹತ್ತಿರ ಬಂದಹಾಗೆ ಪರಸ್ಯಾ ಹೋಗಿ ಪರಸಪ್ಪ ಆಗುತ್ತಾನೆ. ಏಕೆಂದರೆ ಎಲೆಕ್ಷನ್ 10 ದಿವಸ ಉಳಿದುಕೊಂಡಿದೆ. ಎಲೆಕ್ಷನ್ 3 ದಿವಸ ಉಳಿದುಕೊಂಡಿದೆ. ಅವನಿಗೆ ಗೌರವ ಜಾಸ್ತಿ ಏರುತ್ತಿದೆ, ರೇಟ್ ಏರುತ್ತಿದೆ, ನಾಳೆ ಚುನಾವಣೆ ಎಂದಾಗ ಪರಸಪ್ಪನವರು ಆಗಿಬಿಟ್ಟಿರುತ್ತಾರೆ. ಪರಸ್ಯಾ ಹೋಗಿ ಪರಸಪ್ಪನವರು ಆಗಿರುತ್ತಾರೆ. ಅಯ್ಯೋ ಬನ್ನಿ ಪರಸಪ್ಪನೋರೆ, ಕಾರು ಹತ್ತಿ ಎನ್ನುತ್ತಾರೆ. ಅವನು ಹತ್ತಲ್ಲ ಸ್ವಾಮಿ, ನನಗೆ ರೂಢಿ ಇಲ್ಲ ಎಂದರೆ ಕೇಳುವುದಿಲ್ಲ. ಈ ರಾಷ್ಟ್ರದ ರಾಜಕಾರಣೆ. ಎಲ್ಲಾರೂ ಆ ತಪ್ಪು ಮಾಡಿದ್ದಾರೆಂದು ನಾನು ಹೇಳುತ್ತಾ ಇಲ್ಲ. ಎಲ್ಲಾ ವ್ಯಕ್ತಿಗಳನ್ನು ಹಾಗೆ ಕರೆಯುತ್ತಾರೆಂದು ನಾನು ಹೇಳುತ್ತಿಲ್ಲ. ಎಲ್ಲಾ ರಾಜಕೀಯ ಪಕ್ಷಗಳವರು ತಪ್ಪು ಮಾಡಿದ್ದಾರೆ, ಎಲ್ಲಾ ರಾಜಕೀಯವಾಗಿ ಮಾಡಿದ್ದಾರೆ ಎಂದು ಹೇಳುತ್ತಿಲ್ಲ. ನಿಮ್ಮ ಬಗ್ಗೆ ಆಗಲೀ ಅಥವಾ ನಮ್ಮ ಬಗ್ಗೆ ಆಗಲೀ ನಾನು ಹೇಳುತ್ತಾ ಇಲ್ಲ. ಇದು ಆಗಿರತಕ್ಕಂಥಾ ಒಂದು ವಾಸ್ತವಾಂಶ. ಆಮೇಲೆ ಹೋಗಿ ಪರಪ್ಪನವರ್ ಆಗಿ ಕುಳಿತುಕೊಂಡು ಬಿಡುತ್ತಾರೆ. ಬೆಳಕು ಹರಿದರೆ ಓಟು ಹಾಕಬೇಕಾಗಿದೆ ಪರಸಪ್ಪನವರ ಗ್ರೇಡ್ ಏರಿದೆ. ಮತದಾನ ಬೆಳಿಗ್ಗೆ 8 ಗಂಟೆಗೆ ಸ್ಟಾರ್ಟ್ ಆಗುತ್ತದೆ. 4 ಗಂಟೆಗೆ ಕ್ಲೋಸ್ ಆಗಬೇಕು. ಪರಸಪ್ಪನವರು ವೋಟು ಹಾಕುವವರೆಗೂ ರೇಟ್ ಏರಿಕೊಂಡೇ ಇದೆ. 4 ಗಂಟೆ ಮುಗಿದ ತಕ್ಷಣವೇ ರೇಟ್ ಮತ್ತೆ ಡೌನ್‌ವರ್ಡ್ ಟ್ರೆಂಡ್ ತೆಗೆದುಕೊಳ್ಳುತ್ತದೆ. ನಾಲ್ಕೂವರೆ ಗಂಟೆಗಾಗಲೇ ಪರಸಪ್ಪನವರು ಹೋಗಿ ಪರಸ್ಯಪ್ಪ ಆಗಿದ್ದಾನೆ. 5 ಗಂಟೆ, 7 ಗಂಟೆ, 8 ಗಂಟೆಗೆ ಮತ್ತೆ ಪರಸ್ಯಾ ಆಗಿಯೇ ಉಳಿದುಕೊಂಡಿದ್ದಾನೆ. ಅಲ್ಲಿಗೆ ಫಿನಿಷ್‌ಡ. ಇದೊಂದು ಉದಾಹರಣೆ ಸಾಕು ತಪ್ಪಿತಸ್ಥರು ಯಾರೇ ಇರಬಹುದು. ಆದರೆ ಇದು ವಾಸ್ತವಾಂಶ, ಇದು ಸಮಾಜದಲ್ಲಿರಕ್ಕಂಥ ವಿಚಾರ ಎತಕ್ಕೆಂದರೆ ವಿದ್ಯೆ, ರಾಜಕೀಯ ಪರಿಜ್ಞಾನವನ್ನು ನಮ್ಮಂಥ ವರ್ಗಗಳು ಪಡೆಯುವುದಕ್ಕೆ ಇನ್ನೂ ಎಷ್ಟು ವರ್ಷಗಳು, ಎಷ್ಟು ದಶಕಗಳು ಬೇಕೋ ನನಗೆ ಗೊತ್ತಿಲ್ಲ. ನಾವೂ ನೀವು ಎಲ್ಲರೂ ಸೇರಿ ಪ್ರಯತ್ನ ಮಾಡಿದ್ದೇವೆ. ಆದರೆ ನಾವು ಎಲ್ಲೋ ಎಡವಿದ್ದೇವೆ, ತಪ್ಪಾಗಿದೆ, ನಮ್ಮ ಚಿಂತನೆಯ ಕೈ ಕಾಲು ಮುರಿದು ಬಿದ್ದಿದೆ. ಇನ್ನೂ ಕೂಡ ಅಕ್ಷರ ಜ್ಞಾನ ಪಡೆಯುವುದಕ್ಕಾಗಲಿಲ್ಲ. ಆಂಗ್ಲರ ಆಳ್ವಿಕೆಯಿಂದ ಬಿಡುಗಡೆಯಾದಂಥ ಸಮಯದಲ್ಲಿ ಶೇಕಡ 16,17,ಇದ್ದಂಥ ಅಕ್ಷರ ಜ್ಞಾನ ಹೋಗಿ ಶೇಕಡ 50,51 ವರೆಗೆ ಬಂದು ನಿಂತಿದ್ದೇವೆ. ಇನ್ನೂ 47,48,49 ರಷ್ಟು ಪರಸ್ಪರ ಎಡಗೈ ಹೆಬ್ಬೆಟ್ಟಿನ ಗುರುತಿಗೆ, ಮತ್ತೊಬ್ಬರ ಬರಹಕ್ಕಾಗಿ ಕಾಯತಕ್ಕಂಥ ವರ್ಗಗಳ ಮಧ್ಯೆ ನಾವೆಲ್ಲಾ ಇಲ್ಲಿದ್ದೇವೆ. ಇದು ಇರತಕ್ಕಂಥ ವಾಸ್ತವಾಂಶ. ಈ ವರ್ಗಗಳಿಗೆ ನಾವು ಸಾಮಾಜಿಕ ನ್ಯಾಯ ಕೊಡಬೇಕು, ವಿದ್ಯೆ ಕೊಡಬೇಕು. ಒಳ್ಳೆಯ ಆಡಳಿತ ಕೊಡಬೇಕು. ಅಲ್ಲಿ ತಪ್ಪುಗಳು ಇವೆ. ಅದಕ್ಕಾಗಿ ನಾನು ಹೇಳುವುದು ಏನೆಂದರೆ, ಈ ಎರಡೂ ವಿಚಾರಗಳನ್ನು ನಾವು ಗಮನಿಸಬೇಕು. ಇರತಕ್ಕಂಥ ಆಡಳಿತ ಯಂತ್ರದಲ್ಲಿ ಎರಡು ವಿಚಾರಗಳಿವೆ. ಒಂದನೆಯದು, ನಮ್ಮ ಪ್ರೊಸೀಜರ್ ಏನಿದೆ ಅದನ್ನು ಸಿಂಪ್ಲಿಫೈ ಮಾಡಬೇಕು. ಫೈಲುಗಳನ್ನು ಎಲ್ಲೆಲ್ಲೋ ತೆಗೆದುಕೊಂಡು ಹೋಗಿ ಸುತ್ತು

ಹಾಕುವುದಲ್ಲ. ನಾನು ಅದಕ್ಕಾಗಿ ಪಂಚಸೂತ್ರ ಎನ್ನತಕ್ಕಂಥ ಮಾತನ್ನು ಆಡಿದಾಗ ಪಂಚ ಶೀಲ ಎನ್ನತಕ್ಕಂಥ ಕಾಮೆಂಟ್ಸ್ ಬಂತು, ಬರಲಿ. ಆ ಕಾಮೆಂಟ್ಸ್ ಬಂದರೆ ನಾನು ಒಬ್ಬ ಆಡಳಿತಗಾರನಾಗಿ ಎಂದೂ ಯೋಚನೆಯನ್ನು ಮಾಡಬಾರದು. ಆದರೆ, ಒಳ್ಳೆಯ ಸಹೃದಯದಿಂದ ನೀವು ಸಲಹೆಗಳನ್ನು ಕೊಟ್ಟಾಗ ನಾವು ಸ್ವೀಕಾರ ಮಾಡಿದೆವು. ಆ ಹೃದಯ ಶ್ರೀಮಂತಿಕೆ ಇಟ್ಟೇ ನಾನು ಆಡಳಿತದ ಪರವಾಗಿ ಈ ಮಾತನ್ನು ಆಡುತ್ತಿದ್ದೇನೆ. ಆಡಳಿತದಲ್ಲಿ ಸರಿಯಾಗಿಲ್ಲ ಎನ್ನತಕ್ಕ ದೃಷ್ಟಿಯಿಂದಲೇ ಪಂಚಶೀಲ ತರಬೇಕೆಂದು ನಾನು ಮಾಡಿದ್ದು. ಈಗಾಗಲೇ ಬಿಲ್ ನಾವು ಮೂವ್ ಮಾಡಿದ್ದೇವೆ. ತಮಗೆ ಗೊತ್ತಿರುವ ಹಾಗೆ, ಅದು ಎರಡೂ ಸದನಗಳ ಜಂಟೀ ಪರಿಶೀಲನಾ ಸಮಿತಿ ಮುಂದೆ ಇವತ್ತು ಇದೆ. ಅದನ್ನು ಆದಷ್ಟು ಶೀಘ್ರವಾಗಿ ಮಾಡಿ ತಂದುಕೊಡಿ ಎನ್ನತಕ್ಕಂಥ ಒತ್ತಡವನ್ನು ನಾವು ಸರ್ಕಾರದವರು ಮಾಡುತ್ತೇವೆ. ಅದು ಇವತ್ತು ಸದನದ ಸ್ವತ್ತಾಗಿದೆ, ಸಮಿತಿಯ ಸ್ವತ್ತಾಗಿದೆ. ಅವರು ಅರ್ಜೆಂಟ್ ಆಗಿ ಸಿಟ್ಟಿಂಗ್ಸ್ ಮಾಡಿದ್ದಾರೆ. ಇನ್ನೊಂದೆರಡು ಸಿಟ್ಟಿಂಗ್ಸ್ ಮಾಡಿ ತಂದು ಕೊಡುತ್ತಾರೆಂದು ನಾನು ತಿಳಿದು ಕೊಂಡಿದ್ದೇನೆ. ಈ ಸಭೆ ಮುಂದೂಡಿದ ಮೇಲೆ ವಿಧಾನಪರಿಷತ್ತಿನ ಒಂದು ಚುನಾವಣೆಗೋಸ್ಕರ ಮತ್ತೆ ಸಧ್ಯದಲ್ಲೇ ಸದನ ಸೇರಲಿದೆ. ಅಷ್ಟರೊಳಗೆ ಅದು ಬಂದು ಬಿಟ್ಟರೆ, ಪಕ್ಷದವರು ಇದ್ದೀರಿ ಸಲಹೆಗಳನ್ನು ಕೊಡಿ, ತಮ್ಮ ಸಲಹೆಗಳನ್ನು ನೋಡಿ ಅದನ್ನು ಅನುಮೋದನೆ ಮಾಡುವುದಕ್ಕೆ ಸರ್ಕಾರ ತೆರೆದ ಹೃದಯದಿಂದ ಸದಾ ಸಿದ್ಧವಾಗಿದೆ. ಇದು ಒಂದು ವಿಚಾರ. ಇನ್ನೊಂದು ವಿಚಾರವೇನೆಂದರೆ, ಆಡಳಿತದ ಯಂತ್ರಕ್ಕೆ ಸಂಬಂಧಪಟ್ಟಂಥ ಲಂಚಗುಳಿತನ ಇವೊತ್ತು ಅಪಾದಮಸ್ತಕವಾಗಿ ಈ ಮಾತನ್ನು ನಾವು ಆಡುತ್ತಿದ್ದೇವೆ. ಈ ವಿಚಾರವು ಎಲ್ಲಾ ರಾಜ್ಯಗಳಲ್ಲಿ , ರಾಷ್ಟ್ರದಲ್ಲೂ ಚರ್ಚೆಗೆ ಒಳಪಟ್ಟಟಿರತಕ್ಕಂಥ ವಿಚಾರವಾಗಿದೆ. ಇದು ಚರ್ವಿತ ಚರ್ವಣಕ್ಕೆ ಒಳಗಾಗಿರತಕ್ಕಂಥ ವಿಚಾರವೂ ಆಗಿದೆ. ಇದನ್ನು ಒಬ್ಬ ವ್ಯಕ್ತಿ ಅಥವಾ ಕೆಲವೇ ಜವರು ಸರಿಮಾಡಲು ಬರುವುದಿಲ್ಲ. ಏಕೆಂದರೆ, ಅಧಿಕಾರದಲ್ಲಿ ಇರುವವರು ಯಾರು ಎಂಬುದನ್ನು ವಿಚಾರ ಮಾಡಬೇಕು. ನಾನು ಹೇಳಿದ ಹಾಗೆ, ಎಲ್ಲಾ ಅಧಿಕಾರಿಗಳೂ ಕೂಡ ಲಂಚಕೋರರಲ್ಲ. ಎಲ್ಲಾ ಅಧಿಕಾರಿಗಳೂ ಕೂಡ ಲಂಚದಿಂದ ದೂರವು ಇಲ್ಲ. ಈ ಮಾತನ್ನು ನಾವು ಆಡಿಕೊಳ್ಳೋಣ. Let us be very very fair in our approach. ಇವರು ಯಾರು? ನಮ್ಮ ಅಣ್ಣತಮ್ಮಂದಿರು ಅಕ್ಕತಂಗಿಯರು ಹೋಗಿ ಅಧಿಕಾರದಲ್ಲಿ ಸೇರಿಕೊಂಡಿದ್ದಾರೆ. ಹೀಗೆ ಸೇರಿರತಕ್ಕಂಥವರಲ್ಲಿ ವರ್ಗಗಳು ಇವೆ. ಕೆಲವರು ಕರ್ನಾಟಕ ಸರ್ಕಾರದವರು ನೇಮಕ ಮಾಡಿದವರಾದರೆ, ಇನ್ನು ಕೆಲವರು ಐ ಎ ಎಸ್ ಕೇಡರ್‌ನಿಂದ ಬಂದಿರತಕ್ಕಂಥವರು ಕೂಡ ಇದ್ದಾರೆ. ಇವೊತ್ತು ನಾವು ಇದನ್ನು ವಿಚಾರ ಮಾಡುವಂಥಾ ಸಂದರ್ಭದಲ್ಲಿ ಕೇಂದ್ರ_ರಾಜ್ಯಗಳವರು ಎಲ್ಲರೂ ಸೇರಿ ವಿಚಾರ ಮಾಡಿದರೆ ಮಾತ್ರ ಲಂಚಗುಳಿತನವನ್ನು ದೂರವಿಡಲು ಸಾಧ್ಯವಾಗುತ್ತದೆ, ಇಲ್ಲವಾದರೆ ಸಾಧ್ಯವಾಗುವುದಿಲ್ಲ. ಇದು ಈಗ ಬಹಳ ಆಳವಾಗಿ ಬೇರು ಬಿಟ್ಟುಕೊಂಡು ಕುಳಿತುಕೊಂಡು ಬಿಟ್ಟಿದೆ. ಆದರೆ ಇದನ್ನು ಧ್ವಂಸ ಮಾಡಬೇಕು, ಈ ಪಿಡುಗನ್ನು ತೊಡೆದುಹಾಕಬೇಕು. ಇದು ಅತ್ಯಗತ್ಯದ ವಿಚಾರ. ರಾಷ್ಟ್ರಮಟ್ಟದಲ್ಲಿ ಈ ಬಗ್ಗೆ ಚರ್ಚೆ ಮಾಡಿ ಒಂದು ಸಾರಿ ಕೈತೊಳೆದು ಬೆನ್ನು ಹತ್ತಬೇಕು. ಇದನ್ನು ನಿಲ್ಲಿಸಬೇಕು. ಈ ಬಗ್ಗೆ ತಮ್ಮ ಸಲಹೆಯನ್ನೂ ನಾನು ಅನುಮೋದನೆ ಮಾಡುತ್ತೇನೆ. ಹಾಗಾದರೆ ಅಲ್ಲಿಯವರೆಗೂ ನೀವು ಏನೂ ಮಾಡುವುದಿಲ್ಲವೇ, ಇದನ್ನು ಹಾಗೆಯೇ ಮುಂದುವರಿಯಲು ಬಿಡುತ್ತೀರಾ ಎಂಬ ವಾದವನ್ನು ತಾವುಗಳು ಇಡಬಹುದು. ಹಾಗೇನೂ ಇಲ್ಲ, ಈಗ ಇರತಕ್ಕಂಥ ಕೆಲವು ವ್ಯವಸ್ಥೆಗಳನ್ನು ನಾವು ಮಾಡಿಕೊಂಡಿದ್ದೇವೆ. ಮೊದಲು ಲಂಚ ನಿರೋಧ ಇಲಾಖೆ ಇತ್ತು. ಅದು ಹೋದ ಮೇಲೆ ಜಾಗೃತ ಆಯೋಗ ಎಂದು ನಾವು ಮಾಡಿದ್ದೇವೆ. ಆಂಟಿಕರೆಪ್ಷನ್ ಡಿಪಾರ್ಟ್‌ಮೆಂಟ್ ಉಪಯೋಗವಿಲ್ಲ, ವಿಜಿಲೆನ್ಸ್ ಕಮಿಶನ್ ಉಪಯೋಗವಿಲ್ಲ ಎಂದು ನಾವು ಲೋಕಾಯುಕ್ತವನ್ನು ಮಾಡಿದ್ದೇವೆ. ಅದರ ಮೇಲೆಯೂ ಇವೊತ್ತು ಆಪಾದನೆಗಳು ಇವೆ. ಇದನ್ನೆಲ್ಲಾ ನಾವು ಏಕೆ ಮಾಡುತ್ತಿದ್ದೇವೆ ? These are all trial and error methods. ಇದನ್ನು ನಾವು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ನಮ್ಮ ಆಡಳಿತ ಯಂತ್ರವನ್ನು ಸರಿಪಡಿಸತಕ್ಕಂಥ ದಿಶೆಯಲ್ಲಿ ಇಂಥ ಪ್ರಯೋಗಗಳನ್ನು ನಾವುಗಳು ಮಾಡುತ್ತಾ ಇದ್ದೇವೆ.

ನಿಜವಾಗಿಯೂ ಇಂಥ ಪ್ರಯೋಗಗಳಿಂದ ಲಂಚಕ್ಕೆ ಮುಕ್ತಿ ದೊರಕುವುದಿಲ್ಲ, ಜನರಿಗೆ ಮುಕ್ತಿ ಸಿಗುವುದಿಲ್ಲ. ಇದನ್ನು ನಾನು ಸಫಷ್ಟವಾಗಿ ಒಂದು ಒಳ್ಳೆಯ ಅಭಿಪ್ರಾಯವನ್ನು ಇಟ್ಟು ಆಡುತ್ತೇನೆ. ಈಗ ಲೋಕಾಯುಕ್ತವು ಸ್ಟಾಟ್ಯುಟರಿ ಬಾಡಿ. ಅದರ ಮೇಲೆ ನಮ್ಮ ಕಂಟ್ರೋಲ್ ಇಲ್ಲ. ಇದರ ಬಗ್ಗೆ ಕಾನೂನನ್ನು ಮಾಡಬೇಕಾದರೆ ಯಾರೂ ಕೂಡ ಅದಕ್ಕೆ ಕೈ ಹಾಕಬಾರದು ಎಂದು ಹೇಳಿದೆ. ಅದು ಯಾರ ಮೇಲೆ ಧಾಳಿ ಮಾಡಬೇಕು, ಕಂಪ್ಲೈಟ್ ಹೇಗೆ ಬರಬೇಕು, ಯಾವರೀತಿಯಲ್ಲಿ ಅವರು ಅಧಿಕಾರಿಗಳನ್ನು ನೇಮಕಮಾಡಿಕೊಳ್ಳಬೇಕು, ಯಾವರೀತಿ ಇನ್ವೆಸ್ಟಿಗೇಷನ್ ಮಾಡಬೇಕು, ತನಿಖೆ ಆದಮೇಲೆ "ಬಿ" ರಿಪೋರ್ಟ್‌ನ್ನು ಕೊಡಬೇಕೇ ಅಥವಾ ಬಿಡಬೇಕೇ ಎಂಬುದು ನಮಗೆ ಏನೂ ಸಂಬಂಧ ಇಲ್ಲ, ಲೋಕಾಯುಕ್ತವೇ ಸಂಪೂರ್ಣವಾಗಿ ಸರ್ವತಂತ್ರ ಸ್ವತಂತ್ರವಾಗಿದೆ. ನಮ್ಮ ಅಧೀನಕ್ಕೆ ಅದು ಒಳಪಟ್ಟಿಲ್ಲ. ಆದಕ್ಕೆ ನಾನು ಹೇಳಿದ್ದು. ಆಂಟಿ ಕರಪ್ಶನ್ ಡಿಪಾರ್ಟ್‌ಮೆಂಟ್ ಆದಮೇಲೆ, ವಿಜಿಲೆನ್ಸ್ ಕಮಿಶನ್ ಆದಮೇಲೆ ಇದನ್ನು ಮಾಡಿದರೆ ಒಳ್ಳೆಯದಾಗಬಹುದು ಎಂಬ ದೃಷ್ಟಿಯಿಂದ ಮಾಡಿದ್ದೇವೆ. ನಮ್ಮ ರೀತಿಯಲ್ಲಿಯೇ ಬೇರೆ ರಾಜ್ಯಗಳವರೂ ಕೂಡ ಮಾಡಿಕೊಂಡು ಅವರೂ ಕೂಡ ತೊಳಲಾಡುತ್ತಾ ಇದ್ದಾರೆ. ಇದನ್ನು ಅರ್ಥ ಮಾಡಿಕೊಳ್ಳಬೇಕು. ಇವೊತ್ತು ಅದರಿಂದ ಏನೂ ಆಗಿಲ್ಲ ಎಂದು ನಾನು ಹೇಳುತ್ತಾ ಇಲ್ಲ. ಆಂಟಿ ಕರಪ್ಷನ್ ಡಿಪಾರ್ಟ್‌ಮೆಂಟ್‌ನಿಂದ ಕೆಲವು ಉಪಯೋಗ ಆದವು, ವಿಜಿಲೆನ್ಸ್ ಕಮಿಶನ್‌ನಿಂದಲೂ ಕೆಲವು ಉಪಯೋಗ ಆದವು. ಅದರ ಮೂಲಕವೂ ಕೆಲವಕು ಉಪಯೋಗಗಳು ಆದುವು. ಏನೂ ಉಪಯೋಗವಾಗಿಲ್ಲ ಎಂಬ ಮಾತನ್ನು ನಾನು ಹೇಳುವುದಿಲ್ಲ, ನಾನು ಅಲ್ಲಗಳೆಯುತ್ತಲೂ ಇಲ್ಲ. ಆದರೆ ಯಾವ ನಿರೀಕ್ಷಾ ಮಟ್ಟವನ್ನು ನಾವು ಮಾಡಿದ್ದೇವೋ ಆ ಮಟ್ಟಕ್ಕೆ ಇವುಗಳಿಂದ ಬರುವುದಕ್ಕೆ ಸಾಧ್ಯ ಎಂಬ ನಂಬಿಕೆ ಇವೊತ್ತು ನಮಗೆ ಯಾರಿಗೂ ಉಳಿದಿಲ್ಲ. ಹಾಗಾದರೆ ಬೇರೆ ಏನಾದರೂ ಯೋಚನೆ ಮಾಡಲೇ ಬೇಕಾಗುತ್ತದೆ ಏನಾದರೂ ಮಾಡದಿದ್ದರೆ ಇದು ಬಗೆಹರಿಯುವುದಿಲ್ಲ. ಅಲ್ಲಿಯವರೆಗೆ ಈಗ ಇರತಕ್ಕಂಥ ವ್ಯವಸ್ಥೆಯ ಮೇಲೆ ನಂಬಿಕೆ ಇಟ್ಟುಕೊಂಡು ಮುಂದುವರಿಯಬೇಕಾಗುತ್ತದೆ. ಈ ಲೋಕಾಯುಕ್ತವನ್ನು ನಂಬಿಕೊಂಡು ನಾವು ಮುಂದಕ್ಕೆ ಹೋಗಬೇಕು ಇದೊಂದು ಸ್ಟ್ಯಾಟುಟರಿ ಬಾಡಿ, ಇಂಡಿಪೆಂಡೆಂಟ್ ಬಾಡಿ, ಕಾನೂನು ಪ್ರಕಾರವೇ ಅದು ಆಗಿದೆ. ಅದರ ಮೇಲೆ ನಂಬಿಕೆ ಇಟ್ಟುಕೊಂಡು ಮುಂದಕ್ಕೆ ಹೋಗತಕ್ಕಂಥ ಪ್ರಯತ್ನವನ್ನು ನಾವು ಮಾಡಬೇಕಾಗುತ್ತದೆ. ಅದರ ಉಪಯೋಗದ ಬಗ್ಗೆ, ಅಂಕಿಅಂಶಗಳ ಸಾಧನೆಯ ಬಗ್ಗೆ ಮುಂದೆ ಚರ್ಚೆಗೆ ಬಂದಂಥ ಕಾಲದಲ್ಲಿ ನಾವು ಇಟ್ಟುಕೊಳ್ಳೋಣ. ಅದಕ್ಕಿಂತ ಹೆಚ್ಚು ಹೇಳುವುದಕ್ಕೆ ಬರುವುದಿಲ್ಲ. ಹಾಗಾದರೆ ಅಲ್ಲಿಯವರೆಗೆ ಏನು ಮಾಡಬೇಕು ? ನಾವು ಇನ್ನೂ ಕೂಡ ಹೆಚ್ಚು ಹೆಚ್ಚಿನ ಅಧಿಕಾರವನ್ನು ಕೊಡತಕ್ಕಂಥಾದ್ದು, ರೈಡ್ಸ್ ಜಾಸ್ತಿ ಆಗತಕ್ಕಂಥಾದ್ದು, ಇದನ್ನು ಚರ್ಚೆ ಮಾಡಬಹುದೇ ವಿನಹ ಬೇರೆ ಹೆಚ್ಚೇನೂ ಚರ್ಚೆ ಮಾಡಲು ಬರುವುದಿಲ್ಲ. ಇದರ ಬಗ್ಗೆ ಒಂದು ದೊಡ್ಡ ಚರ್ಚೆಯಾಗಬೇಕೆಂದು ನನಗನ್ನಿಸುತ್ತದೆ. ಅದಕ್ಕೆ ಸರಕಾರವು ಸಿದ್ಧವಾಗಿದೆ. ಈ ಸದನದಲ್ಲಿ ಚರ್ಚೆಯಾಗಬೇಕು. ನಿಮ್ಮ ಸಲಹೆಗಳು ನಮಗೆ ಬೇಕು. ಯಾವರೀತಿ ಕಾನೂನುಗಳನ್ನು ಮಾಡಬೇಕೆಂಬುದನ್ನು ನಿಮ್ಮೊಂದಿಗೆ ಚರ್ಚಿಸಿ ಮಾಡಲು ಸರಕಾರ ಸಿದ್ಧವಾಗಿದೆ. ಈ ಮಾತನ್ನು ನಾನು ಜನರಲ್ ಆಗಿ ಹೇಳುವುದಕ್ಕೆ ಸಾಧ್ಯವೇ ಏನ: ಇದೇರೀತಿ ನೀವು ರೆಡಿಯಾಗಿದ್ದೀರಾ ಎಂದು ನೀವು ಯಾವ ಸರಕಾರಕ್ಕೆ ಪ್ರಶ್ನೆ ಕೇಳಿದರೂ ಅವರು ಹೇಳುವುದಕ್ಕೆ ತಯಾರಾಗುವುದಿಲ್ಲ. ಆದರಿಂದ ಲಂಚಗುಳಿತನ ಮುಂದುವರಿಯಲಿ ಎಂಬ ಅಭಿಪ್ರಾಯದಿಂದ ಈ ಮಾತುಗಳನ್ನು ನಾನು ಆಡುತ್ತಾ ಇಲ್ಲ. ಇದು ಇವೊತ್ತಲ್ಲ ನಾಳೆಗಾದರೂ ಕೊನೆಗೊಳ್ಳಲೇಬೇಕು. ಜನರು ಇದರಿಂದ ಉಳಿಯಲೇ ಬೇಕು. ಇವೊತ್ತು ಒಬ್ಬರು ಪೋಲೀಸ್ ಸ್ಟೇಶನ್‌ಗೆ ಹೋದರೆ, ತಾಲ್ಲೂಕು ಕಚೇರಿಗೆ ಹೋದರೆ, ಫಾರೆಸ್ಟ್ ಕಚೇರಿಗೆ ಹೋದರೆ, ಪಿ.ಡಬ್ಲ್ಯು.ಡಿ. ಕಚೇರಿಗೆ ಹೋದರೆ ಅವನಿಗೆ ಏನು ತೊಂದರೆ ಇದೆ ಎನ್ನುವ ವಿಚಾರ ನನಗೆ ಗೊತ್ತಿದೆ. ಅಲ್ಲಿರುವ ಅಧಿಕಾರಿಗಳು ಒಳ್ಳೆಯವರೂ ಇದ್ದಾರೆ, ಕೆಟ್ಟವರೂ ಇದ್ದಾರೆ. ಇಲ್ಲಿ ಲಂಚಗುಳಿತನದ ವಿಚಾರದಲ್ಲಿ ಬರೇ ಅಧಿಕಾರಿಗಳ ತಲೆ ಮೇಲೆ ಕಲ್ಲು ಹಾಕಿದರೆ ಸಾಲದು. ಕೈ ಎರಡೂ ಸೇರಿದಾಗ ಮಾತ್ರ ಚಪ್ಪಾಳೆ. ಈ ಮಾತನ್ನು ನಾನು ಹತ್ತಾರು ಬಾರಿ ಆಡಿದ್ದೇನೆ.

ಇವೊತ್ತು ಲಂಚ ತಿನ್ನುವವನು ಬಾಯಿ ತೆರೆದುಕೊಂಡು ಕುಳಿತುಕೊಂಡಿದ್ದರೆ, ಕೊಡುವವರು ಯಾರು? ಯಾವ ಸಮಾಜದ ಬಗ್ಗೆ ನಾವು ಗೌರವಯುತವಾಗಿ ಮಾತನಾಡುತ್ತೇವೆ. ಈ ಸಮಾಜದಲ್ಲಿರತಕ್ಕಂಥ ಗೌರವಾನ್ವಿತ ಜನರ ಪೈಕಿ ಯಾರಾದರೂ ಕೆಲವರು ಇರಲೇಬೇಕು. ಇವರೇ ಹೋಗಿ ಇದನ್ನು ಕೊಡುವವರು ಇದ್ದಾರೆ. ಕೊಡುವವರು ತಿನ್ನುವ ಕೈ ಕೆಳಿದರೆ ಕೊಡುವ ಕೈ ಮೇಲೆ ಹೋದಾಗಲೇ ಆ ಕೈ ಲಂಚ ತಿನ್ನುವುದಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ತಾವುಗಳು ಹೇಳಿದಂತೆ, ಇವೊತ್ತು ತೆಗೆದುಕೊಳ್ಳುವವನಿದ್ದಾನೆ, ಕೊಡುವವನೂ ಇದ್ದಾನೆ. ಕೊಡುವವನು ಅನಿವಾರ್ಯವಾಗಿ, ಸುತ್ತಿ ಸುತ್ತಿ, ತನಗೆ ರಕ್ಷಣೆ ಸಿಗದೆ, ಕೆಲಸವಾಗದಿದ್ದಾಗ ಲಂಚ ಕೊಡುವ ಸ್ಥಿತಿಗೆ ಬರುತ್ತಾನೆ. ನಾನು ತಮ್ಮಿಂದ ಭರವಸೆಯನ್ನು ಕೇಳುವಂಥಾದ್ದು ಏನೆಂದರೆ, ಯಾವುದೇ ವ್ಯಕ್ತಿ ಅರ್ಜಿ ಕೊಟ್ಟ ತತ್‌ಕ್ಷಣ ಕೆಲಸವೂ ಪ್ರಾಮಾಣಿಕವಾಗಿ ಆಗಬೇಕು. ಯಾವುದೋ ಕೋಟಿಗಟ್ಟಲೆ ಲಾಭ ಇರುವವರು ಲಂಚ ಕೊಟ್ಟು ಬೇಕಾದ್ದನ್ನು ಮಾಡಿಕೊಳ್ಳಲಿ. ಅದು ಮುಂದುವರೆದುಕೊಂಡು ಹೋದರೂ ನಾವು ಚಿಂತೆ ಮಾಡುವುದಿಲ್ಲ. ಆದರೆ ಸಾಮಾನ್ಯ ವ್ಯಕ್ತಿಗೆ ತನ್ನ ನಿತ್ಯ ಕೆಲಸಗಳು ಅರ್ಜಿ ಕೊಟ್ಟರೆ ಆಗುತ್ತದೆ ಎನ್ನುವ ಒಂದು ನಂಬಿಕೆ ಬಂದಾಗ ಲಂಚ ಕೊಡಲು ಮುಂದಾಗುವುದಿಲ್ಲ. ಹಾಗೆ ಲಂಚಗುಳಿತನ ಆಗದ ಹಾಗೆ ತಾವು ಏನಾದರೂ ಕಾರ್ಯಕ್ರಮ ರೂಪಿಸ ಬಹುದೇ, ಅಂಥ ಭರವಸೆಯನ್ನು ಕೊಡಬಹುದೆ ? ನಿಮ್ಮ ಅಧಿಕಾರಿಗಳಿಗೆ ಸರಿಯಾದಂಥ ತಿಳುವಳಿಕೆಯನ್ನು ಕೊಡಬಹುದೇ ? ದಯವಿಟ್ಟು ಅದರ ಬಗ್ಗೆ ತಾವು ಹೇಳಬೇಕು.

ಶ್ರೀ ಎಸ್.ಬಂಗಾರಪ್ಪ:-ಅಲ್ಲಿಯವರೆಗೆ ಬಡವರಿಗೆ ರಕ್ಷಣೆ ಸಿಗಬಹುದೇ ಎಂಬುದು ಮಾನ್ಯ ಸದಸ್ಯರ ಒಟ್ಟಾರೆ ಅಭಿಪ್ರಾಯ. ನಾನು ಅದಕ್ಕೆ ಹೇಳಿದ್ದು, ಅದರ ಬಗ್ಗೆ ನಾವು ಏನು ಮಾಡಬಹುದು ಎಂಬ ಬಗ್ಗೆ ಒಂದು ಚರ್ಚೆ ಮಾಡಿ ತಮ್ಮೆಲ್ಲರ ಸಲಹೆಗಳನ್ನು ಕೊಡಿ. I donot mind considering this issue as a major issue for discussion in this august House ಯಾವುದೇ ವಿಚಾರವಿದ್ದರೂ, ಏನಿದ್ದರೂ ಕೂಡ ಅದನ್ನು ಬದಿಗೊತ್ತಿ ಈ ಮಾತನ್ನು ನಾನು ತಮ್ಮ ಮುಂದಿಡುತ್ತಾ ಇದ್ದೇನೆ. ನಾವು ಈ ವಿಚಾರವನ್ನು ಮುಂದಿನ ಸದನದಲ್ಲಿ ತೆಗೆದುಕೊಳ್ಳೋಣ. ಈ ರಾಜ್ಯದಲ್ಲಿ ಚರ್ಚೆ ಕೂಡ ಮಾಡದಿರುವಂಥ ಯಾವುದೇ ಪಕ್ಷದವರು ಇರಬಹುದು, ನಿರ್ಭೀಯ ಪ್ರತಿನಿಧಿಗಳಾಗಿ ನಾವ್ಯಾರೂ ಕುಳಿತುಕೊಳ್ಳುವುದು ಬೇಡ. ನಾವು ಇವೊತ್ತು ಅಧಿಕಾರದಲ್ಲಿ ಇರಬಹುದು, ನಾಳೆ ಕಿತ್ತುಕೊಂಡು ಹೊರಟು ಹೋಗಿ ಬಿಡಬಹುದು. ಕೊನೆಯ ಪಕ್ಷ ಈ ವಿಚಾರದಲ್ಲಿ ನಾವು ಚರ್ಚೆ ಮಾಡಿದ್ದೇವೆ, ವಾಸ್ತವಾಂಶವನ್ನು ಚರ್ಚೆಗೆ ಒಳಪಡಿಸಿದ್ದೇವೆ, ಇದಕ್ಕೆ ದಾರಿಯನ್ನು ಪ್ರಾಮಾಣಿಕವಾಗಿ ಹುಡುಕುತ್ತಿದ್ದೇವೆ. ಆದರೆ ಒಂದು ವಿಷಯ ಏನೆಂದರೆ ಚರ್ಚೆಯು ಪ್ರಾಮಾಣಿಕವಾಗಿ ಇರಬೇಕು, ಪ್ರಾಮಾಣಿಕವಾಗಿ ಇದಕ್ಕೊಂದು ಉತ್ತರವನ್ನು ಹುಡುಕಬೇಕು, ಜನತೆಯ ನೋವನ್ನು, ವಾಸ್ತವಾಂಶವನ್ನು , ಪರಿಸ್ಥಿತಿಯನ್ನು ಗಮನದಲ್ಲಿಟ್ಟು, ನಾವು ಇದಕ್ಕೆ ಏನಾದರೂ ಮಾಡುವುದು ಬಹಳ ಒಳ್ಳೆಯದು. ನಾವು ಇದನ್ನು ಪ್ರಾರಂಭ ಮಾಡೋಣ. ಈ ದೇಶದಲ್ಲಿ ಯಾರು ಚರ್ಚೆ ಮಾಡಿದರೂ ಕೂಡ ನಮ್ಮ ಮೇಲೆ ಯಾರು ಬೇಕಾದರೂ ಆಪಾದನೆಗಳನ್ನು ಮಾಡಿದರೂ ನಾನು ಚಿಂತಿಸುವುದಿಲ್ಲ. ಆದರೆ ಚರ್ಚೆ ಮಾಡತಕ್ಕಂಥ ಅವಶ್ಯಕತೆ ಮಾತ್ರ ಇದೆ. ಈ ಚರ್ಚೆಯಿಂದ ದೂರ ಉಳಿಯತಕ್ಕಂಥ ಜನರಾಗಿ ನಾವು ಅಧಿಕಾರವನ್ನು ನಡೆಸುವುದು ಬೇಡ, ರಾಜಕೀಯ ಮಾಡುವುದು ಬೇಡ. ಅಧಿಕಾರ ಇರಲಿ, ಇಲ್ಲದಿರಲಿ, ನಿರ್ಭೀತಿಯಿಂದ ಇದರ ಬಗ್ಗೆ ಚರ್ಚೆ ಮಾಡೋಣ. ಈ ಬಗ್ಗೆ ನಮ್ಮ ಚಿಂತನೆಯನ್ನು ಮಾಡೋಣ. ನೀವುಗಳು ಒಪ್ಪುವ ಹಾಗಿದ್ದರೆ ಮುಂದಿನ ಸದನದಲ್ಲಿ ತರೋಣ, ಇದರ ಬಗ್ಗೆ ಚರ್ಚೆ ಮಾಡೋಣ. ನಾಳೆ ಯಾರಾದರೂ ನಮ್ಮ ಮೇಲೆ ಆಡಲಿ, ನಾನು ಆಡಿಸಿಕೊಳ್ಳಲು ತಯಾರಾಗಿದ್ದೇನೆ. ಆದರೆ ಅದರಿಂದ ಜನರಿಗೆ ಉಪಯೋಗವಾಗಬೇಕು. ಇದನ್ನು ಒಬ್ಬರ ಮೇಲೆ ಒಬ್ಬರು ಆಪಾದನೆ ಮಾಡುವುದಕ್ಕೋಸ್ಕರ ಸೀಮಿತಗೊಳಿಸಿದರೆ ಮಾತ್ರ ಇವೊತ್ತು ನಾವು ಸಿಕ್ಕಿಹಾಕಿಕೊಂಡ ಹಾಗೆ ನೀವು ನಾಳೆ ಸಿಕ್ಕಿ ಹಾಕಿಕೊಳ್ಳಬಹುದು, ಮತ್ತೊಬ್ಬರು ಸಿಕ್ಕಿ ಹಾಕಿಕೊಳ್ಳಬಹುದು. ಈ ಸಮಾಜದಲ್ಲಿ, ಈ ರಾಜಕಾರಣದಲ್ಲಿ ಈ ರೀತಿ ಆಗಬಹುದು. ಆದ್ದರಿಂದ

ದಯಮಾಡಿ ಈ ವಿಚಾರದಲ್ಲಿ ಏನು ಮಾಡಬೇಕೆಂಬುದನ್ನು ಚರ್ಚೆಗೆ ಒಳಪಡಿಸಿ, ಸಲಹೆಗಳನ್ನು ತೆಗೆದುಕೊಂಡು, ಕಾನೂನನ್ನು ಯಾವರೀತಿಯಲ್ಲಿ ಮಾಡಬೇಕು, ಹೇಗೆ ಮಾಡಬೇಕು, ಆಡಳಿತಯಂತ್ರವನ್ನು ಯಾವರೀತಿಯಲ್ಲಿ ಸರಿಮಾಡಬೇಕೆನ್ನುವಂಥ ಬಗ್ಗೆ ಸಲಹೆಗಳನ್ನು ಕೊಡತಕ್ಕಂಥ ಒಂದು ಸಂದರ್ಭ ತಮಗೂ ಬರಲಿ, ಅದಕ್ಕೆ ಉತ್ತರ ಕೊಡತಕ್ಕಂಥ ಸಂದರ್ಭ ನಮಗೂ ಬರಲಿ, ನಾನು ಬರೇ ಉತ್ತರ ಕೊಡುವುದು ಮಾತ್ರವಲ್ಲದೆ, ಚರ್ಚೆಯಲ್ಲಿ ನಾನು ಕೂಡ ಪಾಲ್ಗೊಳ್ಳುತ್ತೇನೆ. ನಾನು ಮುಖ್ಯಮಂತ್ರಿಯಾಗಿರಬಹುದು, ಆ ಚರ್ಚೆಯಲ್ಲಿ ಭಾಗವಹಿಸುವ ಸರ್ವಸ್ವತಂತ್ರ ನನಗೆ ಏನಿದೆ ಅದನ್ನು ನಾನು ಚಲಾವಣೆ ಮಾಡಬೇಕೆಂಬ ಆಸೆಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಏನಾದರೂ ಮಾಡಿ ಜನಕ್ಕೆ ಉಪಯೋಗ ಮಾಡೋಣ. ನೂರಕ್ಕೆ ನೂರರಷ್ಟು ಅಲ್ಲದಿದ್ದರೂ ಕೊನೆಯಪಕ್ಷ ಶೇಕಡ 70-75 ರಷ್ಟಾದರೂ ತೆಗೆದುಕೊಂಡು ಹೋಗಿದ್ದೇವೆ ಎನ್ನತಕ್ಕಂಥ ಒಂದು ಸ್ವ ಸಮಾಧಾನವನ್ನು ನಾವು ಪಡೆದುಕೊಳ್ಳೋಣ. ಈ ಒಂದು ದೃಷ್ಟಿಯಿಂದ ನಾನು ಈ ಮಾತನ್ನು ಪ್ರಾಮಾಣಿಕವಾಗಿ ಇಟ್ಟಿದ್ದೇನೆ. ಏತಕ್ಕೆ ಇಟ್ಟಿದ್ದೇನೆ ಎಂಬುದರ ವಾಸ್ತವಾಂಶ ನಿಮಗೂ ಗೊತ್ತು ನಮಗೂ ಗೊತ್ತು. ಅದನ್ನು ಮುಚ್ಚುಮರೆ ಇಲ್ಲದೆ ಈ ಮಾತನ್ನು ನಾನು ನಿಮ್ಮ ಮುಂದೆ ಆಡಿದ್ದೇನೆ. ಆದರೆ ಒಂದೇ ಒಂದು ಮಾತು. ಅಧಿಕಾರಿಗಳು ಬುಡದಿಂದ ತುದಿಯವರೆಗೆ ಅಂದರೆ ಈವತ್ತು ಬುಡದಿಂದ ಹಿಡಿದು ಕೊನೆಯ ಟೊಂಗೆಯ ತುದಿಯವರೆಗೆ ಒಳ್ಳೆಯವರೂ ಇದ್ದಾರೆ, ಕೆಟ್ಟವರೂ ಇದ್ದಾರೆ. ಜನರೂ ಕೂಡ ಲಂಚವನ್ನು ಕೊಡುವುದು ಇದೆ. ಕೆಲವರು ಲಂಚವನ್ನು ತೆಗೆದುಕೊಳ್ಳತಕ್ಕಂಥ ಅಧಿಕಾರಿಗಳು ಇದ್ದರೆ, ಇವರಾಗಿಯೇ ಹೋಗಿ ನಾವು ಕೆಲವರು ಕೊಡುತ್ತೇವೆ ಎಂದು ಹೇಳಿತಕ್ಕಂಥ ಜನರೂ ಇದ್ದಾರೆ ಎನ್ನುವುದನ್ನು ನಾವು ಮರೆಯಬಾರದು. ತಮಗೆ ಗೊತ್ತಿದೆ. ಏಕೆಂದರೆ ಇಷ್ಟು ಕೊಟ್ಟು ಏನಾದರೂ ಮಾಡಿ ನಾವು ಮಾಡಿಸಿಕೊಂಡೇ ಬರಬೇಕು ಎನ್ನತಕ್ಕಂಥ ರೀತಿಯಲ್ಲಿ ಹೋಗಿ ಬಿಟ್ಟರೆ ಅಲ್ಲಿ ತಿನ್ನುವ ಆಸೆ ಸಹಜವಾಗಿಯೇ ಒಬ್ಬ ಮನುಷ್ಯನಿಗೆ ಹುಟ್ಟುವುದು ಕೂಡ ಸಹಜ. After all, it is a human inherent tendencey. ಎಂದು ನಾವು ಕರೆದುಕೊಳ್ಳೋಣ. ನಾನು ಲಂಚವನ್ನು ಮುಟ್ಟಬಾರದು ಎನ್ನತಕ್ಕಂಥವನೂ ಕೂಡ ಮುಟ್ಟುವುದಕ್ಕೆ ಅಲ್ಲಿ ಅವನಿಗೆ ಪ್ರಚೋದನೆ ಮಾಡುವುದಕ್ಕೆ ಇವನ ಕೈ ಕಾರಣವಾಗಬಹುದು. ನಾನು ಆ ದೃಷ್ಟಿಯಿಂದ ಈ ಮಾತನ್ನು ಇಟ್ಟಿದ್ದೇವೆ. ನಾನು ಇದನ್ನು ಚರ್ಚಾ ವಸ್ತುವಾಗಿ ಇಟ್ಟಿದ್ದೇನೆಯೇ ವಿನ: ಇದಕ್ಕೆ ಪರಿಹಾರ ನನ್ನ ಹತ್ತಿರ ತತ್‌ಕ್ಷಣ ಸಿಕ್ಕಲಾರದು. ಹಾಗಾದರೆ ನಿಮ್ಮ ಉತ್ತರದಿಂದ ಏನು ಉಪಯೋಗ ಎಂದು ಕೇಳಬಹುದು. I am sorry ನಾನು ಉತ್ತರವನ್ನು ಕೊಟ್ಟು, ಕೊಟ್ಟು, ಬಹಳ ಚೆನ್ನಾಗಿದೆ ಎನ್ನತಕ್ಕಂಥ ಮಾತನ್ನು ಆಡಿ ಆಡಿ ಅದನ್ನು ಕೇಳಿಸಿಕೊಂಡು ಹೋಗತಕ್ಕಂಥ ಆಸೆ ಆಗದೇ ನನ್ನ ಮನಸ್ಸಿಗೆ ಸಮಾಧಾನ ಏಕೆಂದರೆ, ಇಷ್ಟು ವರ್ಷ ರಾಜಕೀಯ ಮಾಡಿದ್ದೇವೆ. ಇಷ್ಟು ವರ್ಷ ರಾಜಕೀಯ ಆದಮೇಲೂ ಕೂಡ ಇದನ್ನು ತೇಲಿಸಿಕೊಂಡು ಹೋಗುವುದು ಒಳ್ಳೆಯದಲ್ಲ. ನಮ್ಮ ಕಾಲದಲ್ಲಿ ಏನಾದಲರೂ ಮಾಡಿ ಇದಕ್ಕೆ ಇತಿಶ್ರೀ ಹಾಡತಕ್ಕಂಥ ಒಂದು ವಿಚಾರಕ್ಕೆ ನಾವೆಲ್ಲರೂ ಕಟ್ಟುಬೀಳೋಣ. ನಾವೆಲ್ಲಾ ಇದಕ್ಕೆ ತಲೆ ಕೆಡಿಸಿಕೊಳ್ಳೋಣ ಎನ್ನತಕ್ಕಂಥ ದೃಷ್ಟಿಯಿಂದ ಈ ಮಾತನ್ನು ನಾನು ಆಡಿದ್ದೇನೆ. ಈ ಸಂದರ್ಭದಲ್ಲಿ ಆ ವಿಚಾರದಲ್ಲಿ ನಾನು ವಿವರಗಳಿಗೆ ಹೋಗಲಾರೆ, ಹೋಗುವುದಿಲ್ಲ ಆದರೆ ಆ ಸಬ್ಜೆಕ್ಟ್ ಮಾತ್ರ ಒಂದು ಸಾರಿ ತೆಗೆದು ಕೊಳ್ಳೋಣ, ಚರ್ಚೆಗೆ ಒಳಪಡಿಸೋಣ. ಇಷ್ಟು ವಿಚಾರ ಈ ಸಂದರ್ಭದಲ್ಲಿ ಹೇಳುತ್ತಾ ಪಚಸೂತ್ರ ಏನಿದೆ, ಅದರ ಬಗ್ಗೆ ಕೂಡ ಪ್ರಾಮಾಣಿಕ ಪ್ರಯತ್ನ ಮಾಡೋಣ. ಅದರ ಬಗ್ಗೆ ಕೂಡ ಒಂದು ಮಾತನ್ನು ನಾನು ಆಡಿದ್ದೇನೆ. ಅದು ಏನೆಂದರೆ, ಪ್ರೊಸೀಜರನ್ನು ಸಿಂಪ್ಲಿಫೈ ಮಾಡತಕ್ಕಂಥದ್ದು. ಅದಷ್ಟು ಚಿಕ್ಕದಾಗಿ ತರಬೇಕು ಎನ್ನತಕ್ಕಂಥದ್ದು. ಅಲ್ಲಿ ತಮ್ಮ ಸಲಹೆಗಳೆಲ್ಲಾ ಬರಲಿ. ಜಾಯಿಂಟ್ ಸೆಲೆಕ್ಟ್ ಕಮಿಟಿ ರಿಪೋರ್ಟ್ ಬಂದಮೇಲೆ ಮತ್ತೆ ಇಲ್ಲಿಗೆ ಚರ್ಚೆಗೆ ಬಂದಾಗ ಆ ಕಡೆ ಮತ್ತು ಈ ಕಡೆಯ ಮಾನ್ಯ ಸದಸ್ಯರು ಅದಕ್ಕೆ ಮತ್ತೆ ಕೆಲವು ತಿದ್ದುಪಡಿಗಳನ್ನು ತರಬೇಕು ಎಂದು ಹೇಳಿದರೆ ಈ ಸದನದಲ್ಲೇ ತಂದಕೊಳ್ಳೋಣ. ನಾವು ಯಾವ ಮಟ್ಟಕ್ಕೆ ಹೋಗಿದ್ದೇವೆ ಎಂದರೆ, ಅದು ನನ್ನ ಕಲ್ಪನೆ. ಆ ಕಲ್ಪನೆ ಕಲ್ಪನೆಯಾಗಿಯೇ ಉಳಿಯುವುದು ಬೇಡ, ಅಥವಾ ನಿಮ್ಮ ಕಲ್ಪನೆ ಮತ್ತೊಂದು

ಇರಬಹುದು. ಅದು ಒಳ್ಳೆಯದಾಗಿದ್ದರೆ ಕಲ್ಪನೆ ಕಲ್ಪನೆಯಾಗಿಯೇ ಉಳಿಯುವುದು ಬೇಡ. ಕಾನೂನು ಚೌಕಟ್ಟಿಗೆ ತಂದು ಅದನ್ನು ಜಾರಿಗೆ ಕೊಡುವ ಪ್ರಾಮಾಣಿಕ ಪ್ರಯತ್ನವನ್ನು ಮಾಡೋಣ. ಒಂದು ಆಫೀಸಿಗೆ ಹೋದರೆ ಅಲ್ಲಿ ಒಂದು ಕಂಪ್ಯೂಟರ್ ಸಿಸ್ಟಂ ಅನ್ನು ಜಾರಿಗೆ ತರಬೇಕು ಎಂದು ವಿಚಾರ ಮಾಡಿದ್ದೇನೆ. ಜನ ಸಂಪರ್ಕ ಇರತಕ್ಕಂಥ ನಮ್ಮ ಆಫೀಸ್‌ಗಳು ಎಲ್ಲೆಲ್ಲಿವೆ ಅಲ್ಲಿ ಆದಷ್ಟು ಕಂಪ್ಯೂಟರ್ ಸಿಸ್ಟಂಅನ್ನು ತರಬೇಕು. ಅದಕ್ಕೆ ಗಣಕೀಕರಣ ಎಂದು ಕನ್ನಡದಲ್ಲಿ ಹೇಳುತ್ತಾರೆ. ಅದನ್ನು ತಂದು ಹಾಕದಿದ್ದರೆ ಅದು ಬರುವುದಿಲ್ಲ. ಆಫೀಸಿಗೆ ಹೋಗುವುದು, ಆ ಫೈಲ್‌ಗಳನ್ನೆಲ್ಲ ಹುಡುಕಿಕೊಳ್ಳುತ್ತಾ ಕುಳಿತುಕೊಳ್ಳುವುದು. ಇದರಿಂದ ಅವನ ಟೈಮ್ ವೇಸ್ಟ್. ಇವನ ಟೈಮ್ ವೇಸ್ಟ್. ಇದೆಲ್ಲಾ ಆಗುತ್ತದೆ. ಒಬ್ಬ ಒಂದು ಆಫೀಸಿಗೆ ಹೋದರೆ ಅಲ್ಲಿ ಒಂದು ಬಟನ್ ಹೊತ್ತಿದರೆ ಅವನಿಗೆ ವಿಚಾರ ಗೊತ್ತಾಗಬೇಕು. ಆದ್ದರಿಂದ ಅದನ್ನು ತಂದು ಮಾಡದಿದ್ದರೆ ಟೈಮ್ ಮತ್ತೊಂದು ಹೋಗುತ್ತದೆ. ಹೆಬ್ಬೆಟ್ಟು ಒತ್ತುವವನಿಗೆ ಎಲ್ಲಿ ಹೋಗಬೇಕೆಂದು ಗೊತ್ತಾಗುವುದಿಲ್ಲ. ಅದಕ್ಕೆ ಒಂದು ವ್ಯವಸ್ಥೆ ಇಡಬೇಕು, ಅಥವಾ ಕೊನೆಯ ಪಕ್ಷ ಇಂಟರ್‌ಕಾಮ್‌ಗಳಾದರೂ ಇರಬೇಕು. ಇವೆಲ್ಲಾ ವಿಚಾರವನ್ನು ಇಟ್ಟು ಪಂಚಸೂತ್ರ ವ್ಯವಸ್ಥೆಯನ್ನು ನಾವು ತಂದಿರುವುದು. ಆದಷ್ಟು ಶೀಘ್ರವಾಗಿ ಇದು ಬರಲಿ ಎನ್ನತಕ್ಕಂಥ ಆಸೆಯಿಂದ ಈ ಮಾತನ್ನು ನಾನು ಆಡಿದ್ದೇನೆ. ಈ ವಿಷಯದಲ್ಲಿ ಇಷ್ಟು ಮಾತುಗಳನ್ನು ನಾನು ಹೇಳುತ್ತಾ, ಕರ್ನಾಟಕ ರಾಜ್ಯದಲ್ಲಿ ಯಾವ ಯಾವ ಇಲಾಖೆಗಳು ಇವೆ. ಈ ಇಲಾಖೆಗಳ ಬಗ್ಗೆ ತಾವೆಲ್ಲಾ ಮಾತನಾಡಿದ್ದೀರಿ. ಆ ರೀತಿ ಮಾತನಾಡತಕ್ಕಂಥ ಸಂದರ್ಭದಲ್ಲಿ ಖರ್ಚು ಅನ್ಯಾಯವಾಗಿ ಜಾಸ್ತಿಯಾಗುತ್ತದೆ, ಅಲ್ಲಿ ವಾಹನಗಳ ಸಂಖ್ಯೆ ಜಾಸ್ತಿ ಇದೆ, ಅಧಿಕಾರಿಗಳ ಸಂಖ್ಯೆ ಜಾಸ್ತಿ ಇದೆ, ಬರೀ ಸಂಬಳ ಸಾರಿಗೆ ಖರ್ಚು ಎಲ್ಲಾ ಕೊಟ್ಟು ಕೊಟ್ಟು ನಮಗೆ ಸಾಕಾಗಿ ಬಿಟ್ಟಿದೆ ಎನ್ನತಕ್ಕಂಥ ಮಾತನ್ನು ನಾನು ಅಲ್ಲಿ ಕುಳಿತುಕೊಂಡು ಆಡಿದ್ದೇನೆ, ಇಲ್ಲಿ ಕುಳಿತುಕೊಂಡು ಮತ್ತೂ ಆಡುತ್ತಿದ್ದೇನೆ. ಆಡಳಿತ ನಡೆಸತಕ್ಕಂಥ ಸಂದರ್ಭದಲ್ಲಿ ಅದಕ್ಕೆ ಹಣವನ್ನು ನಾವು ಮಂಜೂರು ಮಾಡುತ್ತಲೇ ಇದ್ದೇವೆ. ಸರ್ಕಾರದವರಷ್ಟೇ ಅಲ್ಲ, ಈ ಸದನವೇ ಮಂಜೂರು ಮಾಡುತ್ತಿದೆ. ಯಾವುದಕ್ಕಾಗಿ ಎಂದರೆ ಇವೆಲ್ಲಕ್ಕೂ ನಾವು ಮಂಜೂರು ಮಾಡುತ್ತಿದ್ದೇವೆ. ಭಾಷಣವನ್ನೂ ಮಾಡುತ್ತೇವೆ, ಮಂಜೂರು ಕೂಡ ಮಾಡುತ್ತೇವೆ. ಇದು ಎಲ್ಲಾದರೂ ಕೂಡ ನಿಲ್ಲಬೇಕಲ್ಲಾ. ಅದಕ್ಕೋಸ್ಕರ ನಾನು ಹೇಳತಕ್ಕಂಥದ್ದು ಏನು? ಇದನ್ನು ಏನಾದರೂ ಮಾಡಿ ನಿಲ್ಲಿಸಬೇಕು ಎನ್ನತಕ್ಕಂಥ ದೃಷ್ಟಿಯಿಂದ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ. ಈ ದಿಶೆಯಲ್ಲಿ ನಾನು ಮಾನ್ಯ ಪ್ರಧಾನಮಂತ್ರಿಯವರನ್ನು ಅಭಿನಂದಿಸಬೇಕು. ಅವರು ಬಹಳ ಧೈರ್ಯ ಮಾಡಿ ಈ ಆಸ್ಟಿರಿಟಿ ಮೆಸರ್ಸ್‌ನ್ನು ತರಬೇಕು ಎನ್ನತಕ್ಕಂಥ ವಿಚಾರದಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಾಕಿ ಕೊಂಡಿದ್ದಾರೆ. ಹಿಂದೆ ಕೂಡ ಇತ್ತು. ಬೇರೆ ಪ್ರಧಾನಮಂತ್ರಿಗಳ ಕಾಲದಲ್ಲಿ ಇದು ಇರಲಿಲ್ಲ ಎನ್ನತಕ್ಕಂಥ ಮಾತನ್ನು ನಾನು ಆಡುತ್ತಿಲ್ಲ. ಇತ್ತೀಚೆಗೆ ಅವರೆಲ್ಲಾ ಹೇಳಿದ್ದಾರೆ. ಅದಕ್ಕೆ ಅನುಗುಣವಾಗಿ ನಮ್ಮ ಮಂತ್ರಿಮಂಡಲದ ಸದಸ್ಯರ ಶೇಕಡ 10 ರಷ್ಟು ಸಂಬಳ ಕೊಡಬೇಕೆಂದು ನಾವು ಈಗಾಗಲೆ ಕಟ್ಟಪ್ಪಣೆಯನ್ನು ಮಾಡಿಕೊಂಡಿದ್ದೇವೆ. ಶಾಸಕರುಗಳಿಗೆ ನೀವು ಕೂಡ ವಿಚಾರ ಮಾಡಿ, ಎಂದು ಸಲಹೆಗಳನ್ನು ಕೊಟ್ಟು ಪತ್ರ ಬರೆದಿದ್ದೇವೆ. ಉಳಿದ ವಿಚಾರವನ್ನು ನಿಮಗೆ ಬಿಟ್ಟಿದ್ದೇವೆ. ಇಲ್ಲಿ ಇಲಾಖೆಗಳ ಪರಿಸ್ಥಿತಿ ಏನು ಎಂದು ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದು ಬೇಡ. ಏಕೆಂದರೆ, ತಮಗೆ ಸಂಬಳ ಸಾರಿಗೆ ಬರತಕ್ಕದ್ದರಲ್ಲಿ ಜನ ಬರುವುದು ಹೋಗುವುದು, ಒಂದು ವಾಹನವನ್ನು ನೀವು ಬಾಡಿಗೆಗೆ ತೆಗೆದುಕೊಂಡು ಹೋದರೆ ಆ ಖರ್ಚು, ಪೆಟ್ರೋಲು, ಬಾಡಿಗೆ ಅದೆಲ್ಲ ಎಷ್ಟು ಸುಲಭ ಅಲ್ಲ, ಅಥವಾ ನಿಮ್ಮ ಹತ್ತಿರ ಸ್ವಂತ ಕಾರು ಇದ್ದರೂ ಕೂಡ ಅದನ್ನು ನಿಭಾಯಿಸುವುದು ಅಷ್ಟು ಸುಲಭವಲ್ಲ ಎಂದು ನಾನು ಗಮನದಲ್ಲಿ ಇಟ್ಟೇ ನಾನು ಈ ಮಾತನ್ನಾಡುತ್ತಿದ್ದೇನೆ. ಅದಕ್ಕಾಗಿ ಸಲಹೆ ಮಾಡಿ ನಾವು ಮಂತ್ರಿಮಂಡಲದಲ್ಲೇ ತೀರ್ಮಾನ ಮಾಡಿದ್ದೇವೆ. ಯಾವುದೇ ಪಕ್ಷದ ಮಾನ್ಯ ಸದಸ್ಯರು ಇದ್ದರೂ ಕೂಡ ಅವರು ಹೇಗೆ ಖರ್ಚು ಮಾಡಿದ್ದಾರೆ, ಅವರಿಗೆ ಸಂಬಳ ಸಾರಿಗೆ ಎಷ್ಟು ಬರುತ್ತದೆಂದು ನಾವೆಲ್ಲ ಲೆಕ್ಕಹಾಕಿದ್ದೇವೆ. ನಾಯಿಬಾಲ ಡೊಂಕು ಅಂದ ಹಾಗೆ ಅದು ಅಲ್ಲಿಗೆ ಬಂದು ನಿಲ್ಲುವುದರಿಂದ ಸಲಹೆಗಳ

ರೂಪದಲ್ಲಿ ಮಾಡುವುದನ್ನು ನಿಲ್ಲಿಸಿದೆಯೇ ವಿನ: ನೀವು ಮಾಡಿ ಎನ್ನತಕ್ಕ ಕಾನೂನನ್ನು ತರುವುದಕ್ಕೆ ನಾವೇನು ಹೋಗಲಿಲ್ಲ. ಮಾಡುವುದು ಒಳ್ಳೆಯದಲ್ಲ ಎನ್ನತಕ್ಕ ದೃಷ್ಟಿಯಿಂದಲೇ ನಾವು ಅಲ್ಲಿಗೆ ನಿಲ್ಲಿಸಿದ್ದೇವೆ. ಇನ್ನು ಇಲಾಖೆಗಳಲ್ಲಿ ಆಗುವ ವೆಚ್ಚವನ್ನು ನಾವು ಕಡಿಮೆಮಾಡಬೇಕು. ಈಗಾಗಲೇ ನಾನು ಬಜೆಟ್ ಮೇಲೆ ಮಾತನಾಡುವಾಗ ಹೇಳಿದ್ದೇನೆ. ಅದರ ಬಗ್ಗೆ ಉತ್ತರ ಕೊಡುವಾಗ ಹೇಳಿದ್ದೇನೆ. ಆದ್ದರಿಂದ ಈ ಸಂದರ್ಭದಲ್ಲಿ ನಾನು ಮತ್ತೆ ವಿವರಗಳಿಗೆ ಹೋಗುವುದಿಲ್ಲ. ಇಲ್ಲಿ ನಮ್ಮ austerity measures, ಅನಾವಶ್ಯಕ ಖರ್ಚು ದುಂದು ವೆಚ್ಚಗಳನ್ನು ಸರ್ಕಾರಿ ಮಟ್ಟದಲ್ಲಿ ಕಡಿಮೆ ಮಾಡಬೇಕೆಂದರೆ ನಾವು ಯೋಚನೆ ಮಾಡತಕ್ಕ ವಿಚಾರಧಾರೆ ಮತ್ತು ನಮ್ಮ ಕಾರ್ಯಕ್ರಮಗಳು ಮೀನಿಂಗ್‌ಫುಲ್ ಆಗಿರಬೇಕು. ಆ ಕಾರ್ಯಕ್ರಮಗಳು ನಾವು ಜಾರಿಗೆ ಕೊಡತಕ್ಕ ವಿಚಾರಗಳು ಕಾನೂನು ಚೌಕಟ್ಟಿನಲ್ಲಿಯೂ ಬರಬೇಕು. ಅದಕ್ಕೆ ನಾವು ಕೆಲವನ್ನು ಈಗಾಗಲೇ ಪ್ರಕಟಮಾಡಿದ್ದೇವೆ. ಉದಾಹರಣೆಗೆ ಜಾಯಿಂಟ್ ಡೈರೆಕ್ಟರ್ಸ್ ಜಾಸ್ತಿ ಇರುವುದು ಡೆಪ್ಯೂಟಿ ಡೈರೆಕ್ಟರ್‌ಗಳು ಜಾಸ್ತಿ ಇರುವುದು ಇದೆ. ಈಗಾಗಲೇ ನಮ್ಮ ಮಾನ್ಯ ಮಂತ್ರಿಗಳಾದ ವೀರಪ್ಪ ಮೊಯಿಲಿಯವರು ವಿದ್ಯಾ ಇಲಾಖೆಯಲ್ಲಿ ಜಾಯಿಂಟ್ ಡೈರೆಕ್ಟರ್ ಪೋಸ್ಟ್‌ಗಳನ್ನು ಅಬಾಲಿಶ್ ಮಾಡುತ್ತೇವೆಂದು ಹೇಳಿದ್ದಾರೆ. ಒಂದು ಕೋಟಿ ಚಿಲ್ಲರೆ ರೂಪಾಯಿಗಳು ಉಳಿತಾಯ ಆಗುತ್ತದೆ ಎಂದು ಅದನ್ನು ಕ್ವಾಂಟಿಫೈ ಮಾಡಿ ಹೇಳಿದ್ದಾರೆ. ಇನ್ನು ಕೆಲವನ್ನು ನಾವು ಕ್ವಾಂಟಿಫೈ ಮಾಡಿಸುತ್ತಿದ್ದೇವೆ. ಎಲ್ಲಾ ಇಲಾಖೆಗಳಿಗೂ ಕೂಡ ಅದು ಎಷ್ಟಾಗಬಹುದು ಏನಾಗಬಹುದೆಂದು ನಮಗೆಲ್ಲಾ ತಿಳಿಸಬೇಕು ಎಂದು ಹೇಳಿದ್ದೇವೆ. ಈ ಹುದ್ದೆಗಳನ್ನೆಲ್ಲ ವಜಾ ಮಾಡಿದರೆ ನಾವು ಎಷ್ಟು ಕೋಟಿ ರೂಪಾಯಿಗಳನ್ನು ಉಳಿಸುತ್ತಿದ್ದೇವೆಂದು ಯೋಚನೆ ಮಾಡಬೇಕು. ಆದರೆ ಒಂದು ವಿಚಾರವನ್ನು ನಾವು ನೆನಪಿನಲ್ಲಿಡಬೇಕು. ನಾವು ಜಾಯಿಂಟ್ ಡೈರೆಕ್ಟರ್ ಆಫೀಸನ್ನು ವಜಾ ಮಾಡುತ್ತಿದ್ದೇವೆ. ಆದರೆ ಆ ಜಾಯಿಂಟ್ ಡೈರೆಕ್ಟರ್ ಅವರನ್ನೇ ವಜಾ ಮಾಡಿ ಮನೆಗೆ ಕಳುಹಿಸುತ್ತಿದ್ದೇವೆಯೋ. ಈ ವಿಷಯ ಬರುವಹಾಗಿಲ್ಲ ಇದನ್ನು ಸ್ವಲ್ಪ ನಾವು ಅರ್ಥ ಮಾಡಿಕೊಳ್ಳಬೇಕು. ಎಲ್ಲಿಯವರೆಗೂ ಬರುವಹಾಗಿಲ್ಲ? ಇಲ್ಲ ಅವರಾದರೂ ರಾಜೀನಾಮೆ ಕೊಡಬೇಕು, ಇಲ್ಲದಿದ್ದರೆ ಅವರು ರಿಟೈರ್ ಆಗಿ ಹೋಗಬೇಕು. ಅಲ್ಲಿಯವರೆಗೂ ಅವರನ್ನು ನಾವು ಕಳುಹಿಸುವ ಹಾಗೆ ಇಲ್ಲ. ಕಾನೂನು ಹಾಗೆ ಇದೆ. ರಾಜ್ಯಾಂಗ, ಕಾನೂನು, ಕೋರ್ಟ್‌ಗಳು ಇತ್ಯಾದಿ ಇವೆ. ಕೆಂಪು ಬಿಲ್ಡಿಂಗ್‌ಗಳು ಬೇರೆ ಇವೆ. ಇವೆಲ್ಲವೂ ಕೂಡ ನಮ್ಮ ಮುಂದೆ ಇರುವುದರಿಂದ ನಾವು ಇವುಗಳನ್ನು ಆದಷ್ಟು ಮಟ್ಟಿಗೆ ಕಡತಕ್ಕೆ ಒಳಪಡಿಸಬೇಕು ಎನ್ನತಕ್ಕ ವಿಚಾರ ಮಾಡುತ್ತಿದ್ದೇವೆ. Benefits for the out go of officers/officials from the service voluntarily should be attractive. ಈಗಿರತಕ್ಕ ಕಾನೂನಿನಲ್ಲಿ 15 ವರ್ಷ ಸರ್ವೀಸ್ ಆಗಿರಬೇಕು ಇಲ್ಲವೇ 50 ವರ್ಷ ವಯಸ್ಸು ಆಗಿರಬೇಕೆಂದು ಇದೆ. 15 ವರ್ಷ ಮಿನಿಮಂ ಸರ್ವಸ್ ಆಗಿರಲೇಬೇಕು ಇಲ್ಲದಿದ್ದರೆ ತೆಗೆದುಕೊಳ್ಳುವುದಿಲ್ಲ ಎನ್ನುವ ಬದಲು ಅದನ್ನು 10 ವರ್ಷಕ್ಕೆ ತಂದು ನಿಲ್ಲಿಸಿಬಿಡುವುದು. 10 ವರ್ಷ ಆದವನು ಬೇಕಾದರೆ ಅಪ್ಲೈ ಮಾಡಿಬಿಡಬಹುದು. 50 ವರ್ಷ ಎನ್ನುವ ಬದಲು ಇನ್ನೂ ಸ್ವಲ್ಪ ಮುಂಚೇನೇ ಅಂದರೆ 40-45 ವಯಸ್ಸಾದ ತಕ್ಷಣ ಎಂದು ಮಾಡಿ ಹಾಕಿಬಿಡುವುದು. The exit or outgo ಅವರಿಗೆ benefits ಯಾವರೀತಿattractive ಆಗಿ ಕೊಡಬೇಕು. ಎನ್ನತಕ್ಕದ್ದು ಬರುತ್ತದೆ ಅವರಿಗೆ ಹಣ ಎಷ್ಟೆಂದು ಕೊಡುತ್ತಾ ಬಂದರೆ ಅದನ್ನು ತೆಗೆದುಕೊಂಡು ಮನೆಗೆ ಹೊರಟುಹೋಗಲಿ. ಏಕೆಂದರೆ ಅವರ ಮುಂದಿನ ಹಣ ಸಂಬಳ, ಸಾರಿಗೆ ಮುಂತಾದ್ದುವೆಲ್ಲ ನಮಗೆ ಉಳಿತಾಯವಾಗುತ್ತದೆ. ಈಗಿರತಕ್ಕ ಡಿವಿಜನಲ್ ಕಮಿಷನರ್ ಆಫೀಸನ್ನು ನಾವು ತೆಗೆಯುತ್ತೇವೆ. ಅಥವಾ ಡಿವಿಜನಲ್ ಕಮೀಷನರ್ ಅವರನ್ನು ಮನೆಗೆ ಕಳುಹಿಸುತ್ತಿದ್ದೇವೋ ಅವರು ಅಲ್ಲೇ ಇರುತ್ತಾರೆ. ಕೆಲವರು ಅಸಿಸ್ಟೆಂಟ್ ಕಮೀಷನರ್ಸ್ ಇರಬೇಕೆಂದು ಹೇಳಿದ್ದಾರೆ. ಆದರೆ ಬಹಳ ಜನ ಹೊರಟು ಹೋಗಲಿ ಎನ್ನತಕ್ಕದ್ದನ್ನು ಹೇಳಿದ್ದಾರೆ. ನಾನು ಹೇಳುವುದು ಏನೆಂದರೆ, ಮತ್ತೆ ಅವರನ್ನು ಅಲ್ಲಿ ಇಟ್ಟುಕೊಳ್ಳುವುದು ಬೇಡ. ಒಂದು ಸಾರಿ ಹೋಗಬೇಕೆಂದು ತೀರ್ಮಾನ ಮಾಡಿದರೆ ಕಳುಹಿಸಿ ನೋಡಿಬಿಡೋಣ. ಮತ್ತೆ ತೆಗೆದುಕೊಂಡು ಹೋಗಿ

ಯಾವುದೋ ಎಳೆತ ಸೆಳೆತಕ್ಕೆ ಒಳಗಾಗುವುದು ಬೇಡ. ಸರ್ಕಾರದವರು ನಾವು ಸ್ಪಷ್ಟವಾಗಿ ವಿಚಾರ ಮಾಡಿದ್ದೇವೆ. ನಾವು ಕ್ಯಾಬಿನೆಟ್‌ನಲ್ಲೂ ತೀರ್ಮಾನ ಮಾಡಿದ್ದೇವೆ. ಆದಷ್ಟು ಔಟ್ ಗೋಯಿಂಗ್ ಇಟ್ಟು ಕೊಳ್ಳೋಣ. ನಾಟ್ ಇನ್ ಕಮಿಂಗ್ ಇದರಿಂದ ಏನಾಗುತ್ತದೆಯೆಂದರೆ ಸ್ವಂತ ಕಟ್ಟಡಗಳು ಎಲ್ಲೆಲ್ಲಿವೆ ಅದನ್ನು ನಾವು ಉಪಯೋಗ ಮಾಡಿಕೊಳ್ಳೋಣ. ಬಾಡಿಗೆ ಎಲ್ಲೆಲ್ಲಿ ಇದೆ, ಆ ಬಾಡಿಗೆ ಬೇರೆ ಖರ್ಚುಗಳು, ಸ್ಟೇಶನರಿ, ವಾಹನಗಳು ಇತ್ಯಾದಿಗಳಿಂದ ಕೂಡ ನಮಗೆ ಖರ್ಚಿನ ಉಳಿತಾಯವಾಗುತ್ತದೆ. ಬರೀ ಎಜುಕೇಶನ್ ಡಿಪಾರ್ಟ್‌ಮೆಂಟ್‌ಇಲ್ಲಿರುವ ಜಾಯಿಂಟ್ ಡೈರೆಕ್ಟರ್‌ದು ಹೇಳಿದ್ದು, ಒಂದು ಕೋಟಿ ರೂಪಾಯಿ ಚಿಲ್ಲರೆ ಸಿಕ್ಕಿತು. ಇನ್ನು ಬೇರೆ ಬೇರೆ ಇದೆ. ಅದೇ ರೀತಿ ಚೀಫ್ ಇಂಜಿನಿಯರ್ಸ್‌ಗಳನ್ನು ನಾವು ಭೀಮರಾಯನ ಗುಡಿಗೆ ಹೋಗಿ ನೋಡಿದ್ದೇನೆ. ಅಲ್ಲಿ ಕೆನಾಲ್‌ಗೆ ಒಬ್ಬ ಚೀಫ್ ಇಂಜಿನಿಯರ್ಸ್, ಡ್ಯಾಮ್‌ಗೆ ಒಬ್ಬ ಚೀಫ್ ಇಂಜಿನಿಯರ್, ಕಾಡಾ ಗೆ ಒಬ್ಬ ಚೀಫ್ ಇಂಜಿನಿಯರ್ ಇದ್ದಾರೆ. ಶ್ರೀ ಯಡಿಯೂರಪ್ಪನವರೇ, 1978 ರಲ್ಲಿ ಶ್ರೀ ದೇವರಾಜ್ ಅರಸ್‌ರವರ ಮಂತ್ರಿಮಂಡಲದಲ್ಲಿ ನಾನು ಪಿ ಡ ಬ್ಲ್ಯೂ ಡಿ ಮಂತ್ರಿಯಾಗಿದ್ದಾಗ ಎಷ್ಟು ಜನ ಚೀಫ್ ಇಂಜಿನಿಯರ್ಸ್ ಇರಲಿಲ್ಲ. ಈಗ ಒಂದು ದೊಡ್ಡ ಪಟ್ಟಿ ಇದೆ. ಚೀಫ್ ಇಂಜಿನಿಯರ್ಸ್ ಮೇಲೆ ಇನ್ನೊಬ್ಬ ಇಂಜಿನಿಯರಿಂಗ್ ಇನ್ ಚೀಫ್(ಜನರಲ್) ಇರುತ್ತಾರೆ. ಇದು ನನಗೆ ಅರ್ಥವಾಗುವುದಿಲ್ಲ. ಇವರಿಗೋಸ್ಕರ 1 ಕೋಟಿ ರೂಪಾಯಿಯನ್ನು ಖರ್ಚು ಮಾಡುವುದಕ್ಕಾಗಿ ಸರ್ಕಾರ ಇರಬೇಕೆ ? ಜನರು ಅದಕ್ಕಾಗಿ ಮತ ಕೊಡುವುದೆ ? ಅದಕ್ಕಾಗಿ ಟ್ಯಾಕ್ಸ್ ಕೊಡುವುದೆ? I cannot understand all these things. ಪುಣ್ಯಕ್ಕೆ ನಮ್ಮ ಮಾನ್ಯ ಪ್ರಧಾನಮಂತ್ರಿಯವರು ಹೇಳಿದರು. ಏನೆಂದರೆ ರೋಗಿ ಬಯಸಿದ್ದು ಅದನ್ನೇ, ವೈದ್ಯ ಹೇಳಿದ್ದು ಅದನ್ನೇ, ಅದನ್ನು ಕೇಳಿ ನಮಗೂ ಬಹಳ ಸಂತೋಷವಾಯಿತು. ಒಟ್ಟಾಗಿ ನಾವು ಈಗ ಕತ್ತರಿ ಪ್ರಯೋಗ ಪ್ರಾರಂಭ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. No. question of going back ಇದನ್ನು ಮಾಡಲೇಬೇಕು. ಒಂದು ಸಲ ನೋಡೋಣ. ಆದರೆ, ಒಂದು ವಿಚಾರವನ್ನು ಗಮನದಲ್ಲಿಡಬೇಕು. In an area like UKP which is funded by the world Bank. ಫೀಲ್ಡ್ ಆಫೀಸರ್‌ಗಳನ್ನು ಮಾತ್ರ ನಾವು ಕಡಿಮೆ ಮಾಡಬಾರದು ಅದರ ಬಗ್ಗೆ ಬಹಳ ಎಚ್ಚರಿಕೆ ವಹಿಸಬೇಕು. ಈಗ ಉದಾಹರಣೆಗೆ, ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನಲ್ಲಿ ಎಕ್ಸ್‌ಟೆನ್‌ಶನ್ ಪ್ರೋಗ್ರಾಮ್ ಇದೆ. ಎಕ್ಸ್‌ಟೆನ್‌ಶನ್ ಆಫೀಸರ್ಸ್ ಸಿಕ್ಕಾಪಟ್ಟೆ ಇದ್ದರೂ ಕೂಡ ಕಟ್ ಮಾಡೋಣ. ಆದರೆ ಆ ವರ್ಕ್‌ಗೆ ತೊಂದರೆಯಾಗಬಾರದು. ಉದಾಹರಣೆಗೆ, ಜಲಾನಯನ ಪ್ರದೇಶಗಳಿವೆ. Water shed programmes which are aided by the world bank and Government of India's assistance etc. ನಾವು ಅಂತಹ ಸಂದರ್ಭದಲ್ಲಿ ಕಟ್ ಮಾಡಿ, ಮತ್ತೆ ಕೆಲಸವಾಗುತ್ತಿರುವುದಕ್ಕೆ ತೊಂದರೆ ಕೊಡಬಾರದು, ಅದು ಆಗಬಾರದು. ಎಲ್ಲಿ ಅತಿ ಅವಶ್ಯಕವಾಗಿ ಫೀಲ್ಡ್ ವರ್ಕ್ ಇರುತ್ತದೋ, ಅಂತಹ ಕಡೆ ಇಟ್ಟುಕೊಳ್ಳೋಣ. ಮತ್ತು ಬೇಡವಾಗಿರತಕ್ಕಂಥಾದ್ದು. ಏನೇನು ಹುದ್ದೆಗಳಿವೆ, ಎಂದರೆ ಅಲ್ಲಿ ಕುರ್ಚಿಗೆ ಒಬ್ಬ ಮ್ಯಾನ್, ಛೇರ್‌ಗೆ ಒಬ್ಬ ಮ್ಯಾನ್, ಛೇರ್ಮನ್ ಇದ್ದಂತೆ. ಇದನ್ನು ನಾವು ತೆಗೆಯಬೇಕಾಗಿದೆ. ಇದನ್ನು ತಗೆಯದಿದ್ದರೆ ಮಾತ್ರ ಗೌರವ ಯಾರಿಗೂ ಬರುವುದಿಲ್ಲ, ಅಲ್ಲದೆ, ಖರ್ಚು ಅನಾವಶ್ಯಕವಾಗಿ ಆಗುತ್ತದೆ ಎನ್ನತಕ್ಕಂಥ ತಮ್ಮ ಅಭಿಪ್ರಾಯವನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದೇ ಸರ್ಕಾರದ ಚಿಂತನೆಯಾಗಿದೆ ಎನ್ನತಕ್ಕಂಥ ಅಭಿಪ್ರಾಯವನ್ನು ಕೂಡ ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ತಾವು ಯುಕೆಪಿ ಬಗ್ಗೆ ಪ್ರಸ್ತಾಪ ಮಾಡಿದಿರಿ. ಇದರ ಬಗ್ಗೆ ನಾವುಅನೇಕ ಬಾರಿ ಸಲಹೆ ಕೊಟ್ಟಂತೆ ಒಬ್ಬರು ಭಾರವಾದರೂ ಪರವಾಗಿಲ್ಲ. ಒಬ್ಬರು ನೀರಾವರಿ ಸಚಿವರನ್ನು ಇವರನ್ನೇ ನೇಮಕ ಮಾಡುತ್ತೀರೋ, ಇನ್ನೊಬ್ಬರು ಯಾರಾದರೂ ಮಂತ್ರಿಯನ್ನು ನೇಮಿಸುತ್ತೀರೋ ಚಿಂತೆ ಇಲ್ಲ. ಆದರೆ, ಯೋಜನೆ ಪೂರ್ಣವಾಗಬೇಕು. ಎರಡನೆಯದಾಗಿ, ಜಮೀನನ್ನು ಅಕ್ವೈರ್ ಮಾಡಿಕೊಳ್ಳತಕ್ಕಂಥ

ಸಂದರ್ಭದಲ್ಲಿ ಅನೇಕ ಅಡ್ಡಿ ಅಡಚಣೆಗಳಾದುವು. ನಾವು ಎರಡು ದಿವಸ ಅಲ್ಲಿಗೆ ಹೋಗಿ ಅಧ್ಯಯನ ಮಾಡಿಕೊಂಡು ಬಂದು, ತಮ್ಮ ಅಧಿಕಾರಿಗಳು ಜೊತೆ ಚರ್ಚೆ ಮಾಡಿದಾಗ ಅಕ್ವಿಸಿಷನ್‌ಗೆ ಇಷ್ಟೊಂದು ಪ್ರಾಬ್ಲಮ್ ಇದೆ ಎಂದು ತಿಳಿಯಿತು. ಆದ್ದರಿಂದ ಏನಾದರೂ ಕಾನೂನಿನಲ್ಲಿ ತಿದ್ದುಪಡಿ ತಂದು ನೇರವಾಗಿ ಜಮೀನನ್ನು ಅಕ್ವೈರ್ ಮಾಡಿಕೊಂಡು ತಕ್ಷಣ ಚಾನೆಲ್ ಕೆಲಸವನ್ನು ಪ್ರಾರಂಭಿಸಿ, ಅವೆರಡೂ ಕೆಲಸವನ್ನು ಮಾಡಿದರೆ ಅದು ಪೂರ್ಣವಾಗಬಹುದೇನೋ ಎಂದು ತಮಗೆ ತಿಳಿಯಬಯಸುತ್ತೇನೆ.

ಶ್ರೀ ಎಸ್.ಬಂಗಾರಪ್ಪ.:- ಮಾನ್ಯ ಅಧ್ಯಕ್ಷರೆ, It is a very good suggestion. When we have met we have already discussed that point. ಯುಕೆಪಿ ವಿಚಾರ ಬಂದಾಗ ಅದರ ಬಗ್ಗೆ ಅನೇಕ ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಇದರ ವಿಚಾರದಲ್ಲಿ ಎಲ್ಲಾ ಪಕ್ಷಗಳ ಮಾನ್ಯ ಸದಸ್ಯರುಗಳೆಲ್ಲರೂ ಬೆಂಬಲ ಕೊಡುವುದು ನನಗೆ ಗೊತ್ತಿದೆ. ಈಗಾಗಲೆ ಕೃಷ್ಣಾ ಬೇಸಿನ್ ಅಥಾರಿಟಿ ಬಗ್ಗೆ ಬಿಲ್ ಸಿದ್ಧವಾಗಿದೆ. ಕ್ಯಾಬಿನೆಟ್ ಕೂಡ ಅಪ್ರೂವ್ ಮಾಡಿದೆ. The Bill is ready for introduction, consideration and passing in the august House. ನಾವು ಬಹಳ ಸ್ಪೀಡ್‌ನಲ್ಲಿದ್ದೇವೆ. ಏಕೆಂದರೆ, ಬಚಾವತ್ ಅವಾರ್ಡ್ ಪ್ರಕಾರ ನಮಗೆ ಇರತಕ್ಕಂಥ ನಮ್ಮ ಪಾಲಿನ ನೀರನ್ನು ಸಂಪೂರ್ಣವಾಗಿ ನಾವು ಉಪಯೋಗ ಮಾಡಬೇಕೆಂದರೆ We have to hurry up the things, like military style ನಾವು ಮಿಲಿಟರಿ ಟೈಪ್‌ನಲ್ಲಿ ಹೋಗದೆ ಇದ್ದರೆ ಮಾತ್ರ ನಿಜವಾಗಿಯೂ ನಾವು ಇರಲಿ, ಬಿಡಲಿ ಇದನ್ನು ಶೀಘ್ರವಾಗಿ ಮಾಡಿಕೊಳ್ಳಬೇಕೆಂದು ನಾನು ಹೇಳುತ್ತಿದ್ದೇನೆ. ಅದಕ್ಕಾಗಿ ಭೀಮರಾಯನಗುಡಿ ಕಛೇರಿಯಿಂದ ಒಂದೂ ಫೈಲ್ ಕೂಡ ಇಲ್ಲಿಗೆ ಬರಕೂಡದು. ಕೃಷ್ಣಾ ಬೇಸಿನ್ ಬಗ್ಗೆ ಫೈಲ್ ಇಲ್ಲಿಗೆ ಬರಬಾರದು. ಅಲ್ಲಿಂದ ಬೆಂಗಳೂರಿನ ವಿಧಾನಸೌಧಕ್ಕೆ ಏಕೆ ಬರಬೇಕು ? ಇದು ನನಗೆ ಅರ್ಥವಾಗದಿರುವ ವಿಚಾರವಾಗಿದೆ. ಆ ಫೈಲ್ ಅಲ್ಲಿಯೇ ಇರಬೇಕು. ನಾವು ಹಣವನ್ನು ಅಥಾರಿಟಿ ಕೈಗೆ ಕೊಡುತ್ತೇವೆ. I am going to put one Minister in charge of all these matters. ನಾವು ಮಾಡುತ್ತೇವೆ. ಇದನ್ನು ಮಾಡದೆ ಇದ್ದರೆ ಬರುವ ಹಾಗಿಲ್ಲವೆಂದು ನಾನು ಹೇಳುತ್ತೇನೆ. ಅದು ಹೇಗಿರಬೇಕೆಂದರೆ, ಪ್ಲಾನಿಂಗ್‌ನಿಂದ, ಡಿಸೈನಿಂಗ್, ಅಪ್ರೂವಲ್, ಫಂಡ್ಸ್ ರಿಲೀಸ್, execution and getting complete results ಅದನ್ನು ಅವರು ನಮಗೆ ಕೊಡಬೇಕು. ಅದನ್ನು ಈ ಸದನ, ನಮ್ಮ ಸರ್ಕಾರ ನಿರೀಕ್ಷಿಸುತ್ತಿದ್ದೇವೆ. ಫುಲ್ ಪವರ್ಸ್ ಅನ್ನು ನಾವು ಅದಕ್ಕೆ ಕೊಡುತ್ತೇವೆ. ಈಗಾಗಲೇ ಇದರ ಬಗ್ಗೆ ವಿರೋಧಪಕ್ಷದ ನಾಯಕರ ಹತ್ತಿರ ಮಾತನಾಡಿದೆ. ಆ ಸದನ, ಈ ಸದನದಲ್ಲಿ ತೆಗೆದುಕೊಂಡು ಬನ್ನಿ, 10 ನಿಮಿಷಗಳಲ್ಲಿ ಆ ಬಿಲ್ಲನ್ನು ಪಾಸ್ ಮಾಡಿಕೊಡುತ್ತೇವೆ ಎನ್ನತಕ್ಕಂಥ ಅಭಿಪ್ರಾಯವನ್ನು ಹೇಳಿದ್ದಾರೆ. ತಾವು ಕೂಡ ಒಪ್ಪುತ್ತೀರೆಂದು ನನಗೆ ಗೊತ್ತಿದೆ. ಆ ಬಿಲ್ ಬಂದಾಗ ತಾವು ಅದನ್ನು ಓದಿ ನೋಡಿ, ನಾವು ಅದನ್ನು ಸರ್ಕ್ಯುಲೇಟ್ ಮಾಡುತ್ತೇವೆ. ಮತ್ತೇನಾದರೂ ಸ್ಪೀಡ್ ಅಪ್ ಮಾಡುವ ದೃಷ್ಟಿಯಿಂದ ಸಲಹೆ ಕೊಟ್ಟರೆ ಅಮೆಂಡ್‌ಮೆಂಟ್ ಕೂಡ ಈ ಸದನದಲ್ಲಿಯೇ ತಮ್ಮ ಕಣ್ಣೆದುರಿಗೆ ತಂದು ಹಾಕುವುದಕ್ಕೆ ನಾವು ಸಿದ್ಧರಾಗಿದ್ದೇವೆ. . ಏಕೆಂದರೆ, ನಮ್ಮೆಲ್ಲರ ಕಾತುರ ಒಂದೇ ಆಗಿದೆ. ಏನೆಂದರೆ, ಕರ್ನಾಟಕ ರಾಜ್ಯದ ಹಿತ ಅದರಲ್ಲಡಗಿದೆ. ಅದಕ್ಕೋಸ್ಕರ, ಅದನ್ನು ಶೀಘ್ರವಾಗಿ ಮಾಡಿಕೊಳ್ಳಬೇಕು. ಈ ಶತಮಾನದ ಅಂತ್ಯಕ್ಕೆ ಇನ್ನು 7-8 ವರ್ಷಗಳು ಉಳಿದುಕೊಂಡಿವೆ. ಈ ಕಾಲ ಹೋದರೆ ಮಾತ್ರ ನಮ್ಮಂಥ ಶತಮೂರ್ಖರು ಇನ್ಯಾರು ಇಲ್ಲವೆನ್ನತಕ್ಕ ತೀರ್ಮಾನವನ್ನು ನಾಳೆಯ ಮುಂದಿನ ಪೀಳಿಗೆಯವರು ಮಾಡುತ್ತಾರೆ. ಇನ್ನು ಹೆಚ್ಚುವರಿ ನೀರಿನ ಬಗ್ಗೆ ಮಾತುಕತೆ ಇದೆ. ನಾವು ಮೂರು ರಾಜ್ಯಗಳಾದ ಆಂಧ್ರ ಪ್ರದೇಶ, ಕರ್ನಾಟಕ ಮತ್ತು ತಮಿಳುನಾಡಿನ ಮುಖ್ಯಮಂತ್ರಿಗಳು ಸೇರಬೇಕು, ಸೇರಿ ಮಾತನಾಡಿ ಏನು ಮಾಡಬೇಕು ಎನ್ನುವ ಬಗ್ಗೆ ತೀರ್ಮಾನ ಮಾಡೋಣ. ನಾನು ಅದರ ವಿವರಣೆಗೆ ಬಂದಿಲ್ಲ, ಆದರ ವಿವರ ಇಲ್ಲಿ ಬೇಕಾಗಿಲ್ಲ. ಮಾನ್ಯ ಮಂತ್ರಿಗಳಾದ ಮಲ್ಲಾರಿಗೌಡ ಪಾಟೀಲ್‌ರವರು ಅವರ ಇಲಾಖೆಯ ವಿಚಾರ ಈ ಸದನದಲ್ಲಿ ಬಂದಾಗ ಬಹಳಷ್ಟು ಹೇಳಿದ್ದಾರೆ. ಈ

ದೃಷ್ಟಿಯಿಂದ ನಾವು ಅದನ್ನು ಮಾಡಿಕೊಳ್ಳಬೇಕು. ಆದರೆ ಅದು ವೇಗವಾಗಿ ನಡೆಯತಕ್ಕ ವಿಚಾರದಲ್ಲಿ ಅಧಿಕಾರಿಗಳು ಎಷ್ಟು ಬೇಕೋ ಅಷ್ಟು ಜನರನ್ನು ನಾವು ಇಟ್ಟುಕೊಳ್ಳಲೇಬೇಕು. ಖರ್ಚು ಸ್ವಲ್ಪ ಜಾಸ್ತಿಯಾದರೂ ಚಿಂತೆ ಇಲ್ಲ, We should not mind ಈ ವಿಚಾರದಲ್ಲಿ ಮಾತ್ರ ಮುಂದೆ ಯಾವುದೇ ಸರ್ಕಾರ ಬರಲಿ, ಯಾವುದೇ ಪಕ್ಷದ ಸರ್ಕಾರ ಬರಲಿ ಯಾರೇ ಇರಲಿ, ಯಾರೇ ಇಲ್ಲಿ ಕುಳಿತುಕೊಳ್ಳಲಿ ಆ ಕೆಲಸವನ್ನು ಮಾಡಬೇಕಾಗುತ್ತದೆ. From my heart I am telling this one. ಏನಾದರೂ ಮಾಡಿ ಇದನ್ನು ಸದುಪಯೋಗ ಮಾಡಿಕೊಳ್ಳಬೇಕೆನ್ನುವುದು ಪಕ್ಷಾತೀತವಾಗಿ ನಮ್ಮೆಲ್ಲರ ಅಭಿಪ್ರಾಯವಾಗಿದೆ. ಆ ಕೆಲಸವನ್ನು ಮಾಡಿಕೊಳ್ಳುತ್ತಾ ಹೋಗೋಣ. ಇನ್ನು ಅಧಿಕಾರಿಗಳು ವಾಲೆಂಟರಿ ರಿಟೈರ್‌ಮೆಂಟ್ ವಿಚಾರದಲ್ಲಿ voluntary retirement much more attractive ಮಾಡಬೇಕು ಎನ್ನತಕ್ಕ ದೃಷ್ಟಿಯಿಂದ ಆ ಸಲಹೆಯನ್ನು ಕೊಡುತ್ತಿದ್ದೇನೆ, ಅದು ಒಂದು ಎರಡನೆಯದಾಗಿ, either further reducing the qualifying service or by enhancing the quantum of pensionary benefits or both. ಈ ಎರಡನ್ನು ಬೇಕಾದರೆ ಮಾಡಿಕೊಳ್ಳಬಹುದು. ಇದಕ್ಕೆ detailed scheme will be worked out by our officers. ಅದಕ್ಕೆ ಅನೇಕ ಜನ ಸದಸ್ಯರು ಸಲಹೆಗಳನ್ನು ಕೊಟ್ಟಿದ್ದಾರೆ. ಇನ್ನು ಏನಾದರೂ ಇದರ ಬಗ್ಗೆ ಸಲಹೆಗಳನ್ನು ಕೊಡುವುದಿದ್ದರೆ ದಯಮಾಡಿ ಬರೆದು ಕೊಡಿ. ಏಕೆಂದರೆ ಸದನ ಮುಕ್ತಾಯವಾದರೆ ತಮ್ಮ ಸಲಹೆಗಳನ್ನು ಹೇಳಲು ಸಾಧ್ಯವಾಗುವುದಿಲ್ಲವೆಂದು ತಾವು ತಿಳಿದುಕೊಳ್ಳುವ ಹಾಗಿಲ್ಲ. Please write to me. ದಯವಿಟ್ಟು ಪತ್ರವನ್ನು ಆ ಕಡೆಯ ಸದಸ್ಯರಿರಬಹುದು, ಈ ಕಡೆಯ ಸದಸ್ಯರಿರಬಹುದು, ಯಾರೇ ಇರಬಹುದು ನನಗೆ ಸಲಹೆಯನ್ನು ಬರೆದು ಕಳಿಸಿ ಕೊಡಿ, ಅದನ್ನು ನಾವು ನಮ್ಮ ಡಿ.ಪಿ.ಎ.ಆರ್.ಅನ್ನು consult ಮಾಡಿ ಕೊಂಡು ನಾವು ಅದರ ಬಗ್ಗೆ ಒಂದು ಸಂಪೂರ್ಣವಾದ ರೂಪರೇಖೆಯನ್ನು ಕೊಡುತ್ತೇವೆ. ಎನ್ನತಕ್ಕ ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ತಮ್ಮ ಮೂಲಕ ಸದನದ ಗಮನಕ್ಕೆ ತರುತ್ತಿದ್ದೇನೆ.

ಡಾ:ಎನ್.ಬಿ.ನಂಜಪ್ಪ:- ಉಪಾಧ್ಯಕ್ಷಿಣಿಯವರೆ, austerity measuresನಲ್ಲಿ 58 ವರ್ಷದ ವರೆಗೆ ಸರ್ಕಾರಿ ಸೇವೆಯನ್ನು 55 ವರ್ಷಕ್ಕೆ ಇಳಿಸಬೇಕೆಂದು ಮೊದಲು ಏನು ಒಂದು ಪ್ರಪೋಸಲ್ ಇತ್ತು ಅದನ್ನು ಮಾಡಿದರೆ job opportunitiesಜಾಸ್ತಿಯಾಗುತ್ತದೆ. ಮತ್ತು ಅನೇಕ ಜನರು 55 ವರ್ಷಗಳ ಹೊತ್ತಿಗೆ They will be damntired about their services ಅವರನ್ನು ನಿವೃತ್ತಿಗೊಳಿಸಿದರೆ ಎರಡು ರೀತಿಯಲ್ಲಿ ಅನುಕೂಲವಾಗುತ್ತದೆ. ಆದ್ದರಿಂದ ಅದರ ಬಗ್ಗೆ ತಾವು ಚಿಂತನೆ ಮಾಡಬೇಕು.

Sri.S.BANGARAPPA:- That is about the retirement age. ತಾವು ಹೇಳುತ್ತಿರುವುದು ನಿವೃತ್ತಿಯ ವಯಸ್ಸಿನ ಬಗ್ಗೆ ಎಂದು ಕಾಣಿಸುತ್ತದೆ.

ಶ್ರೀ ಹರ್ಷಕುಮಾರಗೌಡ:-ಇದರಿಂದ ಯುವಕರಿಗೆ ಹೆಚ್ಚು ಉದ್ಯೋಗಾವಕಾಶವಾಗುತ್ತದೆ.

ಶ್ರೀ ಎಸ್.ಬಂಗಾರಪ್ಪ:- ನೀವು ಹೇಳುವುದು ಸರಿ. 55 ವರ್ಷಕ್ಕೆ ನಿವೃತ್ತಿ ಮಾಡಿದರೆ ಅನೇಕ ಜನರಿಗೆ ಉದ್ಯೋಗವನ್ನು ದೊರಕಿಸಬಹುದು. 55 ಕ್ಕೆ ನಿವೃತ್ತಿಯಾಗತಕ್ಕದ್ದು ಮೊದಲು ಇತ್ತು. ಆ ರೀತಿ ಇದ್ದುದನ್ನು ಆ ಕಾಲದಲ್ಲಿ 58 ಕ್ಕೆ ಏರಿಸಿದ್ದಾರೆ. ನಾನು ಈಗ ಅದನ್ನು ಸಧ್ಯಕ್ಕೆ ಬದಲಾವಣೆ ಮಾಡಬಾರದು ಅದು 58 ಕ್ಕೇ ಇರಲಿ ಎಂಬ ಉದ್ದೇಶವನ್ನು ನಾವು ಇಟ್ಟುಕೊಂಡಿದ್ದೇವೆ. ಮುಂದೆ ನೋಡೋಣ ತಮ್ಮ ಸಲಹೆ ಮೇಲೆ.....

ಶ್ರೀ ಎಲ್.ಆರ್.ಶಿವರಾಮೇಗೌಡ:- ಶ್ರೀಮಾನ್ ವೀರೇಂದ್ರ ಪಾಟೀಲ್‌ರವರು ಅಧಿಕಾರಕ್ಕೆ ಬಂದಾಗ ನಮಗೆ ಒಂದು ವರ್ಷ ಕಾಲಾವಕಾಶವನ್ನು ಕೊಡಿ ನಾವು ಅದನ್ನು 58 ರಿಂದ 55 ಕ್ಕೆ ಇಳಿಸುತ್ತೇವೆಂದು ಈ ಸದನದಲ್ಲಿ ಹೇಳಿದ್ದರು. ಆದ್ದರಿಂದ ತಾವು ಅದರ ಬಗ್ಗೆ ಚಿಂತನೆ ಮಾಡಿದರೆ ಮಾನ್ಯ ಹರ್ಷಕುಮಾರಗೌಡರವರು ಹೇಳಿದಂತೆ ಯುವಕರಿಗೆ ಉದ್ಯೋಗ ಸಿಗುತ್ತದೆ.

ಶ್ರೀ ಎಸ್.ಬಂಗಾರಪ್ಪ:-ಈ ಮಧ್ಯೆ ನಾವು ಏನು ಮಾಡೋಣವೆಂದರೆ, ...

ಶ್ರೀ ಆರ್.ದಯಾನಂದರಾವ್:- ಬೇಕಾದಷ್ಟು ಯುವಕರು ಕೆಲಸವಿಲ್ಲದೆ ಇದ್ದಾರೆ. ಆದ್ದರಿಂದ ನಿವೃತ್ತಿ ವಯಸ್ಸನ್ನು 55 ವರ್ಷಕ್ಕೆ ತಂದರೆ ಅನುಕೂಲವಾಗುತ್ತದೆ.

ಶ್ರೀ ಎಸ್.ಬಂಗಾರಪ್ಪ:- ದಯಾನಂದ ರಾವ್‌ರವರೆ ನಾನು ಏನು ಹೇಳುತ್ತಿದ್ದೇನೆಂದರೆ, ಈಗ ವಾಲಂಟರಿ ರಿಟೈರ್ ಮೆಂಟ್ ಮತ್ತೊಂದು, ಇದೆಲ್ಲವನ್ನು ಕೊಡಬೇಕು austerity meassures ನಲ್ಲಿ ನಾವು ಏನು ಮಾಡಬೇಕೆಂದು ಹೇಳುತ್ತಿದ್ದೇವೆ. ಇದನ್ನು ನಾವು ಪಕ್ಕಾ ಮಾಡಿ ಜಾರಿಗೆ ಕೊಟ್ಟು ನೋಡೋಣ. ಎಷ್ಟು ಜನ ಹೋಗುತ್ತಾರೆ ಏನಾಗುತ್ತದೆ ಎಂದು let us take the net result of these schemes. ಆಮೇಲೆ ಅದನ್ನು ತೆಗೆದುಕೊಳ್ಳೋಣ. ಅದು ಏನಾದರೂ ವಿಚಾರ ಇದ್ದರೆ ಆ ಸಮಯದಲ್ಲಿ ವಿಚಾರ ಮಾಡೋಣ. ಇದು ಆದಮೇಲೆ ಮತ್ತೊಂದು ವಿಚಾರವಿದೆ. ಅದೇನೆಂದರೆ ಮಾನ್ಯ ಶಾಸಕರ ಬಗ್ಗೆ ಅಧಿಕಾರಿಗಳು ಗೌರವವನ್ನು ಕೊಡತಕ್ಕ ವಿಚಾರ ಬಹಳ ಅಧಿಕಾರಿಗಳು ನಾವು ಹೋದಾಗ ತುಂಬಾ ಗೌರವವನ್ನು ಕೊಡತಕ್ಕದ್ದನ್ನು ನೋಡಿದ್ದೇವೆ. ಗೌರವವನ್ನು ಕೊಡದೆ ಉದ್ಧಟತನದಿಂದ ವರ್ತನೆ ಮಾಡತಕ್ಕ ಅಧಿಕಾರಿಗಳು ಕೂಡ ಇದ್ದಾರೆ. ಅದು ನಿಮ್ಮ ಗಮನಕ್ಕೂ ಬಂದಿದೆ, ನನ್ನ ಗಮನಕ್ಕೂ ಕೂಡ ಬಂದಿದೆ, ನಮ್ಮೆಲ್ಲರ ಗಮನಕ್ಕೂ ಬಂದಿದೆ. ಆದುದರಿಂದ ಕೇಂದ್ರ ಸರ್ಕಾರದವರು through Home Ministry ಹಿಂದೆ ಕೆಲವು ಸುತ್ತೋಲೆಗಳನ್ನು ಕಳುಹಿಸಿಕೊಟ್ಟಿದ್ದಾರೆ. ಅದಕ್ಕೆ ಅನುಗುಣವಾಗಿ ನಾವು ಕೂಡ ನಮ್ಮ home minostry ಯಿಂದ ಅಧಿಕಾರಿಗಳಿಗೆಲ್ಲ ಸುತ್ತೋಲೆಯನ್ನು ಕಳಿಸಿಕೊಟ್ಟಿದ್ದೇವೆ. ಕಂಪ್ಲೇಂಟುಗಳು ಮೊನ್ನೆ ಮೇಲ್ಮನೆಯಲ್ಲಿ ಮತ್ತು ಇಲ್ಲೂ ಕೂಡ ಬಂದಿರುವಂಥಾದ್ದು ನಮ್ಮ ಗಮನಕ್ಕೆ ಬಂದಿದೆ. ಇದರಲ್ಲಿ ಎರಡು ವಿಚಾರಗಳನ್ನು ನಾವು ಗಮನಿಸಬೇಕು. ನೀವು ಹೋದಾಗ ಆಯಾಯ ಕಾರ್ಯಾಲಯದಲ್ಲಿ ಗೌರವವನ್ನು ಹೇಗೆ ಕೊಡಬೇಕು ಎನ್ನುವುದು ಬಂದಾದರೆ, ಮತ್ತೊಂದು ಆಯಾಯಾ ಕ್ಷೇತ್ರದಲ್ಲಿ ಯಾವುದೇ ಪಕ್ಷದ ಮಾನ್ಯ ಸದಸ್ಯರಿರಲಿ ಅವರಿಗೆ ಗೌರವ ಕೊಡಬೇಕು. ಏಕೆಂದರೆ ಅವರು ಜನರ ಪ್ರತಿನಿಧಿಗಳು. ಪ್ರಜಾಪ್ರ ಭುತ್ವದಲ್ಲಿ ಪ್ರಜೆಗಳೇ ಪ್ರಭುಗಳು ಆಗಬೇಕು, ಇಲ್ಲಿದಿದ್ದರೆ ಪ್ರಜಾಪ್ರಭುತ್ವ ಆಗುವುದಕ್ಕೆ ಸಾಧ್ಯವಿಲ್ಲ. ಆದರೆ ಪ್ರತಿಯೊಂದಕ್ಕೂ ಅವರೇ ಬರುವುದಕ್ಕೆ ಆಗುವುದಿಲ್ಲವೆಂದು ಜನ ಮತವನ್ನು ಕೊಟ್ಟು ನಮ್ಮನ್ನು ಆರಿಸಿ ಕಳುಹಿಸಿಕೊಟ್ಟಿದ್ದಾರೆ. ಒಬ್ಬ ಅಧಿಕಾರಿ ಗೌರವ ನಮಗೆ ಕೊಟ್ಟರೆ ಆಯಾಯ ಕ್ಷೇತ್ರದ ಜನರಿಗೆ ಹೋಗಿ ಸಂದಾಯವಾಗಬೇಕು ಎನ್ನುವ ಮೂಲ ನೀತಿ ಅದರಲ್ಲಿ ಅಡಗಿದೆ. ನಾವು ಯಾರಾದರೂ ಈ ವಿಚಾರವನ್ನು ಮನಗಾಣಬೇಕು. ಯಾರು ಮನಗಾಣಬೇಕು ಎಂದರೆ ಅಧಿಕಾರಿಗಳು ಮನಗಾಣಬೇಕು. ಅಧಿಕಾರಿಗಳು ಇದನ್ನು ತಿಳಿದುಕೊಳ್ಳದೇ ಇದ್ದರೆ, ಇದು ಕೆಲವು ಸಾರಿ ಕುದುರೆಯನ್ನು ಅಥವಾ ಎತ್ತನ್ನು ಗಾಡಿಯ ಮುಂದಕ್ಕೆ ಕಟ್ಟುವ ಬದಲು ಎತ್ತಿನ ಮುಂದಕ್ಕೆ ಗಾಡಿಯನ್ನು ತೆಗೆದುಕೊಂಡು ಹೋಗಿ ಗಾಡಿ ಎಳೆಯಲಿ ಎಂದರೆ ಗಾಡಿ ಮುಂದಕ್ಕೆ ಬರುವುದಿಲ್ಲ. they are trying to put the cart before the Horse. ಇವತ್ತು ಏನಾಗಿದೆಯೆಂದರೆ ಬಹಳ ಜನ ಅಧಿಕಾರಿಗಳು ತಪ್ಪು ತಿಳಿದುಕೊಳ್ಳುತ್ತಿದ್ದಾರೆ. ಏಕೆಂದರೆ ಅದು ಆಂಗ್ಲರ ಆಳ್ವಿಕೆ ಕಾಲದಿಂದ ಬಂದಿರತಕ್ಕಂತಹ, ಆ ಒಂದು ಪ್ರಭುತ್ವದ ಮಾನಸಿಕವಾಗಿರತಕ್ಕಂತಹ ಬಿಗಿತನದ ನೀತಿಯಲ್ಲಿ ಅವರು ಬರುವಂಥಾದ್ದನ್ನು ನಾವು ಕಣ್ಣಾರೆ ಕಂಡುಕೊಂಡು ಬಂದಿದ್ದೇವೆ. This should be stopped. We cannot allow these nonsense things to go ahead and to go on like this. ಇದು ಯಾರೂ ಕೂಡ ಒಪ್ಪುವುದಕ್ಕೆ ಸಾಧ್ಯವಿಲ್ಲದೆ ಇರತಕ್ಕಂತಹ ವಿಚಾರ. ಇವತ್ತು ಒಬ್ಬ ವ್ಯಕ್ತಿ ಒಂದು ಆಫೀಸಿಗೆ ಹೋದರೆ ಬರೀ ಶಾಸಕರಲ್ಲ, ಜನ ಹೋದರೂ ಕೂಡ ಅಲ್ಲಿ ಗೌರವ ಕೊಡಬೇಕು. ಇದು ಮೊದಲು ಜನರಿಂದ ಪ್ರಾರಂಭವಾಗಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ:- ಅಲ್ಲಿ ಸಾಮಾನ್ಯ ಜನಗಳು ಹೋದರೆ ಅಧಿಕಾರಿಗಳು ಒಳಗಡೆ ಬಿಡುವುದಿಲ್ಲ.

ಶ್ರೀ ಎಸ್.ಬಂಗಾರಪ್ಪ:- ಇಲ್ಲ, ಇಲ್ಲ, ಯಡಿಯೂರಪ್ಪನವರೇ, ತಮಗೂ ಗೌರವ ಕೊಡಬೇಕು,

ಅವರಿಗೂ ಗೌರವ ಕೊಡಬೇಕು. ಏಕೆಂದರೆ, ಇಲ್ಲಿ ಒಬ್ಬ ವ್ಯಕ್ತಿ ನೌಕರಿ ಕೊಡುತ್ತಿದ್ದಾನೆಂದರೆ ಅವನಿಗೆ ಯಾರೋ ಒಬ್ಬ ಯಜಮಾನ ಇರಲೇಬೇಕೆಂದು ತೀರ್ಮಾನ ಆಗುತ್ತದಲ್ಲ. ಒಬ್ಬ ವ್ಯಕ್ತಿ ನೌಕರಿ ಮಾಡುತ್ತಿದ್ದಾನೆಂದರೆ ನೌಕರಿ ಅಂದರೆ ಅರ್ಥವೇನು ? ನೌಕರಿ ಯಜಮಾನ ಆಗುವುದಿಲ್ಲ. ಒಬ್ಬ ವ್ಯಕ್ತಿ ನೌಕರಿ ಮಾಡುತ್ತಾನೆಂದರೆ ನೌಕರಿ ಮಾಡಿಸಿಕೊಳ್ಳುವವರು ಯಾರೋ ಒಬ್ಬರು ಇದ್ದಾರೆಂದು ಆಗುತ್ತದೆ.

ಶ್ರೀ ಎ.ರುಕ್ಮಯ್ಯ ಪೂಜಾರಿ:- ನಾವೆಲ್ಲಾ ವಿರೋಧಪಕ್ಷದ ಶಾಸಕರು. ಬಹುಶ: ತಮ್ಮ ಗಮನಕ್ಕೆ ಬಂದಿರಬಹುದು. ಏನಾಗಿದೆಯೆಂದರೆ, ನಮ್ಮ ನಮ್ಮ ಕ್ಷೇತ್ರದಲ್ಲಿ ನಮ್ಮ ಗಮನಕ್ಕೆ ಬಾರದೇ ನಾವು ಏನೂ ಹೇಳದೇ ಕೂಡ ವರ್ಗಾವಣೆಯಾಗುತ್ತಿದೆ. ಕೆಲವುಕಡೆ ಏನಾಗುತ್ತಿದೆಯೆಂದರೆ, ನಾವು ಕಛೇರಿಗೆ ಹೋದಾಗ ನಮ್ಮಿಂದ ಜಾಸ್ತಿ ಕೆಲಸವಾಗುವುದಿಲ್ಲ, ರೂಲಿಂಗ್ ಪಾರ್ಟಿಯ ಶಾಸಕರಿಂದ ಮಾತ್ರ ಜಾಸ್ತಿ ಕೆಲಸವಾಗುತ್ತದೆ ಎಂದು ತಿಳಿದುಕೊಂಡು ಅವರಿಗೆ ಜಾಸ್ತಿ ಗೌರವ ಕೊಡುವುದು, ನಮಗೆ ಗೌರವ ಕೊಡದೇ ಇರುವುದು, ಹಲವಾರು ಕಛೇರಿಗಳಲ್ಲಿ ಈ ರೀತಿ ಆಗುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುವುದು ಇಷ್ಟೆ, ಯಾವುದೇ ಸಂದರ್ಭದಲ್ಲಿ ಕೂಡ ಆಯಾ ಕ್ಷೇತ್ರದ ಶಾಸಕರ ಒಪ್ಪಿಗೆ ಇಲ್ಲದೇ ವರ್ಗಾವಣೆ ಮಾಡುವುದನ್ನು ನಿಲ್ಲಿಸಿದಾಗ ಖಂಡಿತ ಸ್ವಲ್ಪ ಬದಲಾವಣೆ ಆಗಬಹುದೆಂದು ಕಾಣುತ್ತದೆ. ಶಾಸಕರ ಒಪ್ಪಿಗೆ ಇಲ್ಲದೆ ಆಯಾ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕಂತಹ ಅಧಿಕಾರಿಗಳನ್ನು ವರ್ಗಾವಣೆ ಮಾಡುವುದನ್ನು ನಿಲ್ಲಿಸಿದರೆ ನಾವು ಆಯಾ ಕ್ಷೇತ್ರದ ಶಾಸಕರ ಅಭಿಪ್ರಾಯಕ್ಕೆ ಬೆಲೆ ಕೊಟ್ಟು ವರ್ಗಾವಣೆಯನ್ನು ಮಾಡಿದರೆ ಸ್ವಲ್ಪ ಅನುಕೂಲವಾಗುತ್ತದೆ.

ಶ್ರೀ ಎಸ್.ಬಂಗಾರಪ್ಪ:- ರುಕ್ಮಯ್ಯ ಪೂಜಾರಿಯವರು ಈ ರೀತಿ ಹೇಳುತ್ತಾರೆ. ಆದರೆ ಮೇಲಿನ ಸದನದಲ್ಲಿ ಏನು ಹೇಳಿದರೆಂದರೆ ಆಯಾ ಕ್ಷೇತ್ರದ ಶಾಸಕರು ಮತ್ತೊಬ್ಬರು ಹೇಳಿದಂತಹ ವ್ಯಕ್ತಿಗಳನ್ನು ವರ್ಗಾವಣೆ ಮಾಡುತ್ತಿದ್ದರೆ ಒಳ್ಳೆಯದಲ್ಲ, ಶಾಸಕರು ತಮ್ಮ ಜನರನ್ನು ತೆಗೆದುಕೊಂಡು ಹೋಗಿ ತುಂಬಿ ಕೊಳ್ಳುತ್ತಾರೆ. ದಯವಿಟ್ಟು ಆ ಪದ್ಧತಿಯನ್ನು ನಿಲ್ಲಿಸಿ, ನಿಮಗೆ ಸರಿ ಕಂಡವರನ್ನು ವರ್ಗಾವಣೆ ಮಾಡಿ ಎಂದು ನಿನ್ನೆ ಹೇಳಿದರು.

ಶ್ರೀ ಎ.ರುಕ್ಮಯ್ಯ ಪೂಜಾರಿ:- ಅದನ್ನು ಮಾಡಿದರೆ ನಮ್ಮ ಪೂರ್ತಿ ಒಪ್ಪಿಗೆ ಇದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಇವತ್ತು ತಾವು ನಿಶ್ಚಯ ಮಾಡುವುದಾದರೆ, ಇದಕ್ಕೋಸ್ಕರ ತಮಗೆ ಮೇಲ್ಮನೆಯಲ್ಲಿ ಕೊಟ್ಟ ಸಲಹೆ ಸರಿ ಇದೆ. ಈ ವರ್ಗಾವಣೆಯಲ್ಲಿ ಪ್ರಾಮಾಣಿಕ ವ್ಯಕ್ತಿಗಳನ್ನು ಹಾಕುವಂತಹ ಜವಾಬ್ದಾರಿಯನ್ನು ಅಧಿಕಾರಿಗಳಿಗೆ, ಉನ್ನತ ಅಧಿಕಾರಿಗಳಿಗೆ ಬಿಡಿ. ತಪ್ಪು ಮಾಡಿದಂತಹ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವ ಪದ್ಧತಿ ತನ್ನಿ. ಯಾವುದೇ ಶಾಸಕರು ಈ ಕೆಲಸದಲ್ಲಿ ತೋಡಗದಂತೆ ನಿರ್ದಿಷ್ಟವಾದಂತಹ ಒಂದು ನಿಲುವನ್ನು ತೆಗೆದುಕೊಂಡರೆ, ಅದು ಒಂದು ಹೊಸ ಪ್ರಯೋಗ ನೋಡೋಣ. ಏನಾದರೂ ಒಳ್ಳೆಯ ಪರಿಹಾರ ಸಿಗಬಹುದೇನೋ. ಆದಕ್ಕೆ ನಮ್ಮ ಬೆಂಬಲವಿದೆ. ಆದರೆ ಇಲ್ಲಿ ಮಾನ್ಯ ರುಕ್ಮಯ್ಯ ಪೂಜಾರಿಯವರು ಪ್ರಸ್ತಾಪ ಮಾಡಿದರು. ತಾವು ಹೇಗಾದರೂ ಮಾಡಿ. ಈಗಾಗಲೇ ವಿರೋಧಪಕ್ಷದವರು ಕೆಲವರು ಇದ್ದೇವೆ. ಆದರೆ ಅಧಿಕಾರಿಗಳಿಗೆ ವಿರೋಧಪಕ್ಷದವರ ಜೊತೆ ಮಾತನಾಡುವುದು ತಪ್ಪು, ವಿರೋಧಪಕ್ಷದ ಕಡೆ ಕೆಲಸ ಮಾಡುವುದಕ್ಕೆ ನಮಗೆ ಆಗುವುದೇ ಇಲ್ಲ ಎನ್ನುವ ವಾತಾವರಣ ಇವತ್ತು ಏನು ರಾಜ್ಯದಲ್ಲಿ ಮೂಡಿದೆ, ಬಹುಶ: ಏನಾದರೂ ಮಾಡಿ ಇದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡಿ. ವರ್ಗಾವಣೆ ಪಟ್ಟಿ ತೆಗೆದು ನೋಡಿ, ಒಂದು ವರ್ಷದಲ್ಲಿ 4-5 ವರ್ಗಾವಣೆಗಳನ್ನು ನಾವು ಕೇಳಿದ್ದೇವೆಯೇ ಎಂದು ನೋಡಿ. ನಿಮ್ಮ ಸರ್ಕಾರಕ್ಕೂ ಒಳ್ಳೆಯ ಹೆಸರು ಬರುತ್ತದೆ, ಅಧಿಕಾರಿಗಳೂ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಾರೆ. ಈ ವರ್ಗಾವಣೆ ಎನ್ನುವುದು ಒಂದು ದಂಧೆಯಾಗಿದೆ. ಇದು ನಿಲ್ಲಿಸಬೇಕು. ದಯವಿಟ್ಟು ಈ ಬಗ್ಗೆ ತೀವ್ರ ಕ್ರಮ ತೆಗೆದುಕೊಳ್ಳಿ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:- ನಾವು ಯಾವುದೋ ಒಂದು ಕಾರಣಕ್ಕಾಗಿ ಸದನದ ಕಾರ್ಯಕಲಾಪಕ್ಕೆ ಬಂದು ಕುಳಿತಿದ್ದೇವೆ, ನಾವು ಮಾತನಾಡುವುದು ಯಾವುದೂ ನಿಮಗೆ ಹಿಡಿಸುವುದಿಲ್ಲ, ಮಾತನಾಡಬೇಡಿ ಎಂದು ಹೇಳಿದರೆ ಸುಮ್ಮನೆ ಕುಳಿತುಕೊಂಡಿರುತ್ತೇವೆ, ಹೊರಗಡೆ ಎದ್ದು ಹೋಗುತ್ತೇವೆ. ಆದರೆ, ಮಾನ್ಯ ಮುಖ್ಯಮಂತ್ರಿಗಳು ಕಳಕಳಿಯನ್ನು ವ್ಯಕ್ತಪಡಿಸಿದಾಗ ಹೇಳಬೇಕಾಗುತ್ತದೆ. ವರ್ಗಾವಣೆ ವಿಷಯದಲ್ಲಿ ಅನೇಕ ಸಂದರ್ಭದಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡತಕ್ಕಂಥ ಅಧಿಕಾರಿಗಳಿಗೆ ಅಡ್ಡಿ ಆತಂಕ ತರುತ್ತಾ ಇದೆ. ಪ್ರಾಮಾಣಿಕವಾಗಿ ನಡೆದುಕೊಂಡರೆ ಆ ನಿಮಿಷಕ್ಕೆ ನನ್ನ ಇಲ್ಲಿಂದ ಎತ್ತಂಗಡಿ ಆಗುತ್ತದೆ ಎನ್ನುವಂಥ ಒಂದು ಭಯ ಅವನಲ್ಲಿ ಮೂಡುತ್ತಾ ಇದೆ. ಆದಷ್ಟು ಶಾಸಕರ ಪ್ರವೇಶ ಇದರಲ್ಲಿ ಆದರೆ ಇನ್ನೂ ಒಳ್ಳೆಯ ಕೆಲಸ ಆಗಬಹುದು ಎನ್ನುವ ಒಂದು ಅಭಿಪ್ರಾಯ ಇದೆ. ತಾವು ಅಧಿಕಾರದಲ್ಲಿ ಇದ್ದೀರಿ ಮಾಡಿ, ಇದು ಒಂದು ಸಲಹೆ ಅಷ್ಟೆ.

ಶ್ರೀ ಆರ್.ದಯಾನಂದ್‌ರಾವ್:- ಮಾನ್ಯ ಅಧ್ಯಕ್ಷಿಣಿಯವರೆ, ಮಾನ್ಯ ಮುಖ್ಯ ಮಂತ್ರಿಗಳಿಗೆ ನಾನು ಹೇಳುವುದು ಏನೆಂದರೆ, ಅಪ್ಪರ್ ಹೌಸ್‌ನಲ್ಲಿ ಏಕೆ ಆ ಒಪಿನಿಯನ್ ಕೊಟ್ಟಿದ್ದಾರೆಂದರೆ, ನಾವು ಕಾಂಗ್ರೆಸ್ ಶಾಸಕರು ಈಗ ಅಬ್ಸಲ್ಯೂಟ್ ಮೆಜಾರಿಟಿ ಇದ್ದೇವೆ. ಆದರೆ ಅವರು ಅಧಿಕಾರದಲ್ಲಿ ಇದ್ದಾಗ ಒಬ್ಬ ಜನತಾ ಪಾರ್ಟಿ ವರ್ಕರ್ ಒಂದು ಚೀಟಿಯನ್ನು ಕೊಟ್ಟರೆ ಆ ರೀತಿ ಕೊಟ್ಟಂತವರನ್ನು ಹಾಕಿ ಅವರು ಅಧಿಕಾರವನ್ನು ಮಾಡಿದರು. ಈಗ ಅವರು ಅಲ್ಲಿ ಮೆಜಾರಿಟಿ ಇರುವುದರಿಂದ ಆ ಸಜೆಷನ್ ಕೊಟ್ಟಿದ್ದಾರೆ. ಆದ್ದರಿಂದ ಇಲ್ಲಿ ಮಾನ್ಯ ಯಡಿಯೂರಪ್ಪನವರು ಹೇಳುವಂಥ ಧಾಟಿ ನಮ್ಮ ಪ್ರಭಾವವನ್ನು ಕಡಿಮೆ ಮಾಡುವುದಕ್ಕೋಸ್ಕರ ಹೇಳುವಂಥ ಧಾಟಿ. ಆದ್ದರಿಂದ ನಾವು ಏನನ್ನು ಈಗ ಮಾಡುತ್ತಿದ್ದೇವೆ ಅದನ್ನೆ ಮಾಡಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಎ.ಕೆ.ಅನಂತಕೃಷ್ಣ:- ಸನ್ಮಾನ್ಯ ಅಧ್ಯಕ್ಷಿಣಿಯವರೆ, ಮಾನ್ಯ ಯಡಿಯೂರಪ್ಪನವರು ಬಹಳ ಪ್ರಾಮುಖ್ಯವಾದ ಒಂದು ವಿಷಯವನ್ನು ಸಭೆಯ ಮುಂದೆ ಇಟ್ಟಿದ್ದಾರೆ, ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದಾರೆ. ಶ್ರೀಮಾನ್ ರುಕ್ಮಯ್ಯ ಪೂಜಾರಿಯವರು ನಮ್ಮ ಕ್ಷೇತ್ರಗಳಲ್ಲಿ ಅಂದರೆ ವಿರೋಧಪಕ್ಷಗಳ ಸದಸ್ಯರ ಕ್ಷೇತ್ರಗಳಲ್ಲಿ, ವಿರೋಧ ಪಕ್ಷದ ಸದಸ್ಯರ ಅಭಿಪ್ರಾಯವನ್ನು ಪಡೆದು ಈ ಟ್ರಾನ್ಸ್‌ಫರ್‌ಸನ್ನು ಮಾಡುವುದು ಸೂಕ್ತ, ಏಕೆಂದರೆ ನಮ್ಮ ಮಾತು ನಡೆಯುವುದಿಲ್ಲ ಎಂದು ಹೇಳಿದ್ದಾರೆ. ನನ್ನ ಅನುಭವದಲ್ಲಿ ವಿರೋಧಪಕ್ಷದ ಕೆಲಸ ಎಷ್ಟು ಚೆನ್ನಾಗಿ ನಡೆಯುತ್ತದೆ ಎಂದು ಹೇಳಿದರೆ, ಆಡಳಿತ ಪಕ್ಷದವರು ಸಾಗುವುದಿಲ್ಲ. ಆ ಮಾತನ್ನು ಹೇಳಬೇಕಾದ ಅವಶ್ಯಕತೆ ಇಲ್ಲ. ಎಷ್ಟೇ ಆಗಲಿ, ವಿರೋಧಪಕ್ಷದವರು ಮತ್ತೆ ಮತ್ತೆ ಗೆದ್ದು ಬರುವುದಕ್ಕೆ ಸಾಧ್ಯವಿಲ್ಲ. ಅದು ಒಂದು, ಎರಡನೆಯದು, ಈ ಟ್ರಾನ್ಸಫರ್ ವಿಷಯದಲ್ಲಿ ಸದಸ್ಯರ ಅಭಿಪ್ರಾಯವನ್ನು ತೆಗೆದುಕೊಂಡು, ಅವರು ಹೇಳಿದ ಹಾಗೆ ಮಾಡಬೇಕು ಎನ್ನುವುದನ್ನು ನಾನು ಒಪ್ಪುವುದಿಲ್ಲ. ಆದರೆ, ಸದಸ್ಯರ ಸಲಹೆ ಏನಾದರೂ ಇದ್ದರೆ ಅದು ತಪ್ಪು ಆಗುತ್ತದೆ ಎನ್ನುವುದನ್ನು ನಾನು ಒಪ್ಪಿಕೊಳ್ಳುವುದಕ್ಕೆ ತಯಾರಾಗಿಲ್ಲ. ಹಸ್ತಕ್ಷೇಪ ಇರಬಾರದು ಎನ್ನುವುದು ಬಹಳ ಮುಖ್ಯ. ಇಂಟರ್‌ಫಿಯರೆನ್ಸ್ ಇರಬಾರದು. ಇದರಲ್ಲಿ ಯಾವುದೇ ರೀತಿಯ ದಂಧೆ ಇರಬಾರದು. ಯಾರಾದರೂ ಬಂದು ನಾವು ಕಷ್ಟದಲ್ಲಿ ಇದ್ದೇವೆ ಆಡಳಿತದಲ್ಲಿ ನಮಗೆ ಅನ್ಯಾಯವಾಗಿದೆ, ನಾವು ಯೋಗ್ಯವಾಗಿ ನಿಷ್ಠೆಯಿಂದ ಕೆಲಸ ಮಾಡುತ್ತಿರುವಾಗ ಬೇರೆ ಮೇಲಿನವರೋ, ಪಕ್ಕದವರೋ ತೊಂದರೆ ಕೊಡುತ್ತಿದ್ದಾರೆ ಎಂದು ಯಾರಾದರೂ ಬಂದರೆ, ಇಲ್ಲವೇ ಅವರ ಮನೆಯಲ್ಲಿ ಕಷ್ಟ ಕಾರ್ಪಣ್ಯಗಳು ಇದ್ದು ವರ್ಗಾವಣೆ ಮಾಡಬೇಕು ಎಂದು ಇದ್ದರೆ ಆ ಸಮಯದಲ್ಲಿ ಒಂದು ರೆಕಮಂಡೇಷನ್ ಮೆತೆಡ್‌ನಲ್ಲಿ ಹೇಳುವುದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಆದರೆ ಇದೇ ಒಂದು ದಂಧೆ, ಟ್ರಾನ್ಸ್‌ಫರ್ ಪ್ಲೇಗ್ ಹಾಗೆ ಆಗಿಬಿಡುವುದು ಎಂದರೆ ತಪ್ಪಾಗುತ್ತದೆ. ಅದನ್ನು ನಾನು ಯಾವತ್ತಿಗೂ ವಿರೋಧ ಮಾಡಿದ್ದೇನೆ, ಇವತ್ತಿಗೂ ಅದೇ ಮಾತನ್ನು ಹೇಳುತ್ತೇನೆ. ಈ ಒಂದು ಸಲಹೆಯನ್ನು ಮಾನ್ಯ ಮುಖ್ಯಮಂತ್ರಿಗಳು ತೀವ್ರವಾಗಿ ಗಮನಿಸಬೇಕು ಎಂದು ನಾನು ಹೇಳುತ್ತೇನೆ. ಯಾವುದೇ ಕಾರಣಕ್ಕೆ ನಮ್ಮ ಸದಸ್ಯರ ಒಂದು ಇಂಟರ್‌ಫಿಯರೆನ್ಸ್ ಆಗದಂತೆ

ಮಾಡಬೇಕು.

ಶ್ರೀ ಎಸ್.ಬಂಗಾರಪ್ಪ:-ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಸದಸ್ಯರ ಅಭಿಪ್ರಾಯ ಯೋಗ್ಯವಾಗಿದೆ, ಅದನ್ನು ಗಮನದಲ್ಲಿ ನಾವು ಇಡೋಣ.

ಶ್ರೀ ಕರಿಯಣ್ಣ:- ಸರ್ಕಾರದ ಕಾರ್ಯಕ್ರಮಗಳನ್ನು ಜಾರಿಗೆ ತರದೇ ಇರತಕ್ಕಂಥ ಅಧಿಕಾರ ವರ್ಗದವರು ಇದ್ದಾರೆ. ಆಗ ನಾವು ಇಂಟರ್‌ಫಿಯರ್ ಆಗಲೇಬೇಕಾಗುತ್ತದೆ. ಅಲ್ಲಿಗೆ ಶಾಸಕರು ಇಂಟರ್‌ಫಿಯರೇ ಆಗಬಾರದು ಎನ್ನತಕ್ಕಂಥದ್ದು ಸರ್ವಾಂಗ ತಪ್ಪಾಗುತ್ತದೆ.

(ಗೊಂದಲ)

ಶ್ರೀ ಎಸ್.ಬಂಗಾರಪ್ಪ:- ಮಾನ್ಯ ಉಪಾಧ್ಯಕ್ಷಿಣಿಯವರೇ , ನಾನು ಈ ಮಾತನ್ನು ಮೂಲಭೂತವಾಗಿ ಹೇಳುವುದಕ್ಕೆ ಒಂದು ಕಾರಣ . ಪ್ರಜಾಪ್ರಭುತ್ವದಲ್ಲಿ ಪ್ರಜೆಗಳಿಗೆ ಗೌರವ ಸಿಗಬೇಕು ಎನ್ನತಕ್ಕಂಥ ದೃಷ್ಟಿಯಿಂದ ನಾನು ಮಾತನಾಡಬೇಕು. ಅದು ನನ್ನ ಆದ್ಯ ಕರ್ತವ್ಯ ಎಂದು ತಿಳಿದಿದ್ದೇನೆ. ಇದು ಎಷ್ಟೇ ಊನವಾಗಿದ್ದರೂ, ಆಚರಣೆ ವಿಚಾರದಲ್ಲಿ ನಾವು ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತರತಕ್ಕಂಥ ಮನದಿಚ್ಛೆ ನಮಗೆ ಮೂಲಭೂತವಾಗಿ ಇಲ್ಲದಿದ್ದರೆ ಪರಿಣಾಮ ಇನ್ನೂ ಕೆಟ್ಟದಾಗಿ ಹೋಗುತ್ತದೆ ಎನ್ನತಕ್ಕಂಥ ಆತಂಕದಿಂದ ಈ ಮಾತನ್ನು ಹೇಳುತ್ತಿದ್ದೇನೆ. ಇದು ಆದ್ಯ. ಕರ್ತವ್ಯದ ಪ್ರಶ್ನೆ. ಇನ್ನು ಶಾಸಕರು ಹೋದಾಗ ಅಧಿಕಾರಿಗಳು ಯಾವರೀತಿ ಗೌರವವನ್ನು ಕೊಡಬೇಕೆಂಬ ವಿಚಾರದಲ್ಲಿ 19-5-75ರಲ್ಲೇ ಒಂದು ಸುತ್ತೋಲೆ ನಮ್ಮ ರಾಜ್ಯ ಸರ್ಕಾರದ ವತಿಯಿಂದ ಕಳುಹಿಸಿಕೊಡಲಾಗಿದೆ. On the basis of the Circular of the Government of Inida, through its Home Ministry. ನಾವು ಮಾಡಿದ್ದೇವೆ. ಅದರಲ್ಲಿ ಅಧಿಕಾರಿಗಳು ಯಾವರೀತಿ ಗೌರವವನ್ನು ಜನತಾ ಪ್ರತಿನಿಧಿಗಳಿಗೆ ಕೊಡಬೇಕು, ಇತ್ಯಾದಿ ಇತ್ಯಾದಿ ವಿವರಗಳು ತುಂಬಾ ಇವೆ. ಮತ್ತೆ ನಾನು ನಮ್ಮ ಅಧಿಕಾರಿಗಳಿಗೆ ಆದೇಶವನ್ನು ಕಳುಹಿಸಿ ಕೊಡುತ್ತಿದ್ದೇವೆ. ಅದು ವಿಧಾನ ಸಭಾ ಸದಸ್ಯರು ಇರಬಹುದು ಅಥವಾ ಪಾರ್ಲಿಮೆಂಟ್ ಸದಸ್ಯರು ಇರಬಹುದು, ಯಾರೇ ಜನತಾ ಪ್ರತಿನಿಧಿಗಳು ಹೋದರೂ ಕೂಡ ಗೌರವದಿಂದ ಕಾಣಬೇಕೆಂದು ತಿಳಿಸುತ್ತಿದ್ದೇನೆ. ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತರತಕ್ಕಂಥ ವಿಚಾರವನ್ನು ನಾವು ಮಾಡುತ್ತೇವೆ ಅನಂತರ ಅಧಿಕಾರಿಗಳು ಯಾರಾದರೂ ತಪ್ಪು ಮಾಡಿದ್ದಾರೆಂದು ತಿಳಿದುಬಂದರೆ ಅವರ ವಿರುದ್ಧ ಸೂಕ್ತವಾದ ಉಗ್ರ ಕ್ರಮವನ್ನು ತೆಗೆದುಕೊಳ್ಳುವುದರಲ್ಲಿ ಹಿಂದು ಮುಂದು ನೋಡುವುದಿಲ್ಲ. ಸರ್ಕಾರದ ಕಾರ್ಯಕ್ರಮಗಳ ಬಗ್ಗೆ ಕೆಲವು ಅಧಿಕಾರಿಗಳು ಬಹಳ ಚೆನ್ನಾಗಿ ಕೆಲಸಮಾಡಿದ್ದಾರೆಂದು ಹೇಳುವುದಕ್ಕೆ ನನಗೆ ಸಂತೋಷವಾಗುತ್ತಿದೆ. ಉದಾಹರಣೆಗೆ ಆಶ್ರಯ ಕಾರ್ಯಕ್ರಮವನ್ನು ತೆಗೆದುಕೊಳ್ಳೋಣ. ನಾವು ಸರ್ಕಾರದ ವತಿಯಿಂದ ಎಲ್ಲಿ ಜಿಲ್ಲಾಧಿಕಾರಿಗಳ ಒಂದು ಸಮ್ಮೇಳನವನ್ನು ಕರೆದೆವು. ಸರ್ಕಾರದ ಇಚ್ಛೆಯಂತೆ 1991-92ರ ಆರ್ಥಿಕ ವರ್ಷದಲ್ಲಿ 2.60 ಲಕ್ಷ ಮನೆಗಳ ಪೈಕಿ 60 ಸಾವಿರ ಮನೆಗಳನ್ನು ನಗರ ಪ್ರದೇಶಗಳಿಗೆ ಸೀಮಿತಗೊಳಿಸಿದರೆ, 2 ಲಕ್ಷ ಮನೆಗಳನ್ನು ಗ್ರಾಮಾಂತರ ಪ್ರದೇಶಕ್ಕೆ ಸೀಮಿತವಾಗಿಟ್ಟಿದ್ದೇವೆ. ಮನೆಗಳನ್ನು ಕಟ್ಟಿಸತಕ್ಕದ್ದು ಒಂದು ಕೆಲಸವಾದರೆ ಮೊದಲು ಅದಕ್ಕೆ ಬೇಕಾದ ಜಾಗವನ್ನು ಕೊಡಬೇಕು. ಇವತ್ತು ಜನಸಂಖ್ಯೆ ಪ್ರಶ್ನೆ ನಮಗೆ ಒಂದು ತಲೆ ನೋವಾಗಿದೆ. ಆದರೂ ಕೂಡ ಮೂಲಭೂತವಾಗಿ ಕರ್ತವ್ಯ ವಿಮುಖರಾಗುವುದಿಲ್ಲ. ನಾವು ಟೈಂ ಕೊಟ್ಟು ಇಷ್ಟು ದಿವಸದಲ್ಲಿ ಇಷ್ಟು ಸೈಟುಗಳನ್ನು ಕೊಡಬೇಕೆಂದು ತಿಳಿಸಿದೆವು. I must thank all our officers of the State. ನಿಜವಾಗಿಯೂ ಅವರು ಎಷ್ಟು ಚೆನ್ನಾಗಿ ಕೆಲಸಮಾಡಿಕೊಂಡಿದ್ದಾರೆಂದರೆ, ಇದುವರೆಗೆ 4 ಲಕ್ಷ ನಿವೇಶನಗಳನ್ನು ಕೊಟ್ಟಿದ್ದಾರೆ. ಇದು ಯಾರ ಹೊಗಳಿಕೆಗಾಗಿ ಅಲ್ಲ, ಕರ್ತವ್ಯದಲ್ಲಿ ನಿರತರಾಗಿರತಕ್ಕ, ನಿಷ್ಠೆಯಿಂದಿರತಕ್ಕ ಅಧಿಕಾರಿಗಳು ಎಷ್ಟೇ ಚೆನ್ನಾಗಿ ಕೆಲಸವನ್ನು ಮಾಡಿದ್ದಾರೆ. ಇನ್ನೂ ಕೂಡ 4 ಲಕ್ಷ ಸೈಟುಗಳನ್ನು ಕೊಡತಕ್ಕ ಕಾರ್ಯಕ್ರಮ ಇದೆ. ಅಧಿಕಾರಿಗಳು ಪ್ರತಿಯೊಂದು ಹಳ್ಳಿಗಳಿಗೂ ಹೋಗಿ ಬರಬೇಕು. ಅದಕ್ಕಾಗಿ ಟಾಸ್ಕ್‌ಫೋರ್ಸ್ ಕಮಿಟಿಯನ್ನು ಮಾಡಿದ್ದೇವೆ. ಅದು ಚೆನ್ನಾಗಿ ಕೆಲಸ ಮಾಡುತ್ತಿದೆ.

ಕೇವಲ 3-4 ಜನ ಶಾಸಕರು ಈ ಯೋಜನೆಯ ಬಗ್ಗೆ ಅಷ್ಟೇನೂ ಗಮನವನ್ನು ಹರಿಸಿಲ್ಲ ಎನ್ನತಕ್ಕದ್ದು ನನ್ನ ಗಮನಕ್ಕೆ ಬಂದಿದೆ. ಈ ರೀತಿ ಗಮನಹರಿಸದೇ ಇರತಕ್ಕಂಥ ಶಾಸಕರನ್ನು ಆ ಸಮಿತಿಯಿಂದ ತೆಗೆದುಹಾಕುವುದಕ್ಕೂ ಕೂಡ ನಾವು ಹಿಂದೇಟು ಹಾಕಿಲ್ಲ. ಏಕೆಂದರೆ ಜನರಿಗೆ ನಮ್ಮ ಕಾರ್ಯಕ್ರಮ ಮುಖ್ಯವೇ ಹೊರತು ಶಾಸಕರು ಮುಖ್ಯವಲ್ಲ. ಇದು ನಮ್ಮ ಆಡಳಿತದ ವಿಚಾರ. ತಮ್ಮ ಗಮನಕ್ಕೆ ತರುವುದಾದರೆ, ನಮ್ಮ ಆಡಳಿತ ಪಕ್ಷದ ಶಾಸಕರನ್ನೂ ಕೂಡ ನಾವು ತೆಗೆದುಹಾಕಿದ್ದೇವೆ. We don't mind. ಅಧಿಕಾರ ನಾಳೆ ಕಿತ್ತುಕೊಂಡು ಹೋದರೂ ಹೋಗಬಹುದು. ಆದರೆ ನಮ್ಮ ಶಾಸಕರು ಯಾರೇ ಇರಬಹುದು ಅವರು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವವರಿದ್ದಾರೆ. ಇದರಲ್ಲಿ ಆ ಪಕ್ಷ, ಈ ಪಕ್ಷ ಎಂಬುದನ್ನು ಮರೆತು ನಾನು ಮಾತನಾಡುತ್ತಿದ್ದೇನೆ. ಬಹಳ ಚೆನ್ನಾಗಿ ಕೆಲಸ ಮಾಡಿರತಕ್ಕ ಶಾಸಕರೂ ಇದ್ದಾರೆ. ಆದರೆ ಸರ್ಕಾರದ ನೀತಿಯನ್ನನುಸರಿಸಿ ಕೆಲಸಮಾಡಿದ್ದಾರೆ. ಮುಂದೆಯೂ ಕೂಡ ನೀವು ಕೆಲಸ ಮಾಡುವವರಿದ್ದೀರಿ. ತಾವೆಲ್ಲರೂ ಈ ದಿಸೆಯಲ್ಲಿ ಸಹಕಾರವನ್ನು ಕೊಡಬೇಕೆಂದು ತಮ್ಮ ಮೂಲಕ ಮತ್ತೊಮ್ಮೆ ನಾನು ಈ ಸದನಕ್ಕ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಇನ್ನು ನಾವು ಎಷ್ಟೆಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ ಅದನ್ನು ಸರ್ಕಾರಿ ಆದೇಶಕ್ಕನುಗುಣವಾಗಿ ಅಧಿಕಾರಿಗಳು ಕರ್ತವ್ಯನಿರತರಾಗಿ ಕೆಲಸ ಮಾಡುತ್ತಿದ್ದಾರೆ. ನಾವು ಆದೇಶಗಳನ್ನು ಕೊಡುವಾಗ ಕೆಲವು ಸಾರಿ ವ್ಯತ್ಯಾಸವಾಗಿ ಹೋಗಿವೆ. ಅದು ನಮ್ಮ ತಪ್ಪು ಗ್ರಹಿಕೆ ಇರಬಹುದು. ಅನಂತರವಾದರೂ ನಾವು ಅದನ್ನು ಸರಿಪಡಿಸಿಕೊಡದಿದ್ದರೆ ಅಧಿಕಾರಿಗಳು ಒಳ್ಳೆಯ ರೀತಿಯಲ್ಲಿ ಆಡಳಿತವನ್ನು ನಡೆಸುವುದಕ್ಕಾಗುವುದಿಲ್ಲ, ಬಹಳ ಒಳ್ಳೆಯ ರೀತಿಯಲ್ಲಿ ಕೆಲಸವನ್ನು ಮಾಡತಕ್ಕ ಅಧಿಕಾರಿಗಳು ನಮ್ಮ ಕರ್ನಾಟಕ ರಾಜ್ಯದಲ್ಲಿದ್ದಾರೆ. ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯದಲ್ಲಿರತಕ್ಕ ಅಧಿಕಾರಿಗಳು ನೂರಕ್ಕೆ ಎಪ್ಪತ್ತೈದು ಪರ್ಸೆಂಟ್ ಎಷ್ಟೋ ವಾಸಿ. ಈ ಮಾತನ್ನು ಹೇಳುವುದಕ್ಕೆ ನನಗೆ ಬಹಳ ಹೆಮ್ಮೆ ಎನಿಸುತ್ತದೆ. ಈ ಅಧಿಕಾರಿಗಳ ಮುಖಾಂತರ ನಾವು ಈಗಾಗಲೇ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. 1991-92ರ ಬಜೆಟ್‌ನಲ್ಲಿ ಆಶ್ರಯ ಯೋಜನೆ ಇರಬಹುದು, ಆರಾಧನ ಇರಬಹುದು, ಶುಶ್ರೂಷ ಯೋಜನೆ ಇರಬಹುದು ಇವುಗಳನ್ನು ಜಾರಿಗೆ ತರುವುದರಲ್ಲಿ ಬಹಳ ಮುಂದೆ ಹೋಗಿದ್ದೇವೆ. ಇದನ್ನು ಮಾಡತಕ್ಕವರು ಯಾರು ಎಂದರೆ ನಮ್ಮಲ್ಲಿರತಕ್ಕ ಅಫಿಷಿಯಲ್ ಮೆಷಿನರಿ, ಅಂದರೆ ನಮ್ಮ ಅಧಿಕಾರಿ ವರ್ಗದವರು. ಅವರು ಒಳ್ಳೆಯ ರೀತಿಯಲ್ಲಿ ಕೆಲಸಮಾಡಿದ್ದಾರೆ. ಆದುದರಿಂದ ನಾನು ಅವರನ್ನು ಅಭಿನಂದಿಸುತ್ತೇನೆ. ಕೆಟ್ಟ ಅಧಿಕಾರಿಗಳು ಒಬ್ಬಿಬ್ಬರು ಇದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳೋಣ. ಆದರೆ ಎಲ್ಲರೂ ಆ ರೀತಿ ಇಲ್ಲ. ಬರೀ ತಪ್ಪುಗಳಿವೆ ಎಂದು ಹೇಳಿದರೆ ನಾವೂ, ನೀವು ಹೋಗಿ ಆ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಆವರನ್ನು ನಂಬಿಕೊಂಡೇ ನಾವು ಈ ಕೆಲಸವನ್ನು ಮಾಡಬೇಕಾಗುತ್ತದೆ. 1992-93 ಮುಂದಿನ ತಿಂಗಳು ಪ್ರಾರಂಭವಾಗುವ ಆರ್ಥಿಕ ವರ್ಷಕ್ಕೆ ಸಂಬಂಧಪಟ್ಟಹಾಗೆ, ವಿನೂತನವಾದ 8-10-12 ಕಾರ್ಯಕ್ರಮಗಳನ್ನು ಹಳೆಯ ಕಾರ್ಯಕ್ರಮಗಳ ಜೊತೆಯಲ್ಲಿ ಈ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಸ್ವಾಮಿ, ಈ ಎಲ್ಲ ಕಾರ್ಯಕ್ರಮಗಳನ್ನು ನಾವು ಯಾರ ಮುಖಾಂತರವಾಗಿ ಮಾಡಿಸಬೇಕು? ಇದೇ ಅಧಿಕಾರಿಗಳ ಮುಖಾಂತರವೇ ನಾವು ಕೆಲಸ ಮಾಡಿಸಬೇಕಾಗುತ್ತದೆ. ನನಗನಿಸುತ್ತದೆ, ವಿಧಾನಸೌಧದಲ್ಲಿರತಕ್ಕಂಥ ಅಧಿಕಾರಿಗಳಿಂದ ಹಿಡಿದು ಕೆಳಮಟ್ಟದಲ್ಲಿರತಕ್ಕಂಥ ಅಧಿಕಾರಿವರ್ಗದವರೆಗೆ ಬಹಳ ಒಳ್ಳೆಯ ಕೆಲಸ ಮಾಡತಕ್ಕಂಥ ಅನುಭವವಿರತಕ್ಕ ಅಧಿಕಾರಿಗಳು ನಮ್ಮಲ್ಲಿದ್ದಾರೆ. ಆ ಕೆಲಸಗಳನ್ನು ಮಾಡಿ ಒಳ್ಳೆಯ ಫಲಿತಾಂಶವನ್ನು ಕೊಡತಕ್ಕಂಥ ಶಕ್ತಿ ಇರುವ ಅಧಿಕಾರಿಗಳು ನಮ್ಮಲ್ಲಿದ್ದಾರೆ. ಈಗ ನಮ್ಮ ವಿಶ್ವ ಕಾರ್ಯಕ್ರಮವನ್ನು ತೆಗೆದುಕೊಂಡರೆ ಅದಕ್ಕೆ 10 ಕೋಟಿ ರೂಪಾಯಿ ತೆಗೆದಿಟ್ಟಿದ್ದೇವೆ. ಅದರ ವಿವರಕ್ಕೆ ಹೋಗುವುದಿಲ್ಲ. 10 ಕೋಟಿ ರೂಪಾಯಿಗಳಲ್ಲಿ ಈಗಾಗಲೇ 2 ಕೋಟಿ ಚಿಲ್ಲರೆ ರೂಪಾಯಿಗಳ ವ್ಯವಹಾರವನ್ನು ಮಾಡಿಬಿಟ್ಟಿದ್ದೇವೆ. ಅದರ ಮೇಲೆ ನಮಗೆ ಅಷ್ಟು ನಂಬಿಕೆ ಬಂದಿದೆ. ಈಗಾಗಲೇ ನಾವು ಸಿಂಗಪೂರ್‌ನಲ್ಲಿ ವಿಶ್ವ ಶೋರೂಮ್ ತೆಗೆಯುತ್ತಿದ್ದೇವೆ. ನಮ್ಮ ಸ್ನೇಹಿತರು ಇದು ಎಲ್ಲಿ ಆಗುತ್ತದೆ, ಇದು ಎಲ್ಲಿ ಹೋಗುತ್ತದೆಂದು

ಹೇಳುತ್ತಿದ್ದರು. ಅದು ಅವರ ಅಭಿಪ್ರಾಯವಿರಬಹುದು. ಮನುಷ್ಯನಿಗೆ ಹೃದಯವಿರಬೇಕು. ಮಾಡತಕ್ಕಂಥ ಛಲವಿರಬೇಕು, ಒಂದು ಗುರಿ ಇರಬೇಕು. ಇವತ್ತು ಆ ಒಂದು ಗುರಿಯನ್ನು ನಾವು ಇಟ್ಟುಕೊಂಡಿದ್ದೇವೆ. ನಾನು ಮಾನ್ಯ ಸದಸ್ಯರ ಗಮನಕ್ಕೆ ತರುವುದೇನೆಂದರೆ, ಇವತ್ತಿನದಿವಸ ನಮ್ಮ ಬಜೆಟ್ ರಿ ಪ್ರಾವಿಷನ್ ಓದಿ ನೋಡಿದರೆ ಗೊತ್ತಾಗುತ್ತದೆ. ಇನ್‌ಸ್ಟಿಟ್ಯೂಷನ್ ಫೈನಾನ್ಸಿಂಗ್ ಎಲ್ಲ ಸೇರಿಸಿದರೆ 475 ಕೋಟಿ ರೂಪಾಯಿಗಳಷ್ಟು ವಿಶ್ವ ಕಾರ್ಯಕ್ರಮಕ್ಕೋಸ್ಕರವಾಗಿಯೇ ಇಟ್ಟು ಬಿಟ್ಟಿದ್ದೇವೆ. ಅದಕ್ಕೆ ಬಹಳ ಧೈರ್ಯಬೇಕು, ಯುಮಧೈರ್ಯಬೇಕು, ಹತ್ತಿರ ಹತ್ತಿರ 500 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಇವತ್ತು ಬಡವರ್ಗಕ್ಕೆ 1000 ವರ್ಕಿಂಗ್ ಷೆಡ್‌ಗಳನ್ನು ಕೊಟ್ಟಿದೇವೆ. ಅದಕ್ಕೆ ಈಗಾಗಲೇ ಟೈಪ್ ಡಿಸೈನ್ ರೆಡಿ ಮಾಡಿದ್ದೇವೆ. ಫ್ರೀಫ್ಯಾಭಿಕೇಟರ್ ಮೆಟೀರಿಯಲ್ ಉಪಯೋಗ ಮಾಡಬೇಕೆಂಬ ವಿಚಾರವನ್ನು ಇಟ್ಟುಕೊಂಡು ಶ್ರೀಮಾನ್ ನಜೀರ್ ಅಹಮದ್‌ರು ಅಧಿಕಾರಿಗಳ ಸೆಕ್ರೆಟರಿಯವರು, ಉಳಿದವರು ಮತ್ತು....

ಶ್ರೀ ಬಾಬುರಾವ್ ಚಿಂಚನೂರ್:- ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ಕ್ಲಾರಿಫಿಕೇಷನ್ ಕೇಳುತ್ತೇನೆ. ಈ ವಿಶ್ವ ಯೋಜನೆ ಏನಿದೆ, ಇದು ನಮ್ಮ ಗುಲ್ಬರ್ಗಾದಲ್ಲಿ ಬರೀ ಎಸ್.ಸಿ ಎಸ್.ಟಿ, ಜನಾಂಗಕ್ಕೆ ಮಾತ್ರ ಸೀಮಿತವಾಗಿದೆ, ಬೇರೆ ಜನಾಂಗಕ್ಕೆ ಇಲ್ಲವೆಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಆದ್ದರಿಂದ ಇದರ ಬಗ್ಗೆ ಕ್ಲಾರಿಫಿಕೇಷನ್ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್.ಬಂಗಾರಪ್ಪ:-ಅದನ್ನು ಬರಿ ಎಸ್.ಸಿ. ಎಸ್.ಟಿ ಎಂದು ನಾವು ಇಟ್ಟಿಲ್ಲ. ಇದು ಉದ್ಯೋಗ ಮತ್ತು ಉತ್ಪಾದನೆ ಆಧಾರಿತ, ಎಂಪ್ಲಾಯ್‌ಮೆಂಟ್ ಅಂಡ್ ಪ್ರೊಡಕ್ಷನ್ ಓರಿಯಂಟೆಡ್ ಪ್ರೋಗ್ರಾಮ್. ಬರಿ ಅನ್ನ ಕೊಟ್ಟುಬಿಟ್ಟರೆ ರಸ್ತೆಗಳ ಕಾಮಗಾರಿ ಮಾಡುತ್ತಾ ಅನ್ನ ತಿಂದು ಆಮೇಲೆ ತಿಂದದ್ದು ಹೋಯಿತು ಹಣವೂ ಹೋಯಿತು, ಎಲ್ಲ ಹೋಯಿತು. ಇದು ಹಾಗಲ್ಲ. ನಾವು ಹಣವನ್ನು ಬಂಡವಾಳ ಹೂಡಿರುತ್ತೇವೆ. ಉದ್ಯೋಗ ಕೊಡುತ್ತೇವೆ. ಉದ್ಯೋಗವೆಂದರೆ ನೌಕರಿಯಲ್ಲ, ಡೈಲಿವೇಜಸ್ ಅಲ್ಲ. ಈ ಡೈಲಿವೇಜಸ್‌ಗು ಏನಿದೆ ಅದರ ಬಗ್ಗೆ ಸುಪ್ರೀಮ್ ಕೋರ್ಟಿನ ಜಡ್ಜ್‌ಮೆಂಟ್ ಇದೆ. ಇದು ಬೇರೆ ತಲೆಯಮೇಲೆ ತೂಗುಕತ್ತಿ ಇದೆ. ಎಲ್ಲರನ್ನು ತೆಗೆದುಕೊಂಡು ನೌಕರಿ ಮಾಡಿಕೊಂಡು ಕುಳಿತುಬಿಟ್ಟರೆ ಸಂಬಳ ಕೊಡುವುದಕ್ಕೆ ಹಣ ಹೊರಟು ಹೋಗುತ್ತದೆ. ನೀರಾವರಿ ಮತ್ತು ವಿದ್ಯುಚ್ಛಕ್ತಿ ಉತ್ಪಾದನೆ ಇವೆಲ್ಲಕ್ಕೂ ಬಾಗಿಲನ್ನು ಹಾಕಿಕೊಂಡು ಮನೆಗೆ ಹೋಗಿಬಿಡಬೇಕಾಗುತ್ತದೆ. ಆದ್ದರಿಂದ ನಾವು ಬಹಳ ಎಚ್ಚರಿಕೆಯಿಂದ ಇದ್ದೇವೆ. ಇದೆಲ್ಲ ಬರಿ ಕೆಲಸದ ನಿಮಿತ್ತವಾಗಿ ಇರತಕ್ಕಂಥದ್ದು, ನಾವು ಕಾನೂನು ಚೌಕಟ್ಟಿನಲ್ಲಿ ವಿಚಾರ ಮಾಡುತ್ತಿದ್ದೇವೆ. ಇಧನ್ನೆಲ್ಲ ಮಾಡಿಕೊಂಡು ನಾವು 475 ಹತ್ತಿರ ಹತ್ತಿರ ಎಂದರೆ 500 ಕೋಟಿ ರೂಪಾಯಿಗಳನ್ನು ಈ ಒಂದು ವರ್ಷದಲ್ಲಿ ಬಂಡವಾಳ ಹೂಡುತ್ತಿದ್ದೇವೆ. ಸಮಾಜದಲ್ಲಿರತಕ್ಕಂಥ ದುರ್ಬಲವರ್ಗದವರಿಗೆ ಯಾರಿಗೆ ಉದ್ಯೋಗವಿಲ್ಲ, ಯಾರಿಗೆ ಆಸ್ತಿ ಇಲ್ಲ ಅಂತಹ ವರ್ಗದವರು ಅಂದರೆ ಅದರಲ್ಲಿ ಎಲ್ಲ ಜಾತಿ, ಎಲ್ಲ ಕೋಮಿನವರೂ ಬರುತ್ತಾರೆ.

ಶ್ರೀ ಬಾಬುರಾವ್ ಚಿಂಚನಸೂರ್:- ನಮ್ಮ ಕಡೆ ಒಂದು ಪ್ರಾಬ್ಲಮ್ ಆಗಿದೆ. ನಮ್ಮ ಸುರಪುರದಲ್ಲಿ ಸುಮಾರು 30 ಜನರಿಗೆ ಟ್ರೈನಿಂಗ್ ಕೊಟ್ಟಿದ್ದಾರೆ. ಅವರು ಟ್ರೈನಿಂಗ್ ಪಡೆದು ಚಾಪೆ ನೆಯ್ದು ಎಲ್ಲ ಆದ ಮೇಲೆ ನೀವು ಎಸ್.ಟಿ.ಯಲ್ಲಿ ಬರುವುದಿಲ್ಲ, ಎಸ್.ಟಿ. ಸರ್ಟಿಫಿಕೇಟ್ ತೆಗೆದುಕೊಂಡು ಬನ್ನಿ ಎಂದು ಹೇಳಿರುತ್ತಾರೆ. ಅವರು ಅಲೆಮಾರಿ ಜನಾಂಗದವರು.

ಶ್ರೀ ಎಸ್.ಬಂಗಾರಪ್ಪ:-ಅದನ್ನು ನೀವು ಏನು ವಿಚಾರ ಮಾಡುವುದು ಬೇಡ. ನೀವು ಇದರ ಬಗ್ಗೆ ಪತ್ರ ನನಗಾದರೂ ಬರೆಯಿರಿ ಅಥವಾ ಮಾನ್ಯ ಸಚಿವರಾದ ನಜೀರ್‌ರವರಿಗಾದರೂ ಬರೆಯಿರಿ. ಅದನ್ನು ನಾವು ಸರಿಪಡಿಸಿಕೊಡುತ್ತೇವೆ. ಯಾರೋ ಅಧಿಕಾರಿಗಳು ಕೆಲವರು ತಪ್ಪು ತಿಳುವಳಿಕೆಯಾಗಿ ತಿಳಿದುಕೊಂಡಿರುತ್ತಾರೆ. ಅಂಥವರು ಎಲ್ಲೋ ಒಬ್ಬೊಬ್ಬರು ಅಧಿಕಾರಿಗಳು ಇರಬಹುದು. ಅವರಿಗೆ ಸರಿಯಾದ ತಿಳುವಳಿಕೆ, ಸೂಕ್ತವಾದ ಆದೇಶವನ್ನು ಕೊಡೋಣ. ಅದರ ಬಗ್ಗೆ ನೀವು ವಿಚಾರ ಮಾಡುವುದು ಬೇಡ. ಇದು ಜಾತಿ ಪ್ರಶ್ನೆಯಲ್ಲ. ಎಲ್ಲ

ಜಾತಿಯಲ್ಲಿರುವ ಕಡು ಬಡವರರಿಗೆ, ಉದ್ಯೋಗ ಯಾರಿಗೆ ಇಲ್ಲ ಅವರಿಗೆ ಕೊಡತಕ್ಕಂಥ ಒಂದು ಟ್ರೈನಿಂಗ್ ಪ್ರೋಗ್ರಾಮ್ ಇದೆ. ಉದ್ಯೋಗ ಕೊಡುವುದಿದೆ ಮತ್ತು ಉತ್ಪಾದನೆಯನ್ನು ಕೂಡ ತೆಗೆದುಕೊಳ್ಳುವ ಪ್ರಶ್ನೆ ಇದೆ. ಇಷ್ಟೇ ಇಲ್ಲದೆ ಫಾರಿನ್ ಎಕ್ಸ್‌ಚೇಂಜ್ ಕೂಡ ಸಂಪಾದನೆ ಮಾಡತಕ್ಕಂಥದ್ದು ಇದೆ. ಈಗಾಗಲೇ ಪರದೇಶಗಳಿಂದ ಆರ್ಡರ್‌ಗಳು ನಮಗೆ ಬಂದಿವೆ, ಇನ್ನೂ ಭಾರಿ ಎನ್‌ಕ್ವಯರೀಸ್ ಬರುತ್ತಿದೆ. ಇದು ಬಹಳ ಸಂತೋಷದ ವಿಚಾರವಾಗಿದೆ. ನಾವು ಇನ್ನೂ ಇಷ್ಟೊಂದು ಪಬ್ಲಿಸಿಟಿಗೆ ಹೋಗಿಲ್ಲ. ಅನೇಕ ಮಧ್ಯಪ್ರಾಚ್ಯ ರಾಷ್ಟ್ರಗಳಿಂದ ಮಿಡ್ಲ್ ಈಸ್ಟ್ ಕಂಟ್ರೀಸ್, ಯೂರೋಪಿಯನ್ ಕಂಟ್ರೀಸ್, ಹಾಗೂ ಈಸ್ಟರ್ನ್ ಕಂಟ್ರೀಸ್‌ನಿಂದ ಬಂದಿವೆ. ಆಕ್ಟೋಬರ್‌ನಲ್ಲಿ ನೀವು ಬರಬೇಕೆಂದು ನನಗೆ ಇನ್ವಿಟೇಷನ್ ಇದೆ I said, no ಏಕೆಂದರೆ, ನಾಳೆ . . .

ಶ್ರೀ ಬಿ.ಎಸ್.ಯಡಿಯೂರಪ್ಪ:- ನೀವು ಹೋಗುವುದನ್ನೇ ನಿಮ್ಮವರು ಕಾಯುತ್ತಿದ್ದಾರೆ. ಹಾಗೆ ಹೋಗಬೇಡಿ.

ಶ್ರೀ ಎಸ್.ಬಂಗಾರಪ್ಪ:- ಹೋದರೆ ಸಂತೋಷ ಪಡುವವರೂ ಇದ್ದಾರೆ. ಆ ಸಂತೋಷ ಪಡುವವರನ್ನು ನೋಡಿಕೊಂಡು ನಾನು ಹೋಗಬೇಕಾಗುತ್ತದೆ, ಹೋಗಿ ಬರುತ್ತೇನೆ.

ಶ್ರೀ ಎಂ.ಮಹದೇವ್:-ಮಾನ್ಯ ಯಡಿಯೂರಪ್ಪನವರಿಗೆ ಇದ್ದಕ್ಕಿದ್ದ ಹಾಗೆ ನಿಮ್ಮ ಮೇಲೆ ಇಷ್ಟೊಂದು ಪ್ರೇಮ ಬಂದಿದೆಯಲ್ಲ. ಇದು ಏತಕ್ಕೆಂದು ಹೇಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು:-ನಮ್ಮ ನಾಯಕರು ಇನ್ನೂ ಹತ್ತು ವರ್ಷ ಇರುತ್ತಾರೆ.

ಶ್ರೀ ಕೆ.ಎಸ್.ಈಶ್ವರಪ್ಪ:-ಹಾಗಾದರೇ 11ನೇ ವರ್ಷಕ್ಕೆ ನಮ್ಮ ನಾಯಕರು ಬರುತ್ತಾರೆಂದು ನಮ್ಮ ಯಡಿಯೂರಪ್ಪನವರು ಹೇಳಿದ್ದು.

ಶ್ರೀ ಎಸ್.ಬಂಗಾರಪ್ಪ:- ಜನರ ಆಶೀರ್ವಾದ ಇದ್ದು ಯಾರು ಬರಬೇಕೆಂದು ಹೇಳುತ್ತಾರೆ ಅವರು ಬಂದರೆ ಪ್ರಜಾತಂತ್ರದಲ್ಲಿ ಜನರ ತೀರ್ಮಾನಕ್ಕೆ ತಲೆಬಾಗತಕ್ಕದ್ದು ಮೂಲಭೂತ ನೀತಿ, ಆದ್ಯ ಕರ್ತವ್ಯ. ನಿಮ್ಮ ಪಕ್ಷದವರು 4 ರಾಜ್ಯಗಳಲ್ಲಿ ಇದ್ದಾರೆ. ನಾಳೆ ಅದೇ ರಾಜ್ಯದಲ್ಲಿ ನಮ್ಮ ಪಕ್ಷ ಬಂದರೆ ತಾವು ತಲೆಬಾಗುತ್ತೀರಿ ಅಲ್ಲಿ ನಾವು ತಲೆಬಾಗಲಿಲ್ಲವೇ. ಕೇಂದ್ರದಲ್ಲಿ ಅದೇ ರೀತಿ ಆಗಿದೆ. ಪ್ರಜಾ ತಂತ್ರದಲ್ಲಿ ಆ ನೀತಿಯನ್ನು ಒಪ್ಪಿ ಮುಂದೆ ಹೋಗೋಣ. ಅದರ ಬಗ್ಗೆ ಚರ್ಚೆ ಏಕೆ ? ನಾನು ಏತಕ್ಕೆ ಈ ಮಾತು ಹೇಳುತ್ತೇನೆಂದರೆ, ಅನೇಕ ಕಡೆಗಳಲ್ಲಿ ಈ ರೀತಿ ಬಂದಿದೆ. ನಾವು ಒಂದೇ ಸಾರಿ ಬಡ್ಜೆಟರಿ ಪ್ರಾವಿಷನ್ ಜಂಪ್ ಕೊಟ್ಟಿದ್ದೇವೆ. ನಾವು ಇದಕ್ಕೆ ಒಟ್ಟಾರೆ 5 ವರ್ಷಗಳಿಗೆ 565 ಕೋಟಿ ರೂಪಾಯಿ ಇಟ್ಟಿದ್ದೇವೆ. ಆದರೆ ಮೂರು ವರ್ಷಕ್ಕೆ ತಂದು ಬಿಟ್ಟಿದ್ದೇವೆ. ಏಕೆಂದರೆ, ಚುನಾವಣೆ ಬಂದು ಬೇರೆ ಸರ್ಕಾರ ಬಂದರೆ ಅಥವಾ ನಮ್ಮ ಪಕ್ಷವೇ ಬರುತ್ತದೆಂದು ಇಟ್ಟುಕೊಳ್ಳೋಣ. ಬೇರೆಯವರು ಬಂದು ಸ್ಟಾಪ್ ಅಂದರೆ ಆಗ ಏನು ಮಾಡಬೇಕು? ಎರಡು ವರ್ಷದಲ್ಲಿ ಕಾರ್ಯಕ್ರಮ ತಳಕೆಳಗಾಗುತ್ತದೆಂದು ಯೋಚನೆಮಾಡಿ 5 ವರ್ಷ ದಿಂದ 3 ಇಳಿಸಿದ್ದೀರಿ. ವರ್ಷಕ್ಕೆ 500 ಕೋಟಿ ರೂ ಹೋಗುತ್ತಿದೆ ಅಂದರೆ 3 ವರ್ಷಕ್ಕೆ ಬಡ್ಜೆಟ್ಟಿನ ಗಾತ್ರ ದೊಡ್ಡದಾಗುತ್ತದೆ. ಮೂರನೇ ವರ್ಷದ ಕೊನೆಯಲ್ಲಿ ಒಂದೂವರೆ ಸಾವಿರ ಕೋಟಿ ರೂಪಾಯಿ ಬಂಡವಾಳ ಹೂಡತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಕೊನೆಗೆ ಎಷ್ಟಕ್ಕೆ ಹೋಗುತ್ತದೆಂದು ನಾನು ಈಗಲೆ ಹೇಳಲಾರೆ. ಬಹಳ ಕಡಿಮೆ ಬಂದರೆ ಬಹಳ ಚೆನ್ನಾಗಿ ನಡೆದುಬಿಟ್ಟರೆ 2 ಸಾವಿರ ಕೋಟಿ ರೂಪಾಯಿಗೆ ಹೋಗಬಹುದು. ಏಕೆ ಹೋಗಬಾರದು ? ಇದು ಜನರಿಗೆ ಉದ್ಯೋಗ ಕೊಡುತ್ತದೆ. ಪರ ದೇಶದವರು ನಾವು ಡಿಸೈನ್ ಕೊಡುತ್ತೇವೆ, ನಮ್ಮ ಡಿಸೈನ್ ಪ್ರಕಾರ ಮಾಡಿಕೊಡಿ ಎಂದು ಹೇಳುತ್ತಿದ್ದಾರೆ. ಅವರು ಎಂತಹ ಡಿಸೈನ್ ಕೊಟ್ಟರೂ ನಾವು ಮಾಡುತ್ತೇವೆ. ಅಂತಹ ಶಿಲ್ಪ ಕಲೆ ಇರತಕ್ಕ ಜನರು ಇದ್ದಾರೆ, ಅಂತಹವರು ಶತ ಶತಮಾನಗಳಿಂದ ಈ ಶಿಲ್ಪ ಕಲೆಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಈ ಕಲೆಯಲ್ಲಿ ಬುದ್ಧಿವಂತ ಜನರು ಅವರು. ಅವರ ಜೊತೆಗೆ ಆ ಕಲೆಯೂ ಸಾಯುತ್ತಿದೆ. ಅದನ್ನು ಏನಾದರೂ ಮಾಡಿ ನಾವು ನಿಲ್ಲಿಸಬೇಕು. ಸದುಪಯೋಗಪಡಿಸಬೇಕು. ಅವರನ್ನು ಬೆಳೆಸಿದರೆ ಆ ಕಲೆ ಬೆಳೆಯುತ್ತದೆ. ಕಲೆ

ಬೆಳೆದರೆ ಉದ್ಯೋಗ ಸಿಗುತ್ತದೆ. ಅವರು ಸಾಮಾನು, ವಸ್ತುಗಳನ್ನು ಏನು ತಯಾರಿಸುತ್ತಾರೆ ಅದು ಪರದೇಶಕ್ಕೆ ಹೋಗುತ್ತದೆ. ಅದರಿಂದ ನಾಡಿಗೆ ಒಳ್ಳೆಯ ಹೆಸರು, ಒಳ್ಳೆಯ ಉದ್ಯೋಗ ಸಿಗತ್ತದೆ. ಮತ್ತು ನಮ್ಮ ರಾಷ್ಟ್ರಕ್ಕೆ ಗೌರವ ಅದು ತರತಕ್ಕದ್ದು. ನಾವು ಇಡೀ ದೇಶದಲ್ಲಿ ಮೊಟ್ಟಮೊದಲ ಬಾರಿಗೆ ದೊಡ್ಡ ಪ್ರಮಾಣದಲ್ಲಿ ಕೈಹಾಕಿದ್ದೇವೆ. ಈ ಕಾರ್ಯಕ್ರಮವನ್ನು ಮಾನ್ಯ ಪ್ರಧಾನ ಮಂತ್ರಿಗಳು ಬಂದು ಉದ್ಘಾಟನೆ ಮಾಡಿದ್ದಾರೆ. ನಾವು ನಮ್ಮ ಕರ್ತವ್ಯ ಮಾಡಿದ್ದೇವೆಂದು ಸಂತೋಷ ಇದೆ. ಈಗಾಗಲೇ ಅಧಿಕಾರಿಗಳು ಪರದೇಶಕ್ಕೆ ಹೋಗಿಬಂದಿದ್ದಾರೆ. ಮತ್ತೆ ಕೆಲವು ಅಧಿಕಾರಿಗಳನ್ನು ಏಪ್ರಿಲ್‌ನಲ್ಲಿ ಜಪಾನಿಗೆ ಕಳುಹಿಸಿಕೊಡುತ್ತಿದ್ದೇವೆ. ಡಾ.ಮನಮೋಹನ ಸಿಂಗ್ ಅವರು ಹೋಗುತ್ತಿದ್ದಾರೆ. ಅವರು ಹೋಗಿರುವ ಸಂದರ್ಭದಲ್ಲಿ ಇವರನ್ನೂ ಕಳುಹಿಸಿದ್ದರೆ ಒಂದು ದೊಡ್ಡ ಚರ್ಚೆ ಮಾಡಿಕೊಂಡು ಬರಬೇಕೆನ್ನುವ ದೃಷ್ಟಿಯಿಂದ 2-3 ಜನ ಅಧಿಕಾರಿಗಳಿಗೆ ಜಪಾನಿಗೆ ಹೋಗಿ ಬರಬೇಕೆಂಬ ಆದೇಶವನ್ನು ನಾನು ಈಗಾಗಲೆ ಕೊಟ್ಟಿದ್ದೇನೆ. ಅವರು ಹೋಗಿ ಬಂದರೆ ಎಲ್ಲವನ್ನು ರೆಡಿ ಮಾಡಿಕೊಂಡು ಬರುತ್ತಾರೆ. ಆಮೇಲೆ ಏನು ಮಾಡಬೇಕೆಂದು ಬರುತ್ತದೆ. ಮಾನ್ಯ ಸಚಿವರಿಗೆ ಹೋಗಿ ಎಂದರೆ, ಅದಕ್ಕೆ ಅವರು ಅಧಿಕಾರಿಗಳೇ ಹೋಗಲಿ ಎಂದರು. ನೀವೂ ಕೂಡ ಅಧಿಕಾರಿಗಳ ಜೊತೆಗೆ ಹೋಗಿ ಎಂದು ಹೇಳಿದ್ದೇನೆ. ಅಲ್ಲಿಯ ಅಧಿಕಾರಿಗಳ ಜೊತೆ ಇಲ್ಲಿಯ ಅಧಿಕಾರಿಗಳು ಚರ್ಚೆ ಮಾಡಬಹುದು. ಫೈನಲ್ ಮಾಡತಕ್ಕ ಹಂತಕ್ಕೆ ಅಂದರೆ ಬ್ರೀಫ್‌ಗೆ ಬಂದಮೇಲೆ ನಮ್ಮ ಇನ್‌ಫ್ರಾಸ್ಟ್ರಕ್ಚರ್ ಎಲ್ಲ ನೋಡಿಕೊಳ್ಳಬೇಕಾಗುತ್ತದೆ. ಅವರು ಹೋಗಿಬರುವುದು ದೊಡ್ಡ ವಿಚಾರ ಅಲ್ಲ. ಅವರು ಹೋಗಿ ಬಂದು ಮಳಿಗೆ ಎಲ್ಲಾ ಚೆನ್ನಾಗಿ ಆಗಿ ವಸ್ತುಗಳು ತಯಾರಾದ ಮೇಲೆ ಉದ್ಘಾಟನೆಗೆ ತಮ್ಮನ್ನು ಕರೆದುಕೊಂಡು ಹೋಗೋಣ, ಶಿವರಾಮೇಗೌಡರನ್ನು ಕಳಿಸೋಣ. ಈ ವಿಚಾರದಲ್ಲಿ ನಾನು ಏತಕ್ಕೆ ಈ ಮಾತು ಹೇಳಿದೆ ಎಂದರೆ, I do not want to bring any names here. But I tell you top class officers are there in the Industries Department. ಫೈನಾನ್ಸ್, ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ನವರು ಸ್ಮಾಲ್ ಸ್ಕೇಲ್ ಡಿಪಾರ್ಟ್‌ಮೆಂಟ್‌ನವರು ಎಲ್ಲಾ ಸೇರಿಕೊಂಡು ಒಳ್ಳೆಯ ಕೆಲಸ ಮಾಡಿದ್ದಾರೆ, ಹೃದಯ ಇಟ್ಟು ಕೆಲಸ ಮಾಡಿದ್ದಾರೆ, ಮಾಡಿ ಒಳ್ಳೆಯ ಹೆಸರು ಈಗಾಗಲೇ ಬರುವುದಕ್ಕೆ ಆಗಿದೆ. Those officers are responsible. I must thank them. Likewise our top officers are there. ಇವತ್ತು ಹಣಕಾಸು, ವರಮಾನ ಬರತಕ್ಕ ವಿಚಾರದಲ್ಲಿ ನೋಡೋಣ. ನಾನು ಇದನ್ನು ಜನರಲ್ ಆಗಿ ಹೇಳುತ್ತಿದ್ದೇನೆ. We are getting 1825 crores during the year 1991-92 from Commercial Tax. I am happy to announce that we are going to cross 2000 crores. ಅಲ್ಲಿ ಸೋರಿಕೆ ಇಲ್ಲ ಎಂದು ಅಲ್ಲ. ತಾವು ಹೇಳಿದ್ದೀರಿ. ಶ್ರೀಮಾನ್ ಅನಂತಕೃಷ್ಣ ಅವರು ತಾವು ಹೇಳಿದ್ದೀರಿ. ಬೇರೆ ಮಾನ್ಯ ಸದಸ್ಯರು ಹೇಳಿದ್ದಾರೆ. ಇದಿನಬ್ಬ ಅವರು ಹೇಳಿದ್ದಾರೆ. ನಿಮ್ಮ ಭಾಷಣ ಎಲ್ಲಾ ನನಗೆ ಗೊತ್ತು. ಎಲ್ಲಾ ಬಾಯಲ್ಲಿದೆ. ಯಾವಾಗಲೂ ನಿಮ್ಮ ಸಂಪೂರ್ಣ ಭಾಷಣ ಓದಿಕೊಳ್ಳದೆ ನಾನು ಇಲ್ಲಿ ಬರುವುದಿಲ್ಲ. ತಾವು ಹೇಳಿದ್ದೀರಿ. ನಾನು ಎಂದು ಹೇಳುವುದಿಲ್ಲ. ನಾನು ಹೇಳಿದ್ದಕ್ಕಿಂತ 200 ಕೋಟಿ ರೂಪಾಯಿ ಜಾಸ್ತಿ ಕೊಡತಕ್ಕ ಶಕ್ತಿ ಇರುವ ಆಫೀಸರ್ಸ್ ಇದ್ದಾರೆ ಎಂದರೆ I must congratulate our Finance Commissioner, Commercial Tax Commissioner and down below officers also and likewise other officers. ಇಲ್ಲದಿದ್ದರೆ 200 ಕೋಟಿ ರೂಪಾಯಿ ಹೇಗೆ ಬರುವುದಕ್ಕೆ ಸಾಧ್ಯವಾಗುತ್ತದೆ ?ನಾನು ಇದನ್ನು ನಿಮಗೆ ಉದಾಹರಣೆಯಾಗಿ ಕೊಟ್ಟಿದ್ದೇನೆ. ಉದಾಹರಣೆಯನ್ನು ನಿಮ್ಮ ಮುಂದೆ ಇಟ್ಟಿದ್ದೇನೆ. ಅದೇರೀತಿ ಇತರ ಅಧಿಕಾರಿಗಳೂ ಇದ್ದಾರೆ. ಪೋಲೀಸ್ ಡಿಪಾರ್ಟ್‌ಮೆಂಟೇ ತೆಗೆದುಕೊಳ್ಳಿ. ನಮ್ಮಲ್ಲಿ ಸ್ವಲ್ಪ ವ್ಯತ್ಯಾಸ ಇದ್ದರೂ It is one of the best Departments in the whole of the country. ಆಮೇಲೆ ಪಿ.ಡಬ್ಲ್ಯು.ಡಿ.ನಲ್ಲಿ ಇಂಜಿನಿಯರ್ಸ್ ಏನೂ ಕಡಿಮೆ ಇಲ್ಲ. ಅಗ್ರಿಕಲ್ಚರ್ ಸೈಂಟಿಸ್ಟ್

ತೆಗೆದುಕೊಳ್ಳಿ. ನಮ್ಮಲ್ಲಿ ಅಗ್ರಿಕಲ್ಚರ್ ಯೂನಿವರ್ಸಿಟಿಗಳಿವೆ. ಇವತ್ತು ಎಜುಕೇಷನ್ ಅಂಡ್ ರಿಸರ್ಚ್ ತೆಗೆದುಕೊಂಡರೆ ಬೆಸ್ಟ್ ಸೈಂಟಿಸ್ಟ್ ಇದ್ದಾರೆ. Best Agricultural Scientists are available in the whole of the country and outside the country also. ಒಳ್ಳೆಯ ಹೆಸರು ತಂದಿರುವವರಿದ್ದಾರೆ. They have brought laurels to our country. ಇಂಥ ಜನರನ್ನು ನಾವು ಇಟ್ಟುಕೊಂಡಿದ್ದೇವೆ. ಏತಕ್ಕೆ ಈ ಮಾತನ್ನು ಹೇಳುತ್ತೇನೆಂದರೆ, ನಮ್ಮವರನ್ನು ಬರೀ ಖಂಡಿಸತಕ್ಕ ಕೆಲಸ ಮಾಡಿದರೆ ನಾಳೆ ಹೃದಯ ಇಟ್ಟು ಕೆಲಸ ಮಾಡಿದವರಿಗೆ, ಎಜುಕೇಷನ್, ರಿಸರ್ಚ್, ಅಡ್ಮಿನಿಸ್ಟ್ರೇಷನ್ ಸೈಡ್‌ನಲ್ಲಿ ಕೆಲಸ ಮಾಡಿರುವವರಿಗೆ ಪೆಟ್ಟಾಗುತ್ತದೆ. ಈ ದೃಷ್ಟಿಯಿಂದ ಹಾಗೂ ಬೇರೆಯವರು ನಮ್ಮನ್ನು ಹೊಗಳುತ್ತಾ ಇರಬೇಕಾದರೆ, ಎಲ್ಲರನ್ನೂ ನಾವು ಸಾರಾಸಗಟಾಗಿ ತೆಗಳತಕ್ಕ ಕೆಲಸ ಮಾಡುವುದು ಬೇಡ. ತಪ್ಪು ಮಾಡಿದವರನ್ನು ಸಿಂಗಲ್ ಔಟ್ ಮಾಡೋಣ. ಅವರ ಬಗ್ಗೆ ಕಾರ್ಯಕ್ರಮ ಇಟ್ಟುಕೊಳ್ಳೋಣ. ಒಳ್ಳೆಯವರಿಗೆ All the support is there. ಎಂಬ ಮಾತು ನಾವು ಆಡದೇ ಇದ್ದರೆ ಯಾರೂ ಕೂಡ ಕೆಲಸ ಮಾಡುವುದಕ್ಕಾಗುವುದಿಲ್ಲ. ಅದೇರೀತಿ ಇರಿಗೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ ಸೆಕ್ರೆಟರಿಯಿಂದ ಹಿಡಿದು ಎಲ್ಲರೂ ಹಗಲು ರಾತ್ರಿ ಕೆಲಸ ಮಾಡುತ್ತಿದ್ದಾರೆ. ಕಾವೇರಿ ಬೇಸಿನ್‌ನಲ್ಲಿ ಇವತ್ತು ಕೆಲಸ ನಡೆಯುತ್ತಾ ಇದ್ದರೆ ಅಲ್ಲಿರತಕ್ಕ ಅಧಿಕಾರಿಗಳು ಕಾರಣ. ಸ್ವಲ್ಪ ವ್ಯತ್ಯಾಸ ಇರಬಹುದು. ಕೆಲವು ಸಲಹೆಗಳನ್ನು ತಾವು ಕೊಟ್ಟಿದ್ದೀರಿ. ಫಂಡ್ಸ್ ಅವೈಲಬಲಿಟಿ ವಿಚಾರದಲ್ಲಿ ಮತ್ತೊಂದು ಫೈನಾನ್ಸ್‌ನಿಂದ ಕೊಡಬೇಕು. ಅವರು ಹಗಲು ರಾತ್ರಿ ಕೆಲಸ ಮಾಡಬೇಕು. ಅವರ ಅಭಿಪ್ರಾಯ ತೆಗೆದುಕೊಳ್ಳಬೇಕು. ಇದು ಇರಿಗೇಷನ್‌ದು ಇರಬಹುದು ಪವರ್ ಕೂಡ ಅಷ್ಟೆ. After the amendement, it has been now brought into the Central Act. ಈಗ ಪ್ರೈವೇಟ್ ಸೆಕ್ಟಾರ್ ಪಾರ್ಟಿಸಿಪೇಷನ್ ಬರುತ್ತದೆ. ನಾವು ಸರ್ವೆ ಕೆಲಸಕ್ಕೆ ಹಚ್ಚಿದ್ದೇವೆ. ವೆಸ್ಟರ್ನ್ ಘಾಟ್‌ನಲ್ಲಿ ಸರ್ವೆ ನಡೆಯುತ್ತಿದೆ. ಮಿನಿ ಹೈಡಲ್ ಪ್ರಾಜೆಕ್ಟ್ ಈಗಾಗಲೇ ನಡೆಯುತ್ತಿದೆ. ನಮ್ಮಲ್ಲಿ ಈಗಾಗಲೇ ಎಕ್ಸ್‌ಪರ್ಟ್ ಪವರ್ ಇಂಜಿನಿಯರ್ಸ್ ಇದ್ದಾರೆ. ಅವರನ್ನು ಚೈನಾ ದೇಶಕ್ಕೆ ಕಳುಹಿಸಿಕೊಟ್ಟಿದ್ದೇವೆ. ಅವರು ಹೋಗಿ ಬಂದಿದ್ದಾರೆ. ಬ್ಯುಟಿಫುಲ್ಲಾಗಿ ತಂದಿದ್ದಾರೆ. ಆ ಲೈನ್ಸ್ ಈಗಾಗಲೇ ಮಾಡುತ್ತಿದ್ದೇವೆ. ಅದೇರೀತಿ Where dams and canals are there, where perenial source of water is available. ಅದು ಅಲ್ಲಿ ಉಪಯೋಗವಾಗುತ್ತದೆ. ನಮ್ಮಂಥ ವೆಸ್ಟರ್ನ್ ಘಾಟ್ ಏರಿಯಾದಲ್ಲಿ ಮೂರು ನಾಲ್ಕು ತಿಂಗಳ ಮಟ್ಟಿಗೆ ಮಾತ್ರ ನೀರನ್ನು ಸ್ಟೋರ್ ಮಾಡಿಕೊಂಡು ಉಪಯೋಗ ಮಾಡಬಹುದು. ಅದಕ್ಕೂ ಉಪಯೋಗ ಆಗಲಿ ಎಂಬ ದೃಷ್ಟಿಯಿಂದ ಸೌತ್ ಕೆನರಾ, ಶಿವಮೊಗ್ಗ, ಕೂರ್ಗ್, ಸಕಲೇಶಪುರ ತಾಲ್ಲೂಕು, ಚಿಕ್ಕಮಗಳೂರು, ಕಾರವಾರ, ಧಾರವಾಡ ಜಿಲ್ಲೆಯ ಕೆಲವು ಭಾಗ, ಬೆಳಗಾಂ ಜಿಲ್ಲೆಯ ಖಾನಾಪುರ ತಾಲ್ಲೂಕು ಅಲ್ಲೂ ಕೂಡ ಉಪಯೋಗವಾಗುತ್ತದೆ. ಮತ್ತು ಮೈದಾನ ಪ್ರದೇಶದಲ್ಲೂ ಅನೇಕ ಕಡೆ ಉಪಯೋಗವಾಗುತ್ತದೆ. ಇದನ್ನೆಲ್ಲಾ ಯಾರು ಸ್ವಾಮಿ ಮಾಡುವುದು ? ನಮ್ಮ ಇಂಜಿನಿಯರ್‌ಗಳೇ. ಹೊರಗಿನವರು ಯಾರೂ ಬೇಕಾಗಿಲ್ಲ. Our Engineers are really top most Engineers. Some of them ಸೂಪರ್ ಕ್ವಾಲಿಟಿಯವರಿದ್ದಾರೆ. ಡಿಸೈನ್ಸ್‌ನಲ್ಲಿ ಮತ್ತೊಂದರಲ್ಲಿ ಎತ್ತಿದ ಕೈ ಇದ್ದಾರೆ. ಅಪ್ಪರ್‌ಕೃಷ್ಣ ಪ್ರಾಜೆಕ್ಟ್‌ನಲ್ಲಿ ಭೀಮರಾಯನಗುಡಿಯಿಂದ ಅರ್ಧಮುಕ್ಕಾಲು ಗಂಟೆ ಹೋದರೆ ಅಲ್ಲೊಂದು ಕೆನಾಲ್‌ಗೆ ಸೇತುವೆ ಕಟ್ಟಿದ್ದಾರೆ. ತಾವು ಹೋಗಿ ನೋಡಿಕೊಂಡು ಬನ್ನಿ. ಹೊಸ ಟೈಪ್ ಡಿಸೈನ್ ಮಾಡಿ ಕಟ್ಟಿದ್ದಾರೆ. ಕನ್‌ಸ್ಟ್ರಕ್ಷನ್ ಟಾಪ್‌ಮೋಸ್ಟ್ ಆಗಿದೆ. When compared to other designs and other type of constructions. ಇದನ್ನು ಮಾಡಿದವರು ನಮ್ಮ ಇಂಜಿನಿಯರ್‌ಗಳು.

ಡಾ: ಎನ್. ಬಿ. ನಂಜಪ್ಪ:-ಹೈಡಲ್ ಪ್ರಾಜೆಕ್ಟ್‌ಗೆ ಅಲ್ಲೆಲ್ಲಾ ತಾವು ಮಾಡಿದ್ದೀರಿ. ಅದು ಬಜೆಟ್‌ನಲ್ಲಿದೆ. ವಿದ್ಯುಚ್ಛಕ್ತಿ ಉತ್ಪಾದನೆ ಮಾಡುವುದಕ್ಕೆ ಸಾಕಾದಷ್ಟು ಮಾಡಿದ್ದೀರಿ. ಪ್ರೈವೇಟ್ ಸೆಕ್ಟಾರ್‌ನವರಿಗೆ ಕೊಡಬೇಕೆಂದು

ಮಾಡಿದ್ದೀರಿ. ಅದೇ ಸಂದರ್ಭದಲ್ಲಿ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಬೇಡಿಕೊಳ್ಳುವುದೇನೆಂದರೆ, We have to think of another 25 to 50 years of power requirement. ಆದ್ದರಿಂದ ಕೈಗಾ ಪ್ರಾಜೆಕ್ಟ್ ಆದಷ್ಟು ಬೇಗ ಮುಗಿಸುವುದಕ್ಕೆ ಎಷ್ಟೇ ಕಷ್ಟ ಬಂದರೂ ಬಗೆಹರಿಸಿ ಮಾಡಬೇಕು. ಅಟಾಮಿಕ್ ಪವರ್ ಸ್ಟೇಷನ್ ಮಾಡದೇ ಹೋದರೆ ವಿದ್ಯುಚ್ಛಕ್ತಿ ಸಫಿಷಿಯೆನ್ಸಿಯನ್ನು ಬರೀ ಹೈಡಲ್, ಥರ್ಮಲ್‌ನಲ್ಲಿ ಸಾಧಿಸುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಅದರ ಬಗ್ಗೆ ತಾವು ಚಿಂತನೆ ಮಾಡಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ಶ್ರೀ ಎಸ್.ಬಂಗಾರಪ್ಪ:- ಮಾನ್ಯ ಅಧ್ಯಕ್ಷಿಣಿಯವರೇ, ಸನ್ಮಾನ್ಯ ಸದಸ್ಯರ ಅಭಿಪ್ರಾಯ ಸ್ವಾಗತ ಮಾಡತಕ್ಕದ್ದು, ನಾವು ಅದೇ ರೀತಿಯಾಗಿ ಸರ್ಕಾರದಲ್ಲೂ ಕೂಡ ವಿಚಾರ ಮಾಡಿ ಮುಂದಕ್ಕೆ ಹೋಗತಕ್ಕ ಕೆಲಸ ಮಾಡುತ್ತಿದ್ದೇವೆ. ಅದರಲ್ಲಿ ಇನ್ನು ಅನೇಕ ಬೇಕಾದಷ್ಟು ಐಟಮ್ಸ್ ಇವೆ. ನಾವು ಕುಳಿತು ಅಭ್ಯಾಸ ಮಾಡಿದಷ್ಟೂ ನಮಗೆ ಅನೇಕ ವಿಷಯಗಳು ಹೊಳೆಯುತ್ತವೆ. ಇಷ್ಟು ಮಾತನ್ನು ಹೇಳುತ್ತಾ, ಪಿಡಬ್ಲ್ಯುಡಿ ಇರಬಹುದು, ಫೈನಾನ್ಸ್ ಡಿಪಾರ್ಟ್‌ಮೆಂಟ್ ಇರಬಹುದು. Particularly in Irrigation, our officers are top most Officers. ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. That is why we have provided money also. ಸುಮಾರು 550 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. Including the external aid, that will go up like anything. ಇಷ್ಟಕ್ಕೇ ನಾವು ನಿಲ್ಲುವುದಿಲ್ಲ. ಇನ್ನೂ ಕೂಡ ಮುಂದಕ್ಕೆ ಹೋಗುತ್ತೇವೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಇನ್ನು ಪೋಲೀಸ್ ಇಲಾಖೆ ಏನಿದೆ ಈ ಕ್ಷೇತ್ರದಲ್ಲಿ ನಾವು ಕಡಿತ ಮಾಡುವುದಕ್ಕೆ ಹೋಗುತ್ತಾ ಇಲ್ಲ. ಅದರ ಬದಲು ಅಡೀಷನಲ್ ಎಸ್‌ಪಿ ಇರಬಹುದು, ಮತ್ತೊಂದು ಇರಬಹುದು, ಆ ಬಗ್ಗೆ ಇಲಾಖೆ ಬೇಡಿಕೆ ಬಂದಾಗ ಶ್ರೀ ಧರ್ಮಸಿಂಗ್ ಅವರು ಹೇಳಿದ್ದಾರೆ. ಇತ್ತೀಚಿನ ಕೆಲವು ಘಟನೆಗಳನ್ನು ನೋಡಿದಾಗ, ಆದಷ್ಟು ಪೋಲೀಸ್ ಫೋರ್ಸ್‌ನ್ನು ಜಾಸ್ತಿ ಮಾಡಬೇಕೆನ್ನುವ ಅಭಿಪ್ರಾಯವನ್ನು ಪಕ್ಷಾತೀತವಾಗಿ ಕೊಟ್ಟಿದ್ದಾರೆ. ಅದಕ್ಕೆ ಅನುಗುಣವಾಗಿ ನಾವು ಕ್ರಿಯೇಟ್ ಮಾಡಿದ್ದೇವೆ. ಉದಾಹರಣೆಗೆ ಕಮರ್ಶಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್‌ಬಿಲ್ಲಿ ಇನ್ನೂ ಹೆಚ್ಚು ಮಾಡಬೇಕಾಗಿದೆ. ಏಕೆಂದರೆ ಇದು ಅತಿ ಹೆಚ್ಚಿನ ರೆವಿನ್ಯೂ ಕೊಡತಕ್ಕ ಇಲಾಖೆ. ಅಲ್ಲಿ ಗಣಕೀಕರಣ ಕಂಪ್ಯೂಟರ್ ಸಿಸ್ಟಮ್ ತರಬೇಕು. ಹಾಗೆಯೇ ಉದಾಹರಣೆಗೆ ವಿಶ್ವ ಕಾರ್ಯಕ್ರಮ, ವಿಶ್ವ ಕಾರ್ಯಕ್ರಮದ ಬಗ್ಗೆ ನಾನು ಇನ್‌ಸ್ಟ್ರಕ್ಷನ್ ಕೊಟ್ಟಿದ್ದೇನೆ. ಈಗ ನಾವು ಒಂದು ಸಾವಿರ ಸೆಂಟರ್ಸ್ ಮಾಡುತ್ತಾ ಹೋಗುತ್ತೇವೆ. ಅದಕ್ಕೆ ಸಬ್ ಸೆಂಟರ್ಸ್ ಕೂಡ ಬರುತ್ತವೆ. ಪ್ರತಿ ದಿವಸದ್ದು ಪ್ರೊಡಕ್ಷನ್ ಮತ್ತು ಸೇಲ್ಸ್ ಮತ್ತೊಂದನ್ನು ಸಂಪೂರ್ಣವಾಗಿ ಗಣಕೀಕರಣಕ್ಕೆ ಒಳಪಡಿಸಬೇಕು. ಇವತ್ತು ಕಂಪ್ಯೂಟರ್ ಸಿಸ್ಟಂ ಬರದೇ ಇದ್ದರೆ ಟೈಮ್ ವೇಸ್ಟ್ ಆಗುವುದರಿಂದ ರೇಟ್ಸ್ ವ್ಯತ್ಯಾಸ ಆಗಿ ಲಾಸ್ ಹೆಚ್ಚಾಗಿ ಹೋಗುತ್ತದೆ. ಆಗ ನಾವೆಲ್ಲರೂ ಲೂಸರ್ಸ್ ಆಗುತ್ತೇವೆ. ಲೇಟೆಸ್ಟಾಗಿ ಇದನ್ನು ಜಪಾನ್‌ನಲ್ಲಿ ಮಾಡಿಕೊಂಡಿದ್ದಾರೆ. ಅದಕ್ಕೇ ನಾನು ಮಾನ್ಯ ನಜೀರ್‌ರವರಿಗೆ ಹೇಳಿದೆ. ನೀವೆಲ್ಲ ಹೋಗಿಬನ್ನಿ , ಅದನ್ನು ಅಭ್ಯಾಸ ಮಾಡಿಕೊಂಡು ಬನ್ನಿ, ಅಲ್ಲಿಯ ಎಕ್ಸ್‌ಪರ್ಟ್ ಒಪಿನಿಯನ್ ಏನಿದೆ ಅದನ್ನು ತೆಗೆದುಕೊಂಡು ಬನ್ನಿ, ಲೇಟೆಸ್ಟ್ ಎಲ್ಲ ಅಳವಡಿಸಿಕೊಳ್ಳುತ್ತಾ ಹೋಗೋಣ ಎನ್ನುವ ಅಭಿಪ್ರಾಯ ಇಟ್ಟಿದ್ದೇನೆ. ಇದಕ್ಕೆ ಅನುಗುಣವಾಗಿ ಸ್ವಲ್ಪ ಹಣ ಜಾಸ್ತಿ ಖರ್ಚು ಮಾಡಿದರೆ ಇವೆಲ್ಲ ಅನುಕೂಲವಾಗುತ್ತದೆ. ಉತ್ಪಾದನೆ ಜಾಸ್ತಿ ಕೊಡತಕ್ಕ ಇಲಾಖೆಗಳು. ಇದಕ್ಕೆ ಹಣ ಕಡಿಮೆ ಮಾಡುವುದಕ್ಕೆ ಸರ್ಕಾರದ ವಿಚಾರ ಇಲ್ಲ. ಏಕೆಂದರೆ ಇವು ರೆವಿನ್ಯೂ ಕೊಡತಕ್ಕ ಇಲಾಖೆಗಳು. ಅದೇ ರೀತಿ ಬೇರೆ ಬೇರೆ ಇಲಾಖೆಗಳಲ್ಲಿ ಇಟ್ಟುಕೊಂಡಿದ್ದೇವೆ. ಪೋಲೀಸ್ ಇಲಾಖೆಯಲ್ಲಿ ಅನೇಕ ತಪ್ಪುಗಳು ಇವೆಯೆಂದರೂ ಲಾ ಅಂಡ್ ಆರ್ಡರ್ ಮೆಂಟೇನ್ ಮಾಡುವ ವಿಚಾರದಲ್ಲಿ ಬೇರೆ ರಾಜ್ಯಗಳಿಗೆ ಕಂಪೇರ್ ಮಾಡಿದಾಗ ನಿಜ ಹೇಳಬೇಕೆಂದರೆ ನಮ್ಮ ರಾಜ್ಯಕ್ಕೆ ಬಹಳ ಒಳ್ಳೆಯ ಹೆಸರು ಇದೆ. ಟಾಪ್‌ಮೋಸ್ಟ್ ಸ್ಟೇಟ್ ಎಂದು ಈಗಾಗಲೇ ನಮ್ಮ ರಾಜ್ಯಕ್ಕೆ ಹೆಸರು ಇದೆ. ಇವತ್ತು ಡಿಪಿಎಆರ್ ಇತ್ಯಾದಿ ಬಗ್ಗೆ ಹೇಳುವುದಾದರೆ, ನಾವು ಬಂದಮೇಲೆ. . . .

ಶ್ರೀ ಕರಿಯಣ್ಣ:-ಈಗಾಗಲೇ ಸಾಕಷ್ಟು ಎಸ್‌ಪಿ ಗಳಿದ್ದಾರೆ. ಮತ್ತೆ 20 ಜನ ಅಡೀಷನಲ್ ಎಸ್‌ಪಿಗಳನ್ನು ನೇಮಕ ಮಾಡುವುದರಿಂದ ಖಜಾನೆಗೆ ಹೆಚ್ಚು ಖರ್ಚಾಗುತ್ತದೆಯೇ ವಿನ: ಅನುಕೂಲ ಏನಾಗುತ್ತದೆ?

ಶ್ರೀ ಎಸ್.ಬಂಗಾರಪ್ಪ:- ಇವತ್ತು ಪೋಲೀಸ್ ಕಮೀಷನ್ ವರದಿ ಇದೆ. ಸಾಂದರ್ಭಿಕವಾಗಿ ಅಂದರೆ ಆ ಸಂದರ್ಭ ಬಂದಾಗ ನೀವು ಮಾಡಿಕೊಳ್ಳಬಹುದು ಎನ್ನುವ ಅಭಿಪ್ರಾಯವನ್ನು ಅದರಲ್ಲಿ ಕೊಟ್ಟಿದ್ದಾರೆ. ಕೆಲವು ಕಮ್ಯುನಲ್ ಗಲಾಟೆಗಳು, ಮತ್ತೊಂದು ಜಾಸ್ತಿ ಆಗತಕ್ಕದ್ದು ಏನಿದೆ ಇದಕ್ಕೆಲ್ಲ ಫೋರ್ಸ್ ಜಾಸ್ತಿ ಮಾಡದೇ ಇದ್ದರೆ ಆಗುವುದಿಲ್ಲ. ಏಕೆಂದರೆ, ಕರ್ನಾಟಕಕ್ಕೆ ತುಂಬಾ ಒಳ್ಳೆಯ ಹೆಸರು ಇದೆ. ಅದು ಸ್ವಲ್ಪ ಬಿದ್ದು ಬಿಟ್ಟರೆ ಪೆಟ್ರೋಲ್‌ಗೆ ಬೆಂಕಿ ಬಿದ್ದ ಹಾಗೆ ಆಗುತ್ತದೆ.

ಶ್ರೀ ಬಾಬುರಾವ್ ಚಿಂಚನಸೂರ್:- ಪೋಲೀಸ್ ಇಲಾಖೆಯಲ್ಲಿ ಎಲ್ಲ ಮಟ್ಟದಲ್ಲೂ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ನನ್ನ ಕಳಕಳಿ.

ಶ್ರೀ ಎಸ್.ಬಂಗಾರಪ್ಪ:- ಕಾನ್‌ಸ್ಟೇಬಲ್ ಸಂಖ್ಯೆಯನ್ನು ಜಾಸ್ತಿ ಮಾಡಬೇಕೆಂದು ಬಂದಿದೆ. ಇವತ್ತು ನಾವು ಹುದ್ದೆ ಹೆಚ್ಚು ಮಾಡಬೇಕೆಂದಿದ್ದರೆ ಎಸ್‌ಐ ಮತ್ತು ಎಸ್‌ಪಿ ಲೆವೆಲ್‌ವರೆಗೆ ಮಾತ್ರ. ಬೇರೆಯವರಿಗೆ ಜಾಸ್ತಿ ಮಾಡುವುದಿಲ್ಲ. ಪೋಲೀಸ್ ಇಲಾಖೆಯಲ್ಲಿ ಬೇರೆ ಕೆಲವು ಪೋಸ್ಟ್ ತೆಗೆಯಬೇಕೆಂದೂ ಹೇಳಿದ್ದೇನೆ. ಇವನ್ನು ಜಾಸ್ತಿ ಮಾಡುವ ಸಂದರ್ಭದಲ್ಲಿ ಕೆಲವು ಬೇರೆ ಹುದ್ದೆಗಳನ್ನು ನಾವು ತೆಗೆಯುತ್ತೇವೆ. ಅದರಲ್ಲಿ ಕೆಲವು ವರ್ಗಗಳು ಇವೆ. ದೊಡ್ಡ ದೊಡ್ಡ ಪೋಸ್ಟ್‌ಗಳು ಏನಿವೆ ಅದನ್ನು ನಾವು ತೆಗೆಯುತ್ತೇವೆ. ಅದನ್ನು ನಾವು ವಿಚಾರ ಮಾಡುತ್ತೇವೆ. ಹೀಗೆ ಈ ಪೋಲೀಸ್ ಇಲಾಖೆಗೂ ಕೂಡ ಒಳ್ಳೆಯ ಹೆಸರು ಇರುವುದರಿಂದ ನಾವು ಅದನ್ನು ಕಾಪಾಡಿಕೊಂಡು ಹೋಗಬೇಕೆಂದು ಹೇಳುತ್ತೇನೆ. ಎಲ್ಲಿ ಸಮಾಜದಲ್ಲಿ ತುಳಿತಕ್ಕೆ ಸಿಕ್ಕಿರತಕ್ಕ ವರ್ಗಗಳು ಇವೆ ಅದಕ್ಕೆ ನ್ಯಾಯ ದೊರಕಿಸಿಕೊಡುವುದರಲ್ಲಿ ಡಿಪಿಎಆರ್ ಏನಿದೆ, ಈ ವಿಚಾರದಲ್ಲಿ ಮಾತ್ರ ನಾವು ಅಧಿಕಾರಿಗಳ ಪೋಸ್ಟಿಂಗ್ಸ್ ಮತ್ತೊಂದರಿಂದ ಹಿಡಿದು ಹರಿಜನ ಗಿರಿಜನ, ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು ಮತ್ತು ಮುಂದುವರಿದ ವರ್ಗಗಳನ್ನು ಕೂಡ ನೋಡಿಕೊಂಡು ಆದಷ್ಟು ಮ್ಯಾನೇಜ್ ಮಾಡಿ ಅಧಿಕಾರಿಗಳನ್ನು ಎಲ್ಲೆಲ್ಲಿ ಹೇಗೆ ಹೇಗೆ ಕಳುಹಿಸಬೇಕು ಎನ್ನುವುದನ್ನು ವಿಚಾರ ಮಾಡಿ ನಾವು ಮಾಡುತ್ತಿದ್ದೇವೆ. ಆದಷ್ಟು ಸೋಷಿಯಲ್ ಜಸ್ಟೀಸ್ ಅಂದರೆ ಈ ಮಟ್ಟದಲ್ಲಿ ಕೂಡ ಅದೇರೀತಿಯಾಗಿ ನಡೆಯಬೇಕು ಎನ್ನುವ ಉದ್ದೇಶವನ್ನು ಇಟ್ಟು ಬರೀ ಕೆಳಗಡೆ ಇಟ್ಟುಕೊಂಡರೆ ಸಾಲದು, ಅದು ವಿಧಾನಸೌಧದಲ್ಲಿ ಕೂಡ ಇರಬೇಕಾಗುತ್ತದೆ.

ಶ್ರೀ ಎಂ.ಮಹದೇವ್:- ದಯವಿಟ್ಟು ನಿಮ್ಮ ಕಾಲದಲ್ಲಾದರೂ ಹಿಂದು ಮುಂದು ಎನ್ನುವುದನ್ನು ತೆಗೆದುಹಾಕುವುದಕ್ಕೆ ಪ್ರಯತ್ನ ಮಾಡಿ.

ಶ್ರೀ ಎಸ್.ಬಂಗಾರಪ್ಪ:- ಮಾನ್ಯ ಮಹದೇವ್‌ರವರೆ, You know my socialist background. ಹಿಂದುಮುಂದು ಅವೆಲ್ಲ ನಾನು ಇಟ್ಟುಕೊಂಡಿಲ್ಲ. ಜಾತಿ ಪಾತಿ ಅವೆಲ್ಲ ನನಗೆ ಇಲ್ಲ. ಆದರೆ ಇಲ್ಲಿ ಅನ್ಯಾಯವಾಗಿದೆ ಎನ್ನತಕ್ಕ ಭಾಷಣಗಳು ಬಂದಿದ್ದರಿಂದ ನಾನು ಹೇಳಬೇಕಾಗಿದೆ. ನಮ್ಮ ವ್ಯವಸ್ಥೆ ಏನಾಗಿದೆಯೆಂದರೆ, ಅದು ಸಂವಿಧಾನಬದ್ಧವಾಗಿ ಜಾತ್ಯಾತೀತ ರಾಷ್ಟ್ರ ಅಂದಷ್ಟೂ ಜಾತಿಗಳು ಬೆಳೆಯುತ್ತಾ ಹೋಗಿ ಹೋಗಿ, ನಮ್ಮನ್ನು ತಿಂದು ತೇಗಿವೆ, ನುಂಗಿ ನೀರು ಕುಡಿದಿವೆ ಎನ್ನುವುದು ತಮಗೆ ಗೊತ್ತಿರತಕ್ಕದ್ದು. ಅವು ಈ ಮಟ್ಟಕ್ಕೆ ಬಂದಿವೆ. ಇಷ್ಟು ಮಾತ್ರ ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಉಳಿದಿರತಕ್ಕ ವಿಚಾರಗಳ ಬಗ್ಗೆ ಅವರು ಹೇಳಿದ್ದಾರೆ.

ಇನ್ನು ಲಾಟರಿ ಬಗ್ಗೆ ತಾವೆಲ್ಲ ತಿಳಿಸಿದ್ದೀರಿ. ನಾನು ಈ ಸಂದರ್ಭದಲ್ಲಿ ಅದರ ಬಗ್ಗೆ ಹೇಳುವುದು ಬಹಳ ಒಳ್ಳೆಯದು. ಅಪ್ರೋಪ್ರಿಯೇಷನ್ ಬಿಲ್ ಬಂದಂತಹ ಸಂದರ್ಭದಲ್ಲಿ ಆಗಲೂ ಕೂಡ ಹೇಳಬೇಕಾಗಿಲ್ಲ. ನಾನು ಈಗ ಕೆಲವು ವಿಚಾರಗಳನ್ನು ಪ್ರಕಟ ಮಾಡಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿದ್ದೇನೆ. ಲಾಟರಿ ಯೋಜನೆಯಿಂದ ಮೂರ್‍ನಾಲ್ಕು ಕೋಟಿ ರೂಪಾಯಿ, ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್

ಮುಖಾಂತರ ಮಾಡುತ್ತಿದ್ದಾರೆ. ಬೇರೆ ರಾಜ್ಯಗಳಲ್ಲಿ ನಾವು ನೋಡಿದಾಗ, ಅವರು ಏನು ಮಾಡಿದ್ದಾರೆಂದರೆ ಪ್ರೈವೇಟ್ ಏಜೆನ್ಸಿಗೆ ಕೊಟ್ಟುಕೊಂಡು ಬಿಟ್ಟಿದ್ದಾರೆ. ಅವರು7-8-9-10 ಕೋಟಿ ರೂಪಾಯಿಗಳ ತನಕ ದುಡ್ಡು ಮಾಡುತ್ತಿದ್ದಾರೆ. ತಾವು ಎಲ್ಲವನ್ನು ಪ್ರೈವೇಟ್‌ವನರಿಗೆ ಕೊಡುತ್ತೀರಾ ಎಂದು ಕೇಳಬಹುದು. ನಾನು ಏನು ಮಾಡುವುದಕ್ಕಾಗುವುದಿಲ್ಲ. ನೋಡಿ ನೋಡಿ ಇಷ್ಟು ವರ್ಷವಾದರೂ ಏನು ಮಾಡಿದರೂ ಮೂರು ಮೂರುವ ಕೋಟಿ ಮೇಲೆ ಅದು ತಲೆ ಎತ್ತಿ ಹೋಗುತ್ತಲೇ ಇಲ್ಲ. ಲಾಟರಿ ಲಾಟರಿಯಾಗಿಯೇ ಉಳಿದುಕೊಂಡಿದೆ. ಅದಕ್ಕೆ ಏನು ಮಾಡಬೇಕು? ಹಣ ಬರುವ ಹಾಗೆ ಮಾಡಬೇಕೆನ್ನುವ ದೃಷ್ಟಿಯಿಂದ ನಾವು ವಿಚಾರ ಮಾಡಿ ಲಾಟರಿಯ ವಿಚಾರದಲ್ಲಿ ಖಾಸಗಿಯವರು ಏನಾದರೂ ಮುಂದೆ ಬಂದರೆ, ಅದರಿಂದ ನಮಗೆ ಹಣ ಜಾಸ್ತಿ ಸಿಗತಕ್ಕದ್ದು ಇದ್ದರೆ ಅದನ್ನು ಖಾಸಗಿಯವರಿಗೆ ಕೊಡಬೇಕೆನ್ನುವ ಉದ್ದೇಶವನ್ನು ನಾವು ಸರ್ಕಾರದವರು ಇಟ್ಟುಕೊಂಡಿದ್ದೇವೆ. This is No.1. ಎರಡನೆಯದು ಡಾ.ಬಾಬಾಸಾಹೇಬ್ ಅಂಬೇಡ್ಕರ್‌ರವರ ಜನ್ಮ ಶತಾಬ್ದಿಯನ್ನು ಆಚರಣೆ ಮಾಡತಕ್ಕ ಕಾಲ ಇದು. ಈ ಸಂದರ್ಭದಲ್ಲಿ ಸಮಾಜದಲ್ಲಿ ಕಡು ಬಡ ವರ್ಗದವರು ಏನಿದ್ದಾರೆ ಇವರಿಗೆ ಹೆಚ್ಚಿನ.....

ಶ್ರೀ ಎ.ಕೆ.ಅನಂತಕೃಷ್ಣ :- ಮಾನ್ಯ ಉಪಾಧ್ಯಕ್ಷಿಣಿಯವರೆ, ಒಂದು ನಿಮಿಷ. ಮಾನ್ಯ ಮುಖ್ಯ ಮಂತ್ರಿಗಳು ಲಾಟರಿ ವಿಷಯದಲ್ಲಿ ಏನು ಹೇಳುತ್ತಿದ್ದಾರೆ ಅದನ್ನು ನಾನು ನನ್ನ ಭಾಷಣದ ಸಮಯದಲ್ಲಿ ಹೇಳಿದ್ದೇನೆ. ಲಾಟರಿ ಸ್ಕೀಮ್‌ನಲ್ಲಿ ಪಾಪ್ಯುಲರ್ ಇನ್‌ವಾಲ್ವ್‌ಮೆಂಟ್ ಇಲ್ಲ. ಸಾರ್ವಜನಿಕರ ಇನ್‌ವಾಲ್ವ್‌ಮೆಂಟ್ ಇಲ್ಲದ ಕಾರಣದಿಂದ ಹೆಚ್ಚು ಹಣ ಬಾರದೆ ಇರುವುದಕ್ಕೆ ಕಾರಣವಾಗಿದೆ. ಯಾವ ಪಾಪ್ಯುಲರ್ ಪರ್ಪಸ್‌ಗಾಗಿ ನಾವು ಲಾಟರಿ ಹಾಕುತ್ತಿದ್ದೇವೆಂದು ನಮ್ಮ ರಾಜ್ಯ ಸರ್ಕಾರ ತೀರ್ಮಾನ ಮಾಡಬೇಕು. ಹಾಗೆ ಮಾಡಿದಾಗ ಜನ ಅದರಲ್ಲಿ ಇನ್‌ವಾಲ್ವ್ ಆಗಿ ಸಾಕಷ್ಟು ಕೊಡುತ್ತಾರೆ. ಈಗ ಲಾಟರಿ ನಡೆಯುತ್ತಿರುವುದು ಕೇವಲ ಗ್ಯಾಂಬ್ಲಿಂಗ್ ಲೆಕ್ಕದಲ್ಲಿ ಮಾತ್ರ ನಡೆಯುತ್ತಿದೆ. ಆದ್ದರಿಂದ ನಮಗೆ ಹಣ ಜಾಸ್ತಿ ಬರುತ್ತಾ ಇಲ್ಲ.

ಶ್ರೀ ಎಸ್.ಬಂಗಾರಪ್ಪ:-ಮಾನ್ಯ ಸದಸ್ಯರು ಹೇಳಿರತಕ್ಕ ವಿಚಾರವನ್ನು ನಾವು ಗಮನದಲ್ಲಿಟ್ಟುಕೊಳ್ಳುತ್ತೇವೆ. ಈ ಸಂದರ್ಭದಲ್ಲಿ ಭಾಗ್ಯಜ್ಯೋತಿಯ ಬಗ್ಗೆ ಹೇಳಬೇಕಾಗಿದೆ. ಅದು ಬಡವರ ಸಲುವಾಗಿ ಇರತಕ್ಕ ಯೋಜನೆ. ಮಾನ್ಯ ವೆಂಕಟಪ್ಪನವರು ಇದರ ಬಗ್ಗೆ ಬಹಳ ಒತ್ತಾಯ ಮಾಡಿ ಹೇಳಿದ್ದಾರೆ. ಅನೇಕ ಮಿತ್ರರು ಕೂಡ ಹೇಳಿದ್ದಾರೆ. ಒಂದು ಮಾನ್ಯ ಸದಸ್ಯರ ಕ್ಷೇತ್ರ ಇದೆ. ನಾವು ಇಲ್ಲಿಯವರೆಗೂ ಕೆಲವು ಕೊಟ್ಟಿರತಕ್ಕದ್ದು ಸಾಲದು ಎನ್ನತಕ್ಕ ಭಾವನೆ ಬರುತ್ತದೆ. ಡಾ.ಬಾಬಾಸಾಹೇಬ್ ಅಂಬೇಡ್ಕರ್‌ರವರ ಜನ್ಮ ಶತಾಬ್ಧಿಯ ಜ್ಞಾಪಕಾರ್ಥವಾಗಿ ದೊಡ್ಡ ಕಾರ್ಯಕ್ರಮಕ್ಕೆ ನಾವು ಕೈ ಹಾಕುತ್ತಿದ್ದೇವೆ. ಅದರ ಬಗ್ಗೆ ಪ್ರಕಟ ಮಾಡಬೇಕೆಂದು ಸಹ ಇದ್ದೇವೆ. ಒಂದು ಮನೆಗೆ ಭಾಗ್ಯಜ್ಯೋತಿ ಮೂಲಕ ದೀಪದ ವ್ಯವಸ್ಥೆ ಮಾಡಬೇಕಾದರೆ 500 ರೂಪಾಯಿ ಕರ್ಚಾಗುತ್ತದೆಂದು ಅಂದಾಜು ಇದೆ. ಒಂದು ಕ್ಷೇತ್ರದಲ್ಲಿ ಈ ಆರ್ಥಿಕ ವರ್ಷದಲ್ಲಿ 1 ಸಾವಿರ ಭಾಗ್ಯಜ್ಯೋತಿಯನ್ನು ಮಂಜೂರು ಮಾಡುತ್ತಿದ್ದೇವೆ. ಇದು ಒಂದು ವರ್ಷಕ್ಕೆ, ಮುಂದಿನದನ್ನು ಆಮೇಲೆ ನೋಡೋಣ.

ಶ್ರೀ ಆರ್.ವಿ.ದೇವರಾಜ್:- ಅದು ಒಂದು ವರ್ಷಕ್ಕೆ.

ಶ್ರೀ ಎಸ್.ಬಂಗಾರಪ್ಪ:- ಹೌದು. ಒಂದು ಸಾವಿರ ಅಂದರೆ 224 ಕ್ಷೇತ್ರ ಬರುತ್ತದೆ. ಅದನ್ನು ನೀವು ಲೆಕ್ಕಹಾಕಿಕೊಳ್ಳಿ.

ಶ್ರೀ ಶಫಿ ಅಹಮದ್:- ಕಳೆದ ಅಧಿವೇಶನದಲ್ಲಿ ಜಿಲ್ಲೆಗೊಂದು ಅಂಬೇಡ್ಕರ್ ಭವನ ಕಟ್ಟಿಸುತ್ತೇವೆ ಎಂದು ಹೇಳಿದ್ದೀರಿ. ಅದನ್ನು ಕೊಟ್ಟರೆ ಬಹಳ ಸೂಕ್ತ ಇದೆ.

ಶ್ರೀ ಎಸ್. ಬಂಗಾರಪ್ಪ:- ಅದನ್ನು ಸಮಾಜ ಕಲ್ಯಾಣ ಮಂತ್ರಿಗಳು ಹೇಳಿದ್ದಾರೆ. ನಾನು ಎಲ್ಲದಕ್ಕೂ ಹೋಗುವುದಿಲ್ಲ. ಈಗ ನಾನು ಭಾಗ್ಯಜ್ಯೋತಿ ಬಗ್ಗೆ ಹೇಳುತ್ತಿದ್ದೇನೆ. ಒಂದು ವಿಧಾನಸಭಾ ಕ್ಷೇತ್ರಕ್ಕೆ ಒಂದು

ಸಾವಿರ ಎಂದರೆ224 ಕ್ಷೇತ್ರಗಳಿಗೆ ಎಷ್ಟಾಯಿತು ? ಒಟ್ಟು 11 ಕೋಟಿ ರೂಪಾಯಿಗಳನ್ನು ನಾವು ಇದಕ್ಕೆ ಖರ್ಚುಮಾಡುತ್ತೇವೆ. ಇದು ಒಂದು ಪ್ರಕಟಣೆ. ಬಡತನ ರೇಖೆಯ ಕೆಳಗೆ ಇರತಕ್ಕಂಥ ಎಲ್ಲರೂ, ಎಲ್ಲ ಜಾತಿಯವರೂ ಇರಬಹುದು. ಅವರು ಇವರು ಎಂದು ಇಲ್ಲ. ಬಡತನ ರೇಖೆಯ ಕೆಳಗಡೆ ಇರತಕ್ಕಂಥ ಯಾವುದೇ ಜಾತಿ ಇರಬಹುದು. ಅವರಿವರು ಎನ್ನತಕ್ಕಂಥ ಪ್ರಶ್ನೆ ನೋಡುವುದು ಬೇಡ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಈ ವರ್ಗಕ್ಕಾಗಿ ಹೋರಾಟ ಮಾಡಿದ್ದಾರೆ. ಈ ಜಾತಿ, ಆ ಜಾತಿ ಎಂದು ಅವರು ನೋಡಿಲ್ಲ. ಅವರ ಪುಸ್ತಕಗಳನ್ನು ಓದಿ ನಾನು ಈ ಮಾತನ್ನು ಆಡುತ್ತಿದ್ದೇನೆ. ನಾನು ಒಂದೊಂದಾಗಿ ಹಾವನ್ನು ಬುಟ್ಟಿಯಿಂದ ತೆಗೆಯುತ್ತಿದ್ದೇನೆ. ರೈತರ ಸಾಲದ ಬಗ್ಗೆ ಹೇಳಬೇಕೆಂದರೆ, ಇವತ್ತು ಹೆಚ್ಚಾಗಿ ನಾವೆಲ್ಲ ರೈತರ ಮಕ್ಕಳೇ ಇದ್ದೇವೆ. ರೈತರ ಬಗ್ಗೆ ಎಲ್ಲರೂ ಕಳಕಳಿ ಇರತಕ್ಕಂಥವರು ಇದ್ದೇವೆ. ಎಲ್ಲರೂ ಏಕಾಭಿಪ್ರಾಯ ಇಟ್ಟುಕೊಂಡು ಹೋರಾಟ ಮಾಡುತ್ತಿದ್ದೇವೆ. ಈ ಸಾಲ ಮನ್ನಾ ವಿಚಾರದಲ್ಲಿ ನಾನು ಪದೇ ಪದೇ ಹೇಳಿದ್ದೇನೆ. ಆದ್ದರಿಂದ ನಾನು ಮತ್ತೆ ವಿವರಗಳಿಗೆ ಹೋಗುವುದಿಲ್ಲ. ಕಳೆದ ವರ್ಷ ನಾವು ಒಂದು ಕಂತನ್ನು ಕಟ್ಟಿದ್ದೇವೆ. ಈಗಲೂ ಕೂಡ ನಬಾರ್ಡ್‌ಗೆ ಕಟ್ಟುವುದಕ್ಕೆ ಕೇಂದ್ರ ರೆಡಿ ಇದ್ದರೆ, ಮತ್ತೊಂದು ಕಂತು ಕಟ್ಟುವುದಕ್ಕೆ ನಾವು ರೆಡಿ ಇದ್ದೇವೆ. ಇದು ಕಟ್‌ಆಫ್ ಡೇಟ್ 2-10-1989 ಕ್ಕೆ ಸಂಬಂಧಪಟ್ಟ ವಿಚಾರ. ಬೇರೆ ಬೇರೆ ವರ್ಷಕ್ಕೆ ಸಂಬಂಧಪಟ್ಟ ವಿಚಾರ ಬರುವುದಿಲ್ಲ. ಈ ವಿಚಾರದಲ್ಲಿ ನಮ್ಮ ಹೃದಯವೈಶಾಲ್ಯ ತೋರಿಸಿದ್ದೇವೆ. ಮುಂದೆ ಕಟ್ಟುವುದಕ್ಕೆ ಕೂಡ ರೆಡಿಯಿದ್ದೇವೆ. ಇದಕ್ಕೆ ಸಂಬಂಧಪಟ್ಟಂತೆ, ಆ ವರ್ಷಕ್ಕೆ ಸಾಲದ ಬಾಕಿ ಬಗ್ಗೆ ಕೇಂದ್ರಕ್ಕೆ ಹೇಳಿದ್ದೇವೆ. ಎಲ್ಲ ಪಕ್ಷದವರು ಸೇರಿ ನಿಯೋಗ ಹೋದಾಗ ಸಹ ನಾವು ಹೇಳಿದ್ದೇವೆ. ಕೇಂದ್ರ ಸರ್ಕಾರದವರು ಇನ್ನೂ ಮಾಡಿಲ್ಲ. ಏಕೆಂದರೆ, ಬೇರೆ ಬೇರೆ ರಾಜ್ಯದವರು ಒತ್ತಾಯ ಮಾಡಿದ್ದಾರೆ. ಅದು ಇನ್ನೂ ಪರಿಶೀಲನೆ ಮಾಡತಕ್ಕಂಥ ವಿಚಾರವೆಂದು ನಮಗೆ ಗೊತ್ತಿರುವುದರಿಂದ ನಾವು ಇವತ್ತು ಉಳಿದಿರುವ ಕಂತನ್ನು ಕಟ್ಟುವುದಕ್ಕೆ ಸಿದ್ಧರಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿ, ಕೇಂದ್ರ ಸರ್ಕಾರದವರು ಏನು ಮಾಡುತ್ತಾರೆ ಎಂದು ನೋಡೋಣ. ಈ ಮಧ್ಯೆ ಆ ಕಾಲಕ್ಕೆ ಸಂಬಂಧಪಟ್ಟರತಕ್ಕ ಸಾಲದ ಬಗ್ಗೆ ಜಪ್ತಿ ವಗೈರೆ, ಈ ಹತ್ತು ಸಾವಿರ ರೂಪಾಯಿಗಳು ವರೆಗಿನ ಸಾಲದ ಬಗ್ಗೆ ಮಾತ್ರ ಬೇರೆ ವರ್ಷದ್ದು ಮಾಡಿದರೆ ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ. ಆ ಸಾಲದ ಜಪ್ತಿ ವಗೈರೆಗೆ ಹೋದರೆ ಅದನ್ನು ಯಾವುದು ಕೂಡ ಈಗ ಮಾಡದ ಹಾಗೆ ನಮ್ಮ ಅಧಿಕಾರಿಗಳಿಗೆ ಮತ್ತೊಂದು ಸಾರಿ ತಿಳುವಳಿಕೆ ಕೊಡುತ್ತೇವೆ. ಯಾರೂ ಕೂಡ ಅಟ್ಯಾಚ್‌ಮೆಂಟ್ ವಗೈರೆಗೆ ಹೋಗದಹಾಗೆ ಬರವಣಿಗೆಯಲ್ಲಿ ನಾವು ಕಳಿಸಿಕೊಡುತ್ತೇವೆ. ಇದಕ್ಕೆ ಸಂಬಂಧಪಟ್ಟ ಹಾಗೆ ಒಂದು ಹೇಳಿಕೆಯನ್ನು ಕೂಡ ನಾನು ಕೊಡುತ್ತಿದ್ದೇನೆ. ಇದು ಕೃಷಿ ಉತ್ಪಾದನೆಗೆ ಉತ್ತೇಜನ ಕೊಡತಕ್ಕಂಥ ಯೋಜನೆ. ಇಂಟರೆಸ್ಟ್ ಸಬ್ಸಿಡಿ ವಿಚಾರದಲ್ಲಿ ನಾವು ಮಾಡಿದ್ದೇವೆ. ಕೃಷಿ ಮತ್ತು ಗ್ರಾಮೀಣ ಸಾಲ ಮನ್ನಾ ಯೋಜನೆಗೆ ಸಂಬಂಧಪಟ್ಟ ಹೇಳಿಕೆಯನ್ನು ನಾನು ಕೊಡುತ್ತಿದ್ದೇನೆ. ಅದು ಹೀಗಿದೆ.

31-3-1991ಕ್ಕೆ ಮುಕ್ತಾಯವಾದ ಕಾರಣ ಹಾಗೂ ರೈತರ ಹೆಚ್ಚಿನ ಸಾಲ ವಸೂಲಾತಿ ಆಗದೆ ಬಾಕಿ ಉಳಿದಿರುವುದರಿಂದ ರೈತರಿಗೆ ನೆರವು ನೀಡುವ ಉದ್ದೇಶದಿಂದ ಕೃಷಿ ಉತ್ಪಾದನಾ ಯೋಜನೆ ಅಂದರೆ, ಇಂಟರೆಸ್ಟ್ ಸಬ್ಸಿಡಿಯನ್ನು ಸರ್ಕಾರ 16ನೇ ನವೆಂಬರ್ 1991ರ ಆದೇಶದ ಅನ್ವಯ ಜಾರಿಗೆ ತಂದಿರುತ್ತದೆ. ಇದರಿಂದಾಗಿ ದಿನಾಂಕ 31-3-1991ಕ್ಕೆ ಸುಸ್ತಿಯಾದಂಥ ಸಾಲಗಳು ಮತ್ತು 1-4-1991ರಿಂದ 31-3-1992ರವರೆಗೆ ಬಾಕಿಯಾಗಲಿರುವ ಚಾಲ್ತಿ ಸಾಲಗಳನ್ನು ಪೂರ್ಣ ಬಡ್ಡಿಸಹಿತವಾಗಿ 31-3-1992ರ ಒಳಗೆ ವಾಪಸ್ಸು ಮಾಡಿದರೆ ಅಂತಹ ರೈತರಿಗೆ ಬಡ್ಡಿದರ ಶೇಕಡಾ 5 ರಷ್ಟು ಹಣವನ್ನು ಉತ್ತೇಜನವಾಗಿ ವಾಪಸ್ಸು ಮಾಡಲಾಗುವುದು. ಈ ಯೋಜನೆಯ ಪ್ರಾರಂಭಿಕ ಹಂತದಲ್ಲಿ ಹಲವು ಅಡಚಣೆಗಳು ಇದ್ದ ಕಾರಣ, ಉತ್ತೇಜನದ ನೆರವನ್ನು ರೈತರು ಪೂರ್ಣವಾಗಿ ಪಡೆಯಲು ಸಾಧ್ಯವಾಗದ ಕಾರಣ ಸರ್ಕಾರ ಈ ಯೋಜನೆಯನ್ನು ದಿನಾಂಕ30-4-1992ರವರೆಗೆ

ವಿಸ್ತರಿಸಲು ತೀರ್ಮಾನಿಸಿದೆ. ಅಂದರೆ ಮುಂದಿನ ತಿಂಗಳು ಕೊನೆಯವರೆಗೆ ಮತ್ತೆ ವಿಸ್ತರಿಸಿದ್ದೇವೆ. ಅಷ್ಟರೊಳಗೆ ಕಟ್ಟಬೇಕು. ಏಕೆಂದರೆ ಅವತ್ತು ಮಾನ್ಯ ವಿರೋಧಪಕ್ಷದ ನಾಯಕರಾದ ಚಂದ್ರೇಗೌಡರು ಹೇಳಿದರು. 5 ಪರ್ಸೆಂಟ್ ಮುರಿದುಕೊಂಡೇ ಕೊಡಿ ಎಂದು ಹೇಳಿದರು. ಅದು ಹಾಗೆ ಕೊಡುವುದಕ್ಕೆ ಬರುವುದಿಲ್ಲ. ಈ ರೀತಿ ಮಾಡುವುದಕ್ಕೆ ಹೋದರೆ, ನಬಾರ್ಡ್‌ನವರು ತಕರಾರು ಮಾಡಿರುವುದರಿಂದ, ನಾವು ಅದಕ್ಕಾಗಿಯೇ, ಕೃಷಿ ಉತ್ಪಾದನೆ ಉತ್ತೇಜನ ಎನ್ನತಕ್ಕಂಥ ಯೋಜನೆಯನ್ನು ಮಾಡಿ, ಯಾರು ಪೂರ್ತಿ ಕಟ್ಟುತ್ತಾರೊ ಅವರಿಗೆ ಹಣವನ್ನು ನಾವು ಕೊಡುತ್ತೇವೆ. ಈಗಾಗಲೇ ಕಟ್ಟಿದವರಿಗೆ ಹಣವನ್ನು ಹಿಂದಕ್ಕೆ ಕೊಡತಕ್ಕ ಕಾರ್ಯಕ್ರಮವನ್ನು ಈಗಾಗಲೇ ಮಾಡಿದ್ದೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ನಾನು ಒಳಗಡೆ ಬಂದು ಧರಣಿ ಕುಳಿತುಕೊಳ್ಳುವುದಿಲ್ಲ. ತಾವು ಯೋಚನೆ ಮಾಡಬೇಡಿ. ಏಕೆಂದರೆ, ತಾವು ಅವತ್ತು ಈಲ್ಡ್ ಆದಾಗ, ನಾನು ಧರಣಿ ಕುಳಿತಿದ್ದೆ. ಇದರಿಂದ ನಿಮ್ಮ ಮನಸ್ಸಿಗೆ ಬೇಸರವಾಗಿದೆ.

ಶ್ರೀ ಎಸ್.ಬಂಗಾರಪ್ಪ:-ನೀವು ಧರಣಿ ಮಾಡಿ, ಮಾಡಿ, ಸಾಕಾಗಿ, ಇನ್ನು ಮುಂದೆ ಮಾಡುವುದಿಲ್ಲವೆಂದು ನನಗೂ ನಂಬಿಕೆ ಇದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ದಿನಾಂಕ 2-10-89ರವರೆಗೆ ಯಾರು 10 ಸಾವಿರ ದವರೆಗೆ ಸಹಕಾರಿ ಸಂಘಗಳಿಂದ ಸಾಲ ಪಡೆದ ಸಾಲಗಾರರು ಇದ್ದಾರೆ ಈ ಬಗ್ಗೆ ನಮ್ಮ ನಿಯೋಗ ಬಂದು ವಿನಂತಿ ಮಾಡಿ ಕೊಂಡಾಗ, ತಡೆಯಾಜ್ಞೆ ಕೊಡುವುದಾಗಿ ಬಂದಂಥ ನಿಯೋಗಕ್ಕೆ ತಾವು ಭರವಸೆ ಕೊಟ್ಟಿರಿ. ಮೊದಲನೇ10 ಸಾವಿರದವರೆಗೆ, ಅಂದರೆ, 2-10-89ರವರೆಗೆ ತೆಗೆದುಕೊಂಡ ಸಾಲಕ್ಕೆ ತಡೆಯಾಜ್ಞೆ ಕೊಟ್ಟು, ಎಲ್ಲಾ ರಾಜ್ಯಸರ್ಕಾರಗಳೂ ಕೇಂದ್ರಕ್ಕೆ ಒತ್ತಾಯ ತರುತ್ತಿದ್ದಾರೆ , ಈ ಸಾಲ ಮನ್ನಾ ಮಾಡುವುದಕ್ಕೆ ನನಗೂ ಕಳಕಳಿ ಇದೆ, ಯೋಚನೆ ಮಾಡೋಣ ಎನ್ನುವ ಮಾತನ್ನು ಹೇಳಿದಿರಿ. ಎರಡನೆಯದು, ಮಧ್ಯಪ್ರದೇಶ ಸರ್ಕಾರ ಸಾಲ ಮನ್ನಾ ಯೋಜನೆ ತಂದಿದ್ದರೆ, ಅದರ ಆರ್ಡರ್ ಕಾಪಿ ಕೊಡಿ, ಪರಿಶೀಲನೆ ಮಾಡಿ ಆ ರೀತಿ ಮಾಡುವುದಕ್ಕೆ ಯೋಚನೆ ಮಾಡೋಣ ಎಂದು ಹೇಳಿದಿರಿ. ನಾನು ತಮ್ಮಲ್ಲಿ ವಿನಂತಿ ಮಾಡುವುದು ಏನೆಂದರೆ, ಇವತ್ತು ಸದನದ ನಿಯೋಗ ಅಗತ್ಯವಿಲ್ಲ. ತಮ್ಮ ಮುಖ್ಯ ಕಾರ್ಯದರ್ಶಿಯವರನ್ನು ಕಳುಹಿಸಿಕೊಡಿ, ನಾನು ಅವರ ಜೊತೆಯಲ್ಲಿ ಹೋಗುತ್ತೇನೆ, ಈ ಖರ್ಚು ನಾವು ಕೊಡುತ್ತೇವೆ. ಸರ್ಕಾರದಿಂದ ಒಂದು ಪೈಸೆ ಖರ್ಚು ಮಾಡಬೇಡಿ. ಮಧ್ಯಪ್ರದೇಶದ 10 ಸಾವಿರ ರೂಪಾಯಿವರೆಗಿನ ಸಾಲ ಮನ್ನಾ ಯೋಜನೆಯ ಸರ್ಕಾರಿ ಆಜ್ಞೆಯನ್ನು ನಿಮಗೆ ಕಲುಹಿಸಿಕೊಟ್ಟಿದ್ದೇನೆ. ನಿಮಗೆ ತೃಪ್ತಿ ತರದಿದ್ದರೆ, ನಮ್ಮ ಖರ್ಚಿನಿಂದಲೇ ಹೋಗಿ ಬರುತ್ತೇವೆ. ನಿಮ್ಮ ಮುಖ್ಯಕಾರ್ಯದರ್ಶಿಯವರ ವಿಮಾನದ ಖರ್ಚನ್ನೂ ನಾವೇ ಕೊಡುತ್ತೇವೆ, ಅಲ್ಲಿಗೆ ಹೋಗಿ ಬಂದಮೇಲೆ ನಿಮಗೆ ವರದಿ ಕೊಡುತ್ತೇವೆ. ನಿಮ್ಮಲ್ಲಿ ನನ್ನ ಒಂದು ವಿನಂತಿ. ತಾರೀಖು 2-10-89 ರವರೆಗೆ ತೆಗೆದುಕೊಂಡ ಸಾಲದ ಬಗ್ಗೆ ತಾವು ಏನು ಆಶ್ವಾಸನೆ ಕೊಟ್ಟಿದ್ದೀರಿ ಅದರಂತೆ ತಡೆಯಾಜ್ಞೆ ಕೊಡಿ. ಆಮೇಲೆ ಸಾಲ ಮನ್ನಾ ಬಗ್ಗೆ ಯಾವ ರೀತಿ ಕಾರ್ಯಕ್ರಮ ರೂಪಿಸಬೇಕೆಂಬ ಬಗ್ಗೆ ಮುಂದೆ ಹೋಗಿ. ಎರಡನೆಯದು, ತಾವು ಪ್ರಧಾನಿಯವರಿಗೆ ಮತ್ತು ಹಣಕಾಸಿನ ಸಚಿವರಿಗೆ ಮನವಿ ಕೊಟ್ಟಾಗ, ಬಹಳ ಸ್ಪಷ್ಟವಾಗಿ ತಿಳಿಸಿದ್ದೀರಿ. ಬೇರೆ ಸಮಯದಲ್ಲಿ ನಾನು ಇಲ್ಲಿ ಮಾತನಾಡಲಿಲ್ಲ. ಮಾತನಾಡತಕ್ಕ ಆಗತ್ಯವೂ ಕಂಡುಬರಲಿಲ್ಲ. ತಾವು ಹೇಳಿದ್ದೀರಿ.

"farmers with overdues not exceeding Rs.10,000/- as on 2-10-1989, the real target ground of small and marginal farmers have not been benefitted from the scheme. It has only helped the wilful defaulters and honest borrowers are at a disadvantage ...."

ಕೊನೆಯ ಪ್ಯಾರಾದಲ್ಲಿ ನಾವು, ನೀವೆಲ್ಲಾ ಸಹಿ ಮಾಡಿ ಪ್ರಧಾನಿಯವರಿಗೆ ಕೊಟ್ಟಾಗ,

" We have examined the implication of the scheme and found out that it has not helped the farming community. We strongly urge the Goverment of India to simplify the scheme by removing some of the impractical conditions imposed. All overdues up to Rs. 10,000/- as on 2-10-1989 has to be written off by removing the condition imposed under the scheme."ಅಂದರೆ, ತಾತ್ವಿಕವಾಗಿ ಸರ್ಕಾರ ಮತ್ತು ವಿರೋಧಪಕ್ಷಗಳು ಒಪ್ಪಿದ್ದೇವೆ. ಕೇಂದ್ರ ಸರ್ಕಾರದ ಪರಿಷತ್ತಿನಿಂದ ರೈತರಿಗೆ ಅನುಕೂಲವಾಗುವುದಿಲ್ಲವೆಂದು ತಾವೇ ಒಪ್ಪಿದ್ದೀರಿ, ಮೊನ್ನೆ ಹೋದಂಥ ನಿಯೋಗದಲ್ಲಿ ಹೇಳಿದ್ದೀರಿ. ಅದಕ್ಕೋಸ್ಕರ, ನಿಮ್ಮಿಂದ ನಾನು ಇಷ್ಟೇ ನಿರೀಕ್ಷೆ ಮಾಡುವುದು. ದಿನಾಂಕ2-10-89ರ ವರೆಗೆ ಯಾರು 10 ಸಾವಿರದವರೆಗೆ ಸಾಲಗಾರರು ಇದ್ದಾರೆ, ಅವರನ್ನು ಮುಟ್ಟುವುದಿಲ್ಲ, ಅವರಿಂದ ವಸೂಲಿ ಮಾಡುವುದಿಲ್ಲವೆಂದು ಹೇಳಿ. ಉಳಿದಂಥವರು ಕಟ್ಟುವುದಕ್ಕೆ ನಾವೆಲ್ಲರೂ ಸೇರಿ ಪ್ರಯತ್ನ ಮಾಡೋಣ ಮತ್ತು ಕಟ್ಟುವಂಥ ವ್ಯವಸ್ಥೆ ಮಾಡೋಣ. ಆಮೇಲೆ ಎರಡನೆಯದು, ತಾವು ಭರವಸೆ ಕೊಟ್ಟಿರಿ, ಕಾವೇರಿ, ಕೃಷ್ಣಾಕ್ಕೆ ದುಡ್ಡು ಅಗತ್ಯ ಇದೆ ಎಂದು ಹೇಳಿದಿರಿ. ಇದು ನಮಗೂ ಮನದಟ್ಟಾಗಿದೆ.

ಶ್ರೀ ಎಸ್.ಬಂಗಾರಪ್ಪ:- ನೀವು ವಿಚಾರವನ್ನು ಪ್ರಸ್ತಾಪ ಮಾಡಿ ಬಿಟ್ಟುಬಿಡಿ. ಏಕೆಂದರೆ ನಾನು ಇನ್ನೂ ಮೇಲ್ಮನೆಗೆ ಹೋಗಬೇಕು. ನೀವು ಹಿಂದೆ ಮಾತನಾಡಲಿಲ್ಲವೆಂದು ಹೇಳಿ ಈಗ ಭಾಷಣ ಮಾಡಿಕೊಂಡು ಹೋದರೆ ಹೆಚ್ಚು ವಿಳಂಬವಾಗುತ್ತದೆ. ನೀವು ಬರೀ ವಿಚಾರ ಕೇಳಿ ಕುಳಿತು ಕೊಳ್ಳಬೇಕು. ಉತ್ತರದ ಮಧ್ಯದಲ್ಲಿ ಈ ರೀತಿ ಉದ್ದಕ್ಕೆ ಭಾಷಣ ಮಾಡುವುದಕ್ಕೆ ಬರುವುದಿಲ್ಲ, ನೀವು ಪ್ರಸ್ತಾಪ ಮಾಡಿ ಬಿಟ್ಟುಬಿಡಿ, ಅದನ್ನು ನಾನು ಹೇಳುತ್ತೇನೆ. ನೀವು ಈ ರೀತಿ ಹೇಳಿಕೊಂಡು ಹೋದರೆ, ನಾನು ಆ ಸದನಕ್ಕೆ ಹೋಗುವುದು ಬೇಡವೇ ? ಅಲ್ಲಿ ಬೇರೆ ರಿಪ್ಲೈ ಮಾಡಬೇಕು, ಅಲ್ಲಿ ಕಾಯುತ್ತಿದ್ದಾರೆ. ತಾವು ಮಾತವಾಡಿ, ಏನು ವಿಚಾರ ಕೇಳಬೇಕೋ ಕೇಳಿ ಬಿಟ್ಟುಬಿಡಿ, ಉದ್ದಕ್ಕೆ ಭಾಷಣ ಮಾಡುವುದು ಬೇಡ.

ಶ್ರೀ ಬಿ.ಎಸ್.ಯಡಿಯೂರಪ್ಪ:- ತಾನು, ನಾನು ಭಾಷಣ ಮಾಡುತ್ತಿದ್ದೇನೆಂದು ತಿಳಿದುಕೊಳ್ಳಬೇಡಿ. ನನಗೆ ಭಾಷಣ ಮಾಡುವ ಹಠವೂ ಇಲ್ಲ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:- ಇಲ್ಲಿ ಒಂದು ರೀತಿ ತಮಾಶೆಯಾಗಿ ನಡೆಯುತ್ತಿದೆ, ನಡೆಸಿ ಪರವಾಯಿಲ್ಲ, ಆದರೆ ಇದು ಬಹಳ ದಿವಸ ನಡೆಯುವುದಿಲ್ಲ. ಎರಡನೆಯದು, ಬಹುಶ: ನಿಮ್ಮ ಸ್ನೇಹಿತರು ನಾವು ನಿಂತಾಗ ಏಕೆ ಇಷ್ಟೊಂದು ಹಗುರವಾಗಿ ತೆಗೆದುಕೊಳ್ಳುತ್ತಿದ್ದಾರೋ ನನಗೆ ಅರ್ಥವಾಗುತ್ತಿಲ್ಲ. ನಿಮ್ಮ ಜೊತೆಯಲ್ಲಿ ಮಾತನಾಡುವಾಗ ಏನು ಹೇಳಿದೆವು, ಅದನ್ನು ಪ್ರಸ್ತಾಪ ಮಾಡುವ ಪ್ರಯತ್ನ ಮಾಡುತ್ತಿದ್ದೇವೆ. ತಾವೇ ಹೋದಸಾರಿ ಬಜೆಟ್ ಅಧಿವೇಶನದಲ್ಲಿ 11ನೇ ಮಾರ್ಚಿ 1991ರಲ್ಲಿ ಹೇಳಿದ್ದೀರಿ. ಅದಕ್ಕೋಸ್ಕರವಾಗಿ ನಾನು ಹೇಳತಕ್ಕಂಥಾದ್ದು. ನೀವು ಇಷ್ಟು ಭರವಸೆ ಕೊಡಿ. ಪ್ರತಿ ವರ್ಷ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಕೊಡುವ ಬಗ್ಗೆ ಯೋಚನೆ ಮಾಡಿ. ಕೃಷ್ಣಾ, ಕಾವೇರಿಗೆ ಮತ್ತು ಉಳಿದಂಥಾದ್ದಕ್ಕೆ 555 ಮತ್ತು 450 ಕೋಟಿ ಕೊಡುವಂಥಾದ್ದು ಇದೆ. ಆಮೇಲೆ ಎಕ್ಸೈಸ್ ಬಗ್ಗೆ ಏನು ಅಮೆಂಡ್‌ಮೆಂಟ್ ಇದೆ ಅದನ್ನು ವಾಪಸ್ ತೆಗೆದುಕೊಳ್ಳುವುದು ಈ ಮೂರರ ಬಗ್ಗೆ ನಾನು ಸ್ಪಷ್ಟೀಕರಣ ಕೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ: ಮಾನ್ಯ ಉಪಾಧ್ಯಕ್ಷರೇ, ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರತಕ್ಕದ್ದು ಇನ್ನು ಎರಡು ಪ್ರಮುಖವಾಗಿರತಕ್ಕ ವಿಚಾರಗಳು.

ಶ್ರೀ ಬಿ.ಎಸ್.ಯಡಿಯೂರಪ್ಪ:- ಸಾಲ ಮನ್ನಾ ಬಗ್ಗೆ ಹೇಳಲಿಲ್ಲ.

ಶ್ರೀ ಎಸ್.ಬಂಗಾರಪ್ಪ:- ನಾನು ಹೇಳುತ್ತೇನೆ, ತಾವು ಕುಳಿತುಕೊಳ್ಳಿ. ಈ ವಿಚಾರದಲ್ಲಿ ಇಷ್ಟೇ

ಹೇಳುವುದು. ಫ್ಲೈಟ್ ಚಾರ್ಜ್ ಕೊಡುತ್ತೇನೆ, ಖರ್ಚುಕೊಡುತ್ತೇನೆ ಎಂದು ಹೇಳಿದಿರಿ, ಏನೂ ಬೇಡ. ಮಧ್ಯ ಪ್ರದೇಶದ ಆರ್ಡ್‌ರ್ ಬಗ್ಗೆ ತಾವು ಹೇಳಿದಿರಿ. ತಾವು ಆರ್ಡ್‌ರ್ ಕಾಪಿ ಕಳುಹಿಸಿಕೊಟ್ಟರೆ ಸಾಕು ಎಂದು ಹೇಳಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ:-ಇದು ಆರ್ಡ್‌ರ್ ಅಲ್ಲ ಎಂದು ಹೇಳಿದರೆ ನಾನು ನನ್ನ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೋಗುತ್ತೇನೆ.

ಶ್ರೀ ಎಸ್.ಬಂಗಾರಪ್ಪ:-ಬಂದೇ, ಬಂದೇ, ಸ್ವಲ್ಪ ತಾಳಿ, ನಾನು ಇನ್ನೂ ಪೂರ್ತಿ ಮುಗಿಸಿಲ್ಲ. ನೀವು ಆರ್ಡ್‌ರ್ ಕಳುಹಿಸಿಕೊಡುತ್ತೇನೆ ಎಂದು ಹೇಳಿದಿರಿ, ಇನ್ನೂ ಕಳುಹಿಸಿಕೊಟ್ಟಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನಾವು ಕಳುಹಿಸಿಕೊಟ್ಟಿದ್ದೇವೆ ಸ್ವಾಮಿ.

ಶ್ರೀ ಎಸ್.ಬಂಗಾರಪ್ಪ:-ಈಗ ಕಳುಹಿಸಿಕೊಡಿ ಸ್ವಾಮಿ, ಕಳುಹಿಸುತ್ತೇವೆ ಎಂದು ಹೇಳಿಬಿಟ್ಟು, ಕಳುಹಿಸಿ ಬಿಟ್ಟಿದ್ದೇವೆ ಎಂದು ದೊಡ್ಡ ಭಾಷಣ ಮಾಡುತ್ತಾ ಕುಳಿತುಕೊಂಡರೆ ಆಗುವುದಿಲ್ಲ. I have'nt got much time at my disposal.

ಉಪಾಧ್ಯಕ್ಷರು:-ಈಗ ನೀವು ಕಳುಹಿಸಿಕೊಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ:-ಅದು ಆರ್ಡ್‌ರ್ ಅಲ್ಲ ಎಂದು ಹೇಳುತ್ತಾರೆ. ನಿಮ್ಮ ಚೀಫ್ ಸೆಕ್ರೆಟರಿಯವರನ್ನು ಕಳುಹಿಸಿಕೊಡಿ ಎಂದು ಏಕೆ ಹೇಳುತ್ತಿದ್ದೇನೆಂದರೆ ಅವರು ಬಂದು ನೋಡಲಿ, ಅದು ಸತ್ಯ ಅಲ್ಲ ಎಂದರೆ ನಾನು ಎಂ.ಎಲ್.ಎ. ಗಿರಿಗೆ ರಾಜೀನಾಮೆ ಕೊಡುತ್ತೇನೆ.

ಶ್ರೀ ಎಸ್.ಬಂಗಾರಪ್ಪ:-ನೀವು ರಾಜೀನಾಮೆ ಕೊಡುವುದಕ್ಕೆ ಹೋಗಬೇಡಿ. ನೀವು ಇಲ್ಲಿ ಇರಬೇಕೆಂದು ನಮ್ಮೆಲ್ಲರ ಆಸೆ, ರಾಜೀನಾಮೆ ಕೊಡುವ ಅವಶ್ಯಕತೆ ಏನೂ ಇಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:-ಅದು ಆರ್ಡ್‌ರ್ ಅಲ್ಲ ಎಂದರೆ ಏನು ಮಾಡಲಿ ಹೇಳಿ.

ಶ್ರೀ ಎಸ್.ಬಂಗಾರಪ್ಪ:- ನಿಮ್ಮ ಆರ್ಡ್‌ರ್ ಓದಿ ಹೇಳುತ್ತೇನೆ ಕುಳಿತುಕೊಳ್ಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಫಸ್ಟ್ ಪ್ಯಾರಾ ಓದಿರಿ.

ಶ್ರೀ ಎಸ್.ಬಂಗಾರಪ್ಪ:- ಫಸ್ಟ್ ಪ್ಯಾರಾ ಅಲ್ಲ This is not the order of the Government. ಇದನ್ನು ಓದಿ ನೋಡಿ brief note about relief schemes implemented by the Government of Madhya Pradesh. ನೀವು ಕೊಟ್ಟಿದ್ದನ್ನು ನಾನು ಈಗಲೆ ನೋಡಿದ್ದು. ಇದು ರಿಜಿಸ್ಟ್ರಾರ್ ಆಫ್ ಕೋ ಆಪರೇಟಿವ್ ಸೊಸೈಟೀಸ್, ಮಧ್ಯಪ್ರದೇಶ್ ಇವರು ತಯಾರಿಸಿರುವ ಬ್ರೀಫ್ ನೋಟ್. ಇದು ಗೌರ್‍ನಮೆಂಟ್ ಆರ್ಡ್‌ರ್ ಅಲ್ಲ. ಒಂದು ಇಲಾಖೆ ತಯಾರು ಮಾಡಿದ್ದು. ಈ ತರಹನೋಟ್‌ಗಳು ನಮ್ಮ ಹತ್ತಿರ ಒಂದು ಇಷ್ಟು ಇದೆ. ತಮಗೆ ಕಳುಹಿಸಿಕೊಡಲೇ?

ಶ್ರೀ ಬಿ.ಎಸ್.ಯಡಿಯೂರಪ್ಪ:- ಏನು ಸ್ವಾಮಿ, ಏನು ಮಾತನಾಡುತ್ತೀರಿ.

ಶ್ರೀ ಎಸ್. ಬಂಗಾರಪ್ಪ:- ಯಡಿಯೂರಪ್ಪನವರೇ, ದಯವಿಟ್ಟು ಕುಳಿತುಕೊಳ್ಳಿ. ಗೌರ್‍ನಮೆಂಟ್ ಆರ್ಡ್‌ರ್ ಕಳುಹಿಸಿಕೊಡಿ ಎಂದು ಒಂದು ಐವತ್ತು ಸಾರಿ ನಾನು ಹೊಡೆದುಕೊಂಡಿದ್ದೇನೆ. There is no such G.O. issued by the Madhya Pradesh Government.

ಶ್ರೀ ಬಿ.ಎಸ್.ಯಡಿಯೂರಪ್ಪ:- ಅಲ್ಲಿ ಹತ್ತು ಸಾವಿರ ರೂಪಾಯಿಗಳವರೆಗೆ ಯಾವುದೇ ಷರತ್ತಿಲ್ಲದೆ ಮನ್ನಾ ಮಾಡದೇ ಇದ್ದರೆ ನಾವು ನಾಲ್ಕು ಜನರೂ ರಾಜೀನಾಮೆ ಕೊಡುತ್ತೇವೆ. ನಿಮ್ಮ ಚೀಫ್ ಸೆಕ್ರೆಟರಿಯವರನ್ನು ಅಲ್ಲಿಗೆ ಕಳುಹಿಸಿಕೊಡಿರಿ. ಅವರು ಹೋಗಿ ನೋಡಿಕೊಂಡು ಬರಲಿ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ:- ಬರೀ ಹೀಗೆ ಮಾತನಾಡಿ, ಬೇಜವಾಬ್ದಾರಿಯಿಂದ ಏತಕ್ಕೆ

ಮಾತನಾಡುತ್ತೀರಿ. ತಾವು ಭರವಸೆ ಕೊಟ್ಟಂತೆ?

(ಗೊಂದಲ)

ಶ್ರೀ ಎಸ್.ಬಂಗಾರಪ್ಪ: ನೀವು ಕಳುಹಿಸಿದ್ದೀರಲ್ಲ ಅದರಲ್ಲಿ ಏನಿದೆ ಎಂದರೆ, Madhya Pradesh Debt Relief, Madhya Pradesh Agriculture Production Incentive Scheme. . . . ನಾನು ಅದಕ್ಕೇ ಹೇಳಿದ್ದು, ಇದು ಮಧ್ಯಪ್ರದೇಶದ ಅಗ್ರಿಕಲ್ಚರ್ ಇನ್‌ಸೆಂಟೀವ್ ಸ್ಕೀಮ್ಸ್ ಇದ್ದಹಾಗೆ ಕರ್ನಾಟಕ ಸ್ಟೇಟ್ ಫಾರ್ಮರ್ಸ್ ಇನ್‌ಸೆಂಟೀವ್ ಸ್ಕೀಮ್ ಮಾಡಿದ್ದೇವೆ. ಇಂತಹದನ್ನೇ ಇವರು ಉದ್ದಕ್ಕೂ ಹಾಕಿಕೊಂಡು ಕುಳಿತಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಹಿಂದುಗಡೆ ಪೇಜ್ ನೋಡಿ.

ಶ್ರೀ ಎಸ್.ಬಂಗಾರಪ್ಪ:- ಹಿಂದುಗಡೆ ಪೇಜ್‌ನಲ್ಲಿ ಏನಿದೆ ?ಮಧ್ಯಪ್ರದೇಶ ಡೆತ್ ರಿಲೀಫ್ ಸ್ಕೀಮ್‌ನಲ್ಲಿ ಬೆನಿಫಿಷಿಯರೀಸ್ 24.48 ಲಕ್ಷ 446.86 ಮಧ್ಯಪ್ರದೇಶ ಡೆತ್ ರಿಲೀಫ್ ಸ್ಕೀಮ್‌ನಲ್ಲಿ 0.60 ಪರ್‌ಸೆಂಟ್ ಬೆನಿಫಿಷಿಯರೀಸ್, ಬರೀ 60 ಸಾವಿರ ಜನ. ಆಮೇಲೆ ಮಧ್ಯಪ್ರದೇಶ ಅಗ್ರಿಕಲ್ಚರಲ್ ಸ್ಕೀಮ್‌ನಲ್ಲಿ 9.46ಸಾವಿರ. ಒಟ್ಟು ಟೋಟಲ್ ಇರತಕ್ಕದ್ದು ಎಷ್ಟು, ಎಷ್ಟು ಜನ ಸಾಲಗಾರರು ಇರತಕ್ಕದ್ದು, ಎಷ್ಟು ಸಾವಿರ ಕೋಟಿ, ಎಷ್ಟು ನೂರು ಕೋಟಿ ಸಾಲ ಇದೆ, ಅದು ಏನು ಎಂದು ನೋಡತಕ್ಕಂಥ ವಿಚಾರ ಅದರಲ್ಲಿ ಏನೇನೂ ಇಲ್ಲ. ಜಿ.ಓ.ಎಂದರೆ ಹೇಗೆ ಇರಬೇಕು, ಇಷ್ಟು ಜನ ಸಾಲಗಾರರು, ಇಷ್ಟು ನೂರು ಕೋಟಿ ರೂಪಾಯಿ ಸಾಲ, ಎಷ್ಟು ವರ್ಗದವರು, ಇಷ್ಟು ಜನಕ್ಕೆ ತೊಂದರೆಯಾಗಿದೆ, ಅಪ್ ಟು 10 ಥೌಸಂಡ್ ಇಷ್ಟಿದೆ, ಅಪ್‌ಟು 10 ಥೌಸಂಡ್ ಇಷ್ಟು ಮನ್ನಾ ಮಾಡಲಾಗಿದೆ, ಈ ಸ್ಕೀಮ್‌ನಲ್ಲಿ, ಮಧ್ಯೆ ಮಧ್ಯೆ ಇದೆಲ್ಲಾ ಬರಬೇಕು, ಇದೇನೂ ಇಲ್ಲದೆ ನೀವು ತೆಗೆದುಕೊಂಡು ಹೋಗಿ ಬ್ರೀಫ್ ನೋಟ್, ರಿಜಿಸ್ಟ್ರಾರ್ ಆಫ್ ಕೋ ಆಪರೇಟೀವ್ ಸೊಸೈಟೀಸ್, ಮಧ್ಯಪ್ರದೇಶ, ಇವರು ತಯಾರಿಸಿದ ಬ್ರೀಫ್ ನೋಟ್ ಕಳುಹಿಸಿದರೆ, ಅದು ಜಿ.ಓ.ಆಗುವುದಿಲ್ಲ. ಅದೇನೇ ಜಿ.ಓ. ಇದ್ದರೂ ದಯವಿಟ್ಟು ಅದನ್ನು ತರಿಸಿ, ಅಧನ್ನು ನಮಗೆ ಕಳುಹಿಸಿಕೊಡಿ, ಆಮೇಲೆ ಬೇಕಾದರೆ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ:- ತಾವು ಈಗ ಸ್ಟೇ ಕೊಡುವುದಿಲ್ಲವೇ ಸ್ವಾಮಿ. ತಾವು ಭರವಸೆ ಕೊಟ್ಟಹಾಗೆ ಆಗುವುದಿಲ್ಲ ಎಂದು ತಾವು ಹೇಳುವುದಾದರೆ ಹೇಳಿ. 55 ಜನ ಇದ್ದಂಥ ನಮ್ಮ ನಿಯೋಗ ಬಂದಾಗ, ಅದರಲ್ಲಿ ಮಾನ್ಯ ಬಣಕಾರ್‌ರವರು ಇದ್ದರು, ಇನ್ನೂ ಪ್ರಮುಖರು ಇದ್ದರು, ಅವರ ಎದುರುಗಡೆ ತಾವು ಆಶ್ವಾಸನೆ ಕೊಟ್ಟಿದ್ದೀರಿ.

ಶ್ರೀ ಎಸ್.ಬಂಗಾರಪ್ಪ:-ಯಡಿಯೂರಪ್ಪನವರೇ ನಾನು ಹೇಳಿದ್ದೇನೆ, ಅದಕ್ಕೆ ಉತ್ತರ ಕೊಟ್ಟು ಆಯಿತು. ಐವತ್ತು ಸಲ ಹೇಳುವುದಕ್ಕೆ ಹೋಗುವುದಿಲ್ಲ. ನಾನು ಉತ್ತರ ಕೊಟ್ಟು ಆಯಿತು, ನೀವು ಕೇಳಿಕೊಳ್ಳಲಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಏನು ಕೊಟ್ಟಿದ್ದೀರಿ, ಏನೂ ಹೇಳಲಿಲ್ಲ.

ಶ್ರೀ. ಎಸ್.ಬಂಗಾರಪ್ಪ:- ನಾನು ಉತ್ತರ ಕೊಟ್ಟಿದ್ದೇನೆ. ನಾನು ಒಂದು ಹೇಳುತ್ತೇನೆ. ಅಷ್ಟಾದರೂ ಕೂಡ ಕೇಂದ್ರ ಸರಕಾರದವರು ತಿಳಿಸುತ್ತೇವೆಂದು ಹೇಳಿದ್ದಾರಲ್ಲ ಕುಳಿತುಕೊಳ್ಳಿ, ತಾವು ಕುಳಿತುಕೊಳ್ಳಿ, ನಿಂತುಕೊಂಡರೆ ಆಗುವುದಿಲ್ಲ. ನಾನು ಏನು ಹೇಳಿದ್ದೇನೆ ಎಂದರೆ, ನಿಮ್ಮ ಮಧ್ಯೆ ಪ್ರದೇಶ ಸರ್ಕಾರದ ಜಿ.ಓ.ಬರುವವರೆಗೂ ಎಂದು ಕೂಡ ನಾನು ಹೇಳುವುದಕ್ಕೆ ಹೋಗಲಿಲ್ಲ. ನಾನು ಏನು ಹೇಳಿದ್ದೇನೆ ಎಂದರೆ ಕರ್ನಾಟಕ ರಾಜ್ಯದ ರೈತರ ಹಿತದೃಷ್ಟಿಯಿಂದ ಕೇಂದ್ರ ಸರ್ಕಾರಗವರು ಏನು ವಿಚಾರ ಮಾಡುತ್ತೇವೆಂದು ಹೇಳಿದ್ದಾರೆ, ಬೇರೆ ಬೇರೆ ರಾಜ್ಯ ಸರ್ಕಾರಗಳವರೂ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದಿದ್ದಾರೆ, ಆಣೆವಾರಿ ಮತ್ತೊಂದು ಕಂಡೀಷನ್ಸ್ ತೆಗೆಯಬೇಕೆಂದು ನಮ್ಮದೂ ಒತ್ತಡ ಇದೆ, ಅವರದೂ ಒತ್ತಡ ಇದೆ. We are all party to the

memorandum submitted to the Prime Minister and the Finance Minister and the Agriculture Minister of which you are also a party. You are a eye-witness.ನಾವು ಎಲ್ಲರೂ ಸೇರಿ ಕೊಟ್ಟಿದ್ದು ಆಗಿದೆ. ಕೇಂದ್ರಸರ್ಕಾರದವರು ಸದ್ಯದಲ್ಲೇ ಕಳುಹಿಸುತ್ತೇವೆಂದು ಹೇಳಿದ್ದಾರೆ. ಮುಂದೆ ಏನು ಬರುತ್ತದೋ ನೋಡೋಣ. ಅಲ್ಲಿಯವರೆಗೂ ತಡೆಯುತ್ತೇವೆ ಎಂದು ಹೇಳಿ ಆಯಿತಲ್ಲಾ ಸ್ವಾಮಿ. ನೀವು ಎಲ್ಲಿದ್ದೀರಿ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಸ್ವಾಮಿ ಒಂದು ನಿಮಿಷ . . . .

(ಗೊಂದಲ)

ಶ್ರೀ ಎಸ್.ಬಂಗಾರಪ್ಪ:-ಅಲ್ಲಿಯವರೆಗೆ ತಡೆ ಹಿಡಿದಿದ್ದೇವೆ. ಯಾವುದು ಕೂಡ ಒತ್ತಾಯ ಪೂರ್ವಕವಾಗಿ ವಸೂಲಾತಿ ಮಾಡುವುದಿಲ್ಲವೆಂದು ನಾನು ಹೇಳಿದೆ. ಹೇಳಿ ಆಯಿತು.

ಶ್ರೀ ಬಿ.ಎಸ್.ಯಡಿಯೂರಪ್ಪ:- ಬಲತ್ಕಾರದಿಂದ ವಸೂಲಾತಿ ಮಾಡುವುದಿಲ್ಲವೆಂದು ಹೇಳಿ.

ಶ್ರೀ ಎಸ್.ಬಂಗಾರಪ್ಪ:- ಹೇಳಿ ಆಯಿತಲ್ಲ. ನೀವು ಹೇಳಿದ ಹಾಗೆ ತಡೆಯಾಜ್ಞೆಯಂತಲ್ಲ. ಯಾವುದೇ ಒತ್ತಾಯದ ವಸೂಲಾತಿ ಮಾಡುವುದಿಲ್ಲ ಎಂದರೆ ಅದರ ಅರ್ಥ ಏನು? ಕೇಂದ್ರ ಸರ್ಕಾರದಿಂದ ಬರುವವರೆಗೆ, ಕಟಾಫ್ ಡೇಟ್ ಅಲ್ಲಿಯವರೆಗೂ ಅದು ಹಾಗೆಯೇ ಇರುತ್ತದೆ ಎಂದು ಅದರ ಅರ್ಥ. ನಾನು ಇನ್ನೇನು ಸ್ವಾಮಿ ಹೇಳುವುದು. ಇದಾದ ಮೇಲೆ ಮತ್ತೊಂದು ರೈತರಿಗೆ ಸಂತೋಷವಾಗತಕ್ಕಂಥ ವಿಚಾರವನ್ನು ಪ್ರಕಟಣೆ ಮಾಡುತ್ತಿದ್ದೇನೆ. ಅದು ಕೆ.ಇ.ಬಿ.ಯವರಿಗೆ ಸಂಬಂಧಪಟ್ಟಂತಹ ವಿಚಾರ. ಇಲ್ಲಿ ನಾನು ಓದಿ ಬಿಡುವುದು ಒಳ್ಳೆಯದು. ಅದು ಈ ರೀತಿ ಇದೆ. I had proposed in my Budget that the Karnataka Electricity Board shall give power to irrigation pumpsets upto 10 HP free of cost with effect from 1st of April 1992 and that concession would be applicable only to farmers who repay their existing arrears. I have since received many representations from Legislators and Farmers Associations in the matter of repayment of the existing arrears they represented that interest component of these arrears is very high and therefore Government should consider waiving of the payment of the interest.ಅದೇನು ಬಾಕಿ ಇರುತ್ತದೆ, ಅದರ ಮೇಲಿರತಕ್ಕಂಥ ಬಡ್ಡಿ ಬಿಟ್ಟು, ಬಿಟ್ಟರೆ ನಾವು ಅಸಲು ಕಟ್ಟುತ್ತೇವೆ ಎಂದು ಅನೇಕ ಜನ ಹೇಳಿದ್ದಾರೆ. ತಾವು ಕೂಡ ಅನೇಕ ಜನ ಮಾನ್ಯ ಸದಸ್ಯರು ನಮ್ಮಲ್ಲಿ ಬಂದು ರಾಜ್ಯದ ರೈತರ ಪರವಾಗಿ ತಿಳಿಸಿದ್ದೀರಿ. I have carefully examined the implications of these representations. with a view to providing further incentive to farmers I propose that the interest component of the arrears will be completely waived. ಬಡ್ಡಿಯನ್ನು ಪೂರ್ತಿ ವಜಾ ಮಾಡುತ್ತಿದ್ದೇವೆ. If the farmers voluntarily pay the Principal amount due to the Karnataka Electricity Board before 30th April 1992. ಈ ತಿಂಗಳವರೆಗೆ ಎಂದು ನಾನು ಬಜೆಟ್‌ನಲ್ಲಿ ಹೇಳಿದ್ದೆ. ಇನ್ನೂ ಒಂದು ತಿಂಗಳು ಮುಂದಕ್ಕೆ ಹಾಕಿದ್ದೇನೆ. ಏಪ್ರಿಲ್ ಒಳಗಾಗಿ ಯಾರು ಇಲ್ಲಿಯವರೆಗೆ ಬಾಕಿ ಇರತಕ್ಕಂಥ ಅಸಲು ಕಟ್ಟಿದರೆ ಸಾಕು ನಾವು ಅವರಿಗೆ ಇಂಟ್ರೆಸ್ಟ್ ಸಂಪೂರ್ಣವಾಗಿ ಬಿಟ್ಟು ಹಾಕಿದ್ದೇವೆ. That amounts to corres. ಎಷ್ಟು ಕೋಟಿ ರೂಪಾಯಿಗಳು ಎಂದು ನಾನು ಈಗ ಹೇಳಲಾರೆ. ಅದಷ್ಟನ್ನೂ ವಜಾ ಮಾಡಿದ್ದೇನೆ. ಆಮೇಲೆ ಏಪ್ರಿಲ್ ಒಂದನೇ ತಾರೀಖಿನಿಂದ ಅವರಿಗೆ ಫ್ರೀಯಾಗಿ ಸಪ್ಲೈ ಕೊಡುತ್ತೇವೆ. ಯಾರು ಈ ತಿಂಗಳ

ಒಳಗಾಗಿ ಅಸಲು ಹಣ ಕಟ್ಟಿಬಿಟ್ಟಿದ್ದಾರೆ ಅವರಿಗೆ ಏಪ್ರಿಲ್‌ನಿಂದ ಫ್ರೀ ಸಪ್ಲೈ ನಾವು ಕೊಡುತ್ತಾ ಹೋಗುತ್ತೇವೆ. ಇನ್ನೊಂದು ವಿಚಾರ ಏನೆಂದರೆ, ರೈತ ಸಂಘದ ಪ್ರೊ. ಎಂ.ಡಿ.ನಂಜುಂಡಸ್ವಾಮಿ ಯವರು ಮತ್ತು ರೈತ ಸಂಘದ ಮುಖಂಡರಾದ ಸುಂದರೇಶ್ he is coming from my own District Shimoga. ಅವರು ಈ ಸಂಬಂಧವಾಗಿ ಮಾತನಾಡುವಾಗ ಒಂದು ಮಾತು ಹೇಳುತ್ತಿದ್ದರು. ಏನು ಹೇಳಿದರು ಅಂದರೆ ಈಗ ನಾವು ಡ್ಯಾಮ್‌ಗೆ ಹಣ ಹಾಕುತ್ತೇವೆ. ಕೆನಾಲ್‌ಗೆ ಹಣ ಹಾಕುತ್ತೇವೆ. ಅವುಗಳನ್ನು ಕಟ್ಟುತ್ತೇವೆ. ಆದರೆ ಇರಿಗೇಷನ್ ಸೆಸ್ ಬಾಕಿ ಬರುತ್ತಿಲ್ಲ ಎಂದು ಪದೇ ಪದೇ ನಾವು ಇಲ್ಲಿ ಮಾತನಾಡುತ್ತೇವೆ. ಇವತ್ತು ನಾವು ಹಣ ಹಾಕಿದ ಮೇಲೆ ರೈತರು ಕಟ್ಟಿಲ್ಲ ಎನ್ನತಕ್ಕಂಥದ್ದಲ್ಲ. ಅಲ್ಲಿ ಕ್ರಾಪ್ ವೈಲೇಶನ್ ಪೆನಾಲಿಟಿ ಎನ್ನತಕ್ಕಂಥಾದ್ದು ಹಾಕುತ್ತಾರೆ. ಅದೇನೆಂದರೆ ನೀವು ಭತ್ತ ಹಾಕಬೇಡಿ ರಾಗಿ ಹಾಕಿ ಅಂದರೆ ಭತ್ತ ಹಾಕುವುದು, ಅಲ್ಲಿಗೆ ನೀರು ಬೇಕು ಎನ್ನುವುದು, ಅದಕ್ಕೆ ಪೆನಾಲಿಟಿ ಬರುತ್ತದೆ. ಅದಕ್ಕೆ ಅಸಲು ಹಣದ ಮೇಲೆ ಇಂಟರೆಸ್ಟ್ ಇಲ್ಲ. ಒಟ್ಟು ಕ್ರಾಪ್ ವೈಲೇಶನ್ ಪೆನಾಲಿಟಿ ಸುಮಾರು 92 ಕೋಟಿ ರೂಪಾಯಿಗಳು ಇದೆ. 4-5 ದಿವಸಗಳ ಹಿಂದೆ ಅವರ ಸಂಘದ ಪ್ರತಿನಿಧಿಗಳ ಜೊತೆ ಮಾನ್ಯ ಪ್ರೊಫೆಸರ್ ನಂಜುಂಡಸ್ವಾಮಿಯವರು ನಾವು ಕುಳಿತುಕೊಂಡು ಮಾತನಾಡಬೇಕಾದರೆ, ಹೇಳಿದರು, ಈ ಪೆನಾಲ್ಟಿ ಒಂದು ತೆಗೆದುಹಾಕ್ ಬಿಡಿ, ಕ್ರಾಪ್ ವಯಲೇಷನ್ ಪೆನಾಲ್ಟಿ ತೆಗೆದುಬಿಟ್ಟರೆ ಅಸಲು ಹಣವನ್ನು ಕಟ್ಟಿಸುವುದಕ್ಕೆ ಬೇಕಾದರೆ ನಾವೇ ಹೇಳಿಬಿಡುತ್ತೇವೆ ಎಂದು ಕೂಡ ಹೇಳಿದರು. ಅವರೂ ರೈತರ ಪರವಾಗಿ ಹೇಳುತ್ತಾರೆ. ನಾವು ರೈತರ ಮಕ್ಕಳು ಕರ್ನಾಟಕ ರಾಜ್ಯದಲ್ಲಿ ನಾವು ರೈತರ ಪರವಾಗಿ ವಾದ ಮಾಡುತ್ತಾ ಬಂದಿದ್ದೇವೆ. ಇದನ್ನು ಅನುಸರಿಸಿ ಒಟ್ಟು 9 ಲಕ್ಷ 78 ಸಾವಿರದ 766 ಹೆಕ್ಟೇರ್ ಏನಿದೆ ಇದಕ್ಕೆ ಸಂಬಂಧಪಟ್ಟಂತೆ ಟೋಟಲ್ ಡಿಮ್ಯಾಂಡ್ ಇರತಕ್ಕಂಥಾದ್ದು 366 ಕೋಟಿ. ಇದರಲ್ಲಿ ಕ್ರಾಪ್ ವಯಲೇಷನ್ ತೆಗೆದುಬಿಟ್ಟರೆ ಟೋಟಲ್ ಡಿಮ್ಯಾಂಡ್ ಉಳಿಯತಕ್ಕಂಥಾದ್ದು ನೆಕ್ಸ್ಟ್ 148 ಕೋಟಿ. ಇದು ಇರತಕ್ಕಂಥಾದ್ದು excluding figures pertaining to U.K.P. ಟಿ.ಬಿ.ಪಿ.ಯದು ಇನ್‌ಫರ್ಮೇಷನ್ ನಮಗೆ ಸಿಕ್ಕಿಲ್ಲ. ಇದಕ್ಕೂ ಕೂಡ ಒಂದೇ ರೀತಿ ಪ್ರಿನ್ಸಿಪಲ್‌ನ್ನು ಅಡಾಪ್ಟ್ ಮಾಡುತ್ತೇವೆ. ಇದರಲ್ಲಿ total demand of water rate is 241 crores, crop violation penalty 92 crores. . .ಅಲ್ಲಿಗೆ ನೆಟ್ ವಾಟರ್ ರೇಟ್ ಉಳಿಯತಕ್ಕಂಥಾದ್ದು 148 ಕೋಟಿ ರೂಪಾಯಿಗಳು ಮಾತ್ರ. ಉಳಿದವು ಅಷ್ಟೂ ಪೆನಾಲ್ಟಿ ನಾವು ವಜಾ ಮಾಡಿ ಹಾಕಿದ್ದೇವೆ. ರಾಜ್ಯದ ರೈತರ ಹಿತ ದೃಷ್ಟಿಯಿಂದ ಇದನ್ನು ನಾವು ಮಾಡಿದ್ದೇವೆ. ಯು.ಕೆ.ಪಿ., ಟಿ.ಬಿ.ಪಿ. ಅಂದರೆ ತುಂಗಭದ್ರ ಪ್ರಾಜೆಕ್ಟ್, ಏನಿದೆ ಅದಕ್ಕೂ ಕೂಡಾ ಇದೇ ರೀತಿ ಅನ್ವಯ ಮಾಡುತ್ತೇವೆ. ಅದರ ಅಂಕಿ ಅಂಶ ಸಿಕ್ಕಿದ ಮೇಲೆ ಎಷ್ಟು ಎನ್ನತಕ್ಕಂಥಾದ್ದನ್ನು ನಾವು ತಿಳಿಸುತ್ತೇವೆ. ಕರ್ನಾಟಕ ರಾಜ್ಯದ ರೈತರ ಹಿತ ದೃಷ್ಟಿಯಿಂದ ಈ ಒಂದು ತೀರ್ಮಾನವನ್ನು ಕೂಡ ನಾವು ಸರ್ಕಾರದವರು ಮಾಡಿದ್ದೇವೆ. ಇದ್ದ ವಿಚಾರವನ್ನು ನಾನು ಹೇಳುವುದರ ಜೊತೆಯಲ್ಲಿ ಮತ್ತೊಂದು ಪ್ರಕಟಣೆಯನ್ನು ಈ ಸಂದರ್ಭದಲ್ಲಿ ಮಾಡಬೇಕು. ಅನೇಕ ಜನ ಮಾನ್ಯ ಸದಸ್ಯರು ಡಿಮ್ಯಾಂಡ್ ಮೇಲೆ ಮಾತನಾಡಬೇಕಾದರೆ ಮತ್ತು ಈಗ ಮಾತನಾಡಬೇಕಾದರೆ, allocation of funds ನಾವು ಏನು ಬಜೆಟ್‌ನಲ್ಲಿ ಹೇಳಿದ್ದೇವೆ, ಕೆಲವು ಸಾಕಾಗುವುದಿಲ್ಲ. ಇನ್ನೂ ಜಾಸ್ತಿ ಮಾಡಬೇಕು ಎನ್ನತಕ್ಕಂಥ ಭಾಷಣವನ್ನು ಕೂಡ ತಾವೆಲ್ಲಾ ಮಾಡಿದ್ದೀರಿ. ಇದರಲ್ಲಿ Karnataka State Backward Classes Development Corporation ಇದೆ. ಈಗ ಮೈನಾರಿಟೀಸ್‌ಗೆ ಕಡಿಮೆ ಇಟ್ಟಿದ್ದನ್ನು ಸುಮಾರು 2 ಕ್ರೋರ್ಸ್ ನಾವು ಜಾಸ್ತಿ ಮಾಡಿದ್ದೇವೆ. ಶೆಡ್ಯೂಲ್ ಕ್ಯಾಸ್ಟ್, ಶೆಡ್ಯೂಲ್ ಟ್ರೈಬ್ಸ್ ಅದರಲ್ಲೂ ಸಹ ಕನ್ಸಿಡರಬಲ್ ಆಗಿ ಜಾಸ್ತಿ ಮಾಡಿದ್ದೇವೆ. ಆದರೆ, ಬ್ಯಾಕ್‌ವರ್ಡ್ ಕ್ಲಾಸ್ ಬಗ್ಗೆ ನೀವು ಕಡಿಮೆ ಮಾಡಿ ಬಿಟ್ಟಿದ್ದೀರಿ ಎಂದು ನೀವು ಹೇಳಿದ್ದೀರಿ. ನಾವು ಬಹಳ ಕಡಿಮೆಯೇ ಮಾಡಿದ್ದೇವೆ. ಏಕೆಂದರೆ 1991-92 ರಲ್ಲಿ 80 ಲಕ್ಷ, 1992-93ರಲ್ಲಿ ಬರೀ 85 ಲಕ್ಷ ಇಟ್ಟಿದ್ದೀರಿ, ಬರೀ 5 ಲಕ್ಷ ಜಾಸ್ತಿ ಮಾಡಿದರೆ ಎಷ್ಟು ಜನ ಬೆನಿಫಿಷಿಯರ್ಸ್‌ಗೆ ಉಪಯೋಗವಾಗುತ್ತದೆ. ಎನ್ನತಕ್ಕಂಥ ಮಾತನ್ನು ತಾವೆಲ್ಲಾ ಹೇಳಿದ ಮೇಲೆ,

ಅರ್ಲಿಯರ್ ಪ್ರಪೋಸಲ್ 1 ಕೋಟಿ ಇತ್ತು. ಟೋಟಲ್ ಪ್ರೋಗ್ರಾಮ್ ಔಟ್‌ಲೇ 5 ಕೋಟಿ ಎಂದು ಇತ್ತು. ಈಗ ಅದಕ್ಕೆ ನಾವು 1992-93 from next yearಗೆ ನಾವು ಅದನ್ನು 5 ಕೋಟಿ ರೂಪಾಯಿಯನ್ನು, now proposed 5 crores 1 ರಿಂದ 5 ಕೋಟಿ ರೂಪಾಯಿಗಳಿಗೆ ನಾವು ಏರಿಸುತ್ತಿದ್ದೇವೆ. ಅಂದರೆ ಟೋಟಲ್ ಪ್ರೋಗ್ರಾಮ್ ಔಟ್‌ಲೇ ಎಷ್ಟಾಗುತ್ತದೆಂದರೆ 25 ಕೋಟಿ ರೂಪಾಯಿಗಳಾಗುತ್ತದೆ. ಇಷ್ಟನ್ನು ನಾವು ಬ್ಯಾಕ್‌ವರ್ಡ್ ಕ್ಲಾಸ್ ಕಾರ್ಪೊರೇಷನ್‌ಗೆ ನಾವು ಕೊಡುತ್ತಿದ್ದೇವೆ. ಅಂದರೆ ಬೆನಿಫಿಷಿಯರ್ಸ್‌ನ್ನು ಜಾಸ್ತಿ ಕವರ್ ಮಾಡಬಹುದು. ಅದೇ ರೀತಿಯಾಗಿ ಮೈನಾರಿಟೀಸ್ ಕಾರ್ಪೊರೇಷನ್, ಎಸ್.ಸಿ, ಎಸ್.ಟಿ ಕಾರ್ಪೊರೇಷನ್, ಅಂಡ್ ವುಮೆನ್ಸ್ ಕಾರ್ಪೊರೇಷನ್ಸ್ ಅವಕ್ಕೂ ಕೂಡ ಜಾಸ್ತಿ ಕೊಟ್ಟಿದ್ದೇವೆ. ಆದರೆ ಇದು ಒಂದು ಮಾತ್ರ ಕೈ ಬಿಟ್ಟು ಹೋಗಿತ್ತು. ಈಗ ಬ್ಯಾಕ್‌ವರ್ಡ್ ಕ್ಲಾಸ್ ಕಾರ್ಪೊರೇಷನ್‌ಗೂ ಕೂಡ ನಾವು ಜಾಸ್ತಿ ಮಾಡಿದ್ದೇವೆ. ಆಮೇಲೆ ಶ್ರಮಕಲ್ಯಾಣ ನಿಧಿ, senior Member Sri Kagodu Thimmappa told me about the unorganised sector ಅವರು ಒಂದು ಸಾರಿ ಕುಳಿತುಕೊಂಡು ಮಾತನಾಡುವಾಗ ಹೇಳಿದರು, ಅನೇಕ ಜನ ಶಾಸಕರು ಒಂದು 15-20 ಜನ ಕುಳಿತುಕೊಂಡಿದ್ದೆವು. ಆಗ ಅವರು ಒಂದು ಮಾತು ಹೇಳಿದರು. ಇದುUnorganised Sector. ಕೂಲಿ ಮಾಡತಕ್ಕಂಥ ಕೃಷಿಕ ವರ್ಗ, ಸಮಾಜದ ತುಳಿತಕ್ಕೆ ಸಿಕ್ಕಿರತಕ್ಕಂಥ ವರ್ಗ. ನೀವು 5 ಕೋಟಿ ರೂಪಾಯಿ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ. 5 ಕೋಟಿ ರೂಪಾಯಿ ಒಂದು ಮೂಲೆಗೆ ಆಗುವುದಿಲ್ಲ, ನೀವು ಬೇರೆ ವರ್ಗದವರಿಗೆ ಯಾವ ರೀತಿ ಕೊಡುತ್ತೀರೋ ಅದೇ ರೀತಿ ಇದಕ್ಕೂ ತತ್ಸಮನಾಗಿ ಸ್ವಲ್ಪ ಜಾಸ್ತಿ ಕೊಡುವುದು ಒಳ್ಳೆಯದು ಎನ್ನತಕ್ಕಂಥ ಮಾತನ್ನು ಅವರು ಹೇಳಿದರು. Therefore, in my budget speech I proposed to constitute Karnataka "Shrama Kalyana Nidhi" ಶ್ರಮ ಜೀವಿಗಳು, ದುಡಿದು ತಿನ್ನತಕ್ಕಂಥ ವರ್ಗಗಳು. With an initial Government contribution of 5 crores during 1992-93. ಅಂದರೆ ಮುಂದಿನ ವರ್ಷಕ್ಕೆ ನಾವು ಹೇಳಿದ್ದೇವೆ. The Corpus of this fund will be increased by another 10 crores through imposition of Agricultural Labour Welfare Cess on the agricultural prduce purchased in APMCs and Sugar Factories. ಅದು 10ಕೋಟಿ ಅಲ್ಲಿಗೆ ಟೋಟಲ್ 5 ಕೋಟಿಯಿಂದ 15 ಕೋಟಿ ರೂಪಾಯಿಗಳಿಗೆ ತೆಗೆದುಕೊಂಡು ಹೋಗಿದ್ದೇವೆ. ಈ ಶ್ರಮ ಕಲ್ಯಾಣ ನಿಧಿ ಮಾಡಿದ್ದೇವೆ. ಅದೇ ರೀತಿ ನಾವು ಆರಾಧನಾ ಯೋಜನೆ ಎಂದು ಏನು ಮಾಡಿದ್ದೇವೆ ಅದಕ್ಕೆ 5 ಕೋಟಿ ರೂಪಾಯಿಗಳನ್ನು ಇಟ್ಟು ತಾಲೂಕುಲೆವೆಲ್‌ಗೆ ಹಣವನ್ನೂ ಕಳುಹಿಸಿಕೊಟ್ಟಿದ್ದೇವೆ. ಮುಂದಿನವರ್ಷ ಕೂಡ 5 ಕೋಟಿ ನಾವು ಇಟ್ಟಿದ್ದೇವೆ. ಆದರೆ ಅಲ್ಲಿ ಏನಾಗಿದೆ ಎಂದರೆ ಮಾಸ್ಕ್ಸ್, ಚರ್ಚಸ್ ಮತ್ತು ಬೇರೆ ಧರ್ಮಗಳಿಗೆ ಸೇರಿದಹಾಗೆ ಅವಕ್ಕೆ ಈ ಸ್ಕೀಮಿನಲ್ಲಿ ತೆಗೆದುಕೊಂಡರೆ ಕ್ಲಾಸ್ ಆಗುತ್ತಿದೆ, ಅಂದರೆ ಹಣವನ್ನು ಡೈವರ್ಟ್ ಮಾಡುವುದಕ್ಕೆ ಕಷ್ಟವಾಗುತ್ತದೆ. ಎಂಬ ಅಭಿಪ್ರಾಯ ಬಂತು. ಅದಕ್ಕಾಗಿ ನಾವು ಈಗ ಪ್ರತ್ಯೇಕವಾಗಿ Renovation of Mosques and Churches on lines similar to the Aradhana Programme shall be taken up. Rs.50 lakhs is being earmarked for renovation and repairs of the mosques and this amount shall be routed through the Wakf Development Council. ಬೋರ್ಡ್‌ಲ್ಲ ಅಭಿವೃದ್ಧಿ ಕೌನ್ಸಿಲ್ ಮೂಲಕ Similarly Rs. 50 lakhs for repairs and renovation of churches shall be routed through the various Christian Dioceses.

ಅಂದರೆ 50 ಲಕ್ಷ ಮೈನಾರಿಟೀಸ್‌ಗೆ ಮತ್ತು ಚರ್ಚೆಗಳಿಗೆ ಕೂಡ 50 ಲಕ್ಷ, ಒಟ್ಟು 1ಕೋಟಿ ರೂಪಾಯಿಗಳನ್ನು ನಾವು ಬೇರೆಯಾಗಿ ತೆಗೆದಿಟ್ಟಿದ್ದೇವೆ.

ಶ್ರೀ ಎಲ್.ಆರ್.ಶಿವರಾಮೇಗೌಡ:- ಎಸ್‌ಸಿಎಸ್‌ಟಿ ಕಾಲೋನಿಗಳಿಗೆ ಮಾತ್ರ ಎಂದು ಆರಾಧನಾ ಯೋಜನೆಯಲ್ಲಿ ಹೇಳಲಾಗಿದೆ. ಬಡವರಿರುವ ಎಲ್ಲ ಕಾಲೋನಿಗಳಿಗೂ ಕೊಡುವ ವ್ಯವಸ್ಥೆ ಮಾಡಬೇಕು. ಆರಾಧನಾದಲ್ಲಿ ಎಸ್.ಸಿ., ಎಸ್.ಟಿಗಳಿಗೆ ಮಾತ್ರ ದೇವಸ್ಥಾನ ಕಟ್ಟಿಸಿಕೊಡುತ್ತೇವೆ ಎಂದು ಹೇಳಿದ್ದೀರಿ, ನಾವೂ ಚರ್ಚೆಯಲ್ಲಿ ಭಾಗವಹಿಸಿದ್ದಾಗ ಹೇಳಿದ್ದೇವೆ. ಬರೀ ಎಸ್.ಸಿ.ಎಸ್.ಟಿ ಬೇಡಿ,. ಬಡವರ ಕಾಲೋನಿಗಳು ಎಲ್ಲಿವೆಯೋ ಅಲ್ಲಿಗೂ ಕೊಡಿ ಎಂದು ಹೇಳುತ್ತಿದ್ದೇನೆ.

Sri.S.BANGARAPPA:- Mostly in SC/ST colonies. ಬೇರೆಯವರೂ ಕೂಡ ತೆಗೆದುಕೊಳ್ಳಬಹುದು.

ಶ್ರೀ ಎಂ.ವಿ.ವೆಂಕಟಪ್ಪ:-ತಾಲ್ಲೂಕುಗಳಲ್ಲಿ ತಹಸೀಲ್ದಾರ್ ಆ ರೀತಿ ಹೇಳುತ್ತಾ ಇಲ್ಲ. ಎಲ್ಲ ದೇವಸ್ಥಾನಗಳಿಗೂ ಕೊಡುವುದಕ್ಕೆ ಏರ್ಪಾಡು ಮಾಡಿ.

ಶ್ರೀ ಎಸ್.ಬಂಗಾರಪ್ಪ:- ಒಂದು ಕೆಲಸ ಮಾಡೋಣ, 1991-92ರ ಮಾರ್ಚಿಯೊಳಗೆ ಎಸ್.ಸಿ. ಎಸ್,ಟಿ ಯವರದನ್ನು ತೆಗೆದುಕೊಳ್ಳಲಿ, ಮುಂದಿನ ತಿಂಗಳಿಂದ 5 ಕೋಟಿ ಇಟ್ಟಿದ್ದೇವಲ್ಲ, ಎಲ್ಲವನ್ನೂ ಕವರ್ ಮಾಡುವುದಕ್ಕೆ ಮತ್ತೊಂದು ಕಳಿಸಿಬಿಡೋಣ ಬಿಡಿ. ಅದೇನೂ ಆಗೋದಿಲ್ಲ. ನಾವು ಮಾಡೋಣ ಆಗ SC/ ST and other classes ಎಂದು ಸೇರಿಸೋಣ. ಅದರಲ್ಲಿ ಕಡಿಮೆ ಬಿದ್ದರೆ ಮತ್ತೊಂದಷ್ಟು ಕೊಡುವ ವಿಚಾರ ಮಾಡೋಣ. I have received representation from Trade Association and Sections of people regarding taxation proposals for 1992-93, ಟ್ಯಾಕ್ಸೇಶನ್ ಪ್ರಪೋಸಲ್ಸ್ ಬಗ್ಗೆ ಅನೇಕ ಜನ ಮಾತಾಡಿದ್ದಾರೆ. I have considered the representations and propose the following reductions and exemptions,. ಕೆಲವು ಟ್ಯಾಕ್ಸ್‌ಗಳಿಗೂ ಕೂಡ ನಾನು ಮಾಡುತ್ತಾ ಇದ್ದೇನೆ. Tax on Jaggery ಅಂದರೆ ಬೆಲ್ಲ, will be reduced from 3% to 2.5% as it is a poor man's sugar. The revenue loss on this account is about 70 lakhs. ಅವರು ಕೇಳಿದ್ದೂ ಅಷ್ಟೇ, ನಾವು ಕೊಟ್ಟಿದ್ದೂ ಅಷ್ಟೆ. ಎರಡನೆಯದು, The proposed tax of 3% on Aluminium utensisl will be reduced to 2" as they mostly used by the poor section of the soceity ಅದು ಇರುವುದೇ ಅಷ್ಟು ನಾವೂ ಅಷ್ಟಕ್ಕೇ ನಿಲ್ಲಿಸಿದ್ದೇವೆ. The revenue loss on this account would be about 30 lakhs. Then, the proposed increase of tax on Bicylces and its parts, accessories including tyres and tubes is dropped. The revenue loss on this account is about 100 lakhs. . . .ಬಡವರಿಗೆ ಟೈರ್ ಟ್ಯೂಬ್ಸ್ ಆದಿಯಾಗಿ ಉಪಯೋಗವಾಗುತ್ತದೆ ಬೈಸಿಕಲ್ ಬಡವರ ವಾಹನ ಎಂಬ ದೃಷ್ಟಿಯಿಂದ ಅದನ್ನು ತೆಗೆದುಹಾಕಿದ್ದೇವೆ. Tax on bamboo sticks used in agarbathy industry ಬಿದಿರಿನ ಗಳ ಅಂದರೆ ಊದುಬತ್ತಿ ಮಾಡುವವರು ಉಪಯೋಗಿಸುವ ಕಡ್ಡಿ, ಅದರ ಕಾಸ್ಟ್ ಜಾಸ್ತಿಯಾಗುತ್ತದೆ, ನಮಗೆ ಅನ್ಯಾಯವಾಗುತ್ತದೆ ಎಂದು ಹೇಳಿದರು. Tax on bamboo sticks used inagarbathy industry will be reduced from the proposed rate of 10% to 4%. The revenue loss on this account is about Rs.15 lakhs... ಆಮೇಲೆ ನಾವು ಬಜೆಟ್‌ನಲ್ಲಿ ನೇತ್ರ ಯೋಜನೆ ಎಂದು ಮಾಡಿ ಬಡವರಿಗೆ ಕಣ್ಣು ಟೆಸ್ಟ್ ಮಾಡಿ ಕನ್ನಡಕ ಕೊಡಬೇಕು ಎಂದು ಹೇಳಿದ್ದೇವೆ. ಅದಕ್ಕೆ ಅನುಗುಣವಾಗಿ ಈ ಕಾರ್ಯಕ್ರಮ ಇದೆ. Tax on Speticles, sun glasses, goggles, lenses and frames (other than those imported from outside the country)

will be exempted. The revenue loss on this account is about Rs.50 lakhs. .ಏಕೆಂದರೆ ಡಾ.ಮೋದಿಯವರೇ ಟೆಸ್ಟ್ ಮಾಡುತ್ತಾರೆ, ಬೇರೆ ಜನ ಇರಬಹುದು, ಅದು ಬಡವರಿಗೆ ಉಪಯೋಗವಾಗಲಿ ಎನ್ನತಕ್ಕ ದೃಷ್ಟಿಯಿಂದ ಅದರ ಟ್ಯಾಕ್ಸ್‌ನ್ನು ನಾವು ತೆಗೆದುಹಾಕಿದ್ದೇವೆ. ಇಂಪೋರ್ಟೆಡ್ ಐಟಂ ಬಿಟ್ಟು ಮಾಡಿದ್ದೇವೆ. ಏಕೆಂದರೆ ಇಂಪೋರ್ಟೆಡ್ ಐಟಂ ಅನ್ನು ನಮ್ಮ ಬಡ ಜನ ಯಾರೂ ಉಪಯೋಗ ಮಾಡುವುದಿಲ್ಲ. ಆರನೆಯದು Tax on Gold and silver articles and jewellery will be reduced to 2% to prevent diversion of trade. ಕೇಂದ್ರ ಸರ್ಕಾರದವರು ಗೋಲ್ಡ್ ವಿಚಾರದಲ್ಲಿ ಅನೇಕ ಕನ್ಸೆಷನ್ ಮಾಡಿದ್ದಾರೆ. ತತ್ಸಮಾನವಾಗಿ ನಾವೂ ಕೂಡ ಮಾಡಿದ್ದೇವೆ. ಏಳನೆಯದು, proposed tax on plastic house hold articles manufactured wholly out of plastic scrap will be limited. ಈ ಪ್ಲಾಸ್ಟಿಕ್ ಸಾಮಾನುಗಳನ್ನು ಯೂಸ್ ಮಾಡಿ ಬಿಸಾಕುತ್ತಾರೆ ಅದನ್ನು ಪಿಕ್ ಮಾಡವವರೇ ಸಾವಿರಾರು, ಮತ್ತೆ ಅದನ್ನು ಕರಗಿಸಿ ರಿಸೈಕಲ್ ಮಾಡುತ್ತಾರೆ. Tax will be limited to articles costing Rs. 30 and above per peice (Revenue loss will be about Rs.15 lakhs) ಏಕೆಂದರೆ , ಕೊಡ, ಬೊಂಬು ಇವೆಲ್ಲ 30 ರೂಪಾಯಿಗಳ ಒಳಗೆ ಬರುತ್ತದೆ. ಅದರ ಮೇಲಿರುವುದಕ್ಕೆ ಟ್ಯಾಕ್ಸ್ ಬೀಳುತ್ತದೆ. ಉಳಿದಿದ್ದಕ್ಕೆ ಬೀಳುವುದಿಲ್ಲ ಮೋಸ್ಟಿಲ್ಲ ಇವೆಲ್ಲ ಎಕ್ಸಂಪಷನ್ ಕೆಟಗರಿಗೆ ಬಂದುಬಿಡುತ್ತದೆ. ಆಮೇಲೆ The porposed exemption of purchase tax on sugar cane meant for export outside State will be effective from 3.3.1992 from the date of Budget announcement. .ಬಜೆಟ್‌ನಲ್ಲಿ ನಾವು ಹೇಳಿಬಿಟ್ಟಿದ್ದೇವೆ. ಅದು ಪಾಸಾಗದೇನೆ ಜಾರಿಗೆ ಬರುವಹಾಗಿಲ್ಲ. ಅದಕ್ಕಾಗಿ ಕಲೆಕ್ಟ್ ಮಾಡಬಾರದೆಂದು ನಾವು ಇನ್‌ಸ್ಟ್ರಕ್ಷನ್ ಕೊಟ್ಟೆವು. ಇಲ್ಲಿದಿದ್ದರೆ ನಾವು ಇವತ್ತು ಬಜೆಟ್ ಪಾಸ್ ಮಾಡಿ ವಿನಾಯ್ತಿ ಕೊಟ್ಟರೆ ಅಪ್ರೊಪ್ರಿಯೇಷನ್ ಬಿಲ್ 1ನೇ ತಾರೀಖಿನಿಲೋ ನ ನಿಂದಲೋ ಜಾರಿಗೆ ಬರಬೇಕಾಯ್ತು. ಆದರೆ ಮಾರ್ಚಿ 3ನೇ ತಾರೀಖು ನಾವೇನು ಬಜೆಟ್ ಇಟ್ಟೆವು. ಅವತ್ತಿನಿಂದಲೇ ಜಾರಿಗೆ ಕೊಡಬೇಕೆಂದು ಮಾಡಿದೆವು. ಅದು ಮಂಡ್ಯ, ಮೈಸೂರು, ಬೆಳಗಾಂ ಜಿಲ್ಲೆ ಔಟ್ ಆಫ್ ಸ್ಟೇಟ್ ಹೋಗುವ ಕಡೆ ಪರ್ಚೇಸ್ ಟ್ಯಾಕ್ಸ್ ಯಾರ್‍ಯಾರು ಹಣ ಕಟ್ಟಿದ್ದರೂ ಅದನ್ನು ನಾವು ಹಿಂದಕ್ಕೆ ಕೊಡುತ್ತೇವೆ. I have received some representations from distilleries, wine Merchants Associations and Arrack Contractors regarding the increase in licence fee and excise duty, propose to examine these representations keping in view the interests of State Revenue. ಈ ವಿಚಾರದಲ್ಲಿ ನಾನು ಕಮಿಟಾಗಿಲ್ಲ. ಅವರು ಎಷ್ಟೇ ಹೇಳಿದರೂ ಕೂಡ ಮುಂದೆ ನೋಡೋಣ ಎಂದು ಹೇಳಿದ್ದೇನೆ. ನಮ್ಮ ರೆವಿನ್ಯುಗೆ ಎಫೆಕ್ಟ್ ಆಗಬಾರದು, ನಮಗೆ ಇನ್‌ಕಂ ಬರದಿದ್ದರೆ ಬಡವರ ಹಲವಾರು ಯೋಜನೆಗಳಿಗೆ ಹಣ ತರಲು ನಮ್ಮಿಂದ ಆಗುವುದಿಲ್ಲ, I will examine ಎಂದು ಹೇಳಿದ್ದೇನೆಯೇ ವಿನ ತಕ್ಷಣ ಕನ್‌ಸೆಷನ್ ಕೊಡಲು ನಾನು ಹೋಗಿಲ್ಲ. ಇಷ್ಟು ವಿಚಾರಗಳನ್ನು ಈ ಸಂದರ್ಭದಲ್ಲಿ ತಿಳಿಸುತ್ತಾ, ಇನ್ನು ಉಳಿದಿರತಕ್ಕ......

ಶ್ರೀ ಎಲ್.,ಆರ್.ಶಿವರಾಮೇಗೌಡ:- ಅಂಬ್ರೆಲ ಮೇಲೆ 3 ಪರ್ಸೆಂಟ್ ತೆರಿಗೆ ಹಾಕಿದ್ದೀರಿ. ಬಡವರು ಉಪಯೋಗಿಸತಕ್ಕ ಅಂಬ್ರೆಲಾ ಮೇಲೆ ಹಾಕಿರುವ ತೆರಿಗೆಯನ್ನು ದಯವಿಟ್ಟು ತೆಗೆಯಬೇಕು.

ಶ್ರೀ ಕೆ.ಹೆಚ್.ಹನುಮೇಗೌಡ:- ಖಂಡಸಾರಿ ಶುಗರ್ ಮೇಲೆ 4 ಪರ್ಸೆಂಟ್ ಲೆವಿ ಹಾಕಿದ್ದೀರಿ, ಅಕ್ಕಪಕ್ಕದ ರಾಜ್ಯಗಳಲ್ಲಿ ಖಂಡಸಾರಿ ಶುಗರ್ ಮೇಲೆ ಲೆವಿ ಹಾಕಿಲ್ಲ. ಆದರಿಂದ ಇಲ್ಲಿ ರೇಟ್ ಜಾಸ್ತಿ ಆಗುತ್ತದೆ. ಹೊರಗಡೆ ಹೋಗುವ ಸಕ್ಕರೆ ಪ್ರಮಾಣ ಕಡಿಮೆಯಾಗುತ್ತಿದೆ ಎಂದು ಕೆಲವರು ಮಾತನಾಡಿಕೊಳ್ಳುತ್ತಿದ್ದರು.

ಅದರ ಬಗ್ಗೆ ತಮ್ಮ ತೀರ್ಮಾನ ಏನು ಸ್ವಾಮಿ ?

ಶ್ರೀ ಬಿ.ಎಸ್.ಯಡಿಯೂರಪ್ಪ:- ಸಾಮಾನ್ಯ ಜನರು ಉಪಯೋಗಿಸುವ ಮೆಡಿಸಿನ್ ಮೇಲೆ ಇಡೀ ದೇಶದಲ್ಲಿ ಎಲ್ಲೂ ಇಲ್ಲದಷ್ಟು ಟ್ಯಾಕ್ಸ್ ಜಾಸ್ತಿಯಾಗಿದೆ. ಇದರಿಂದ ಸಾಮಾನ್ಯ ಜನಕ್ಕೆ ತೊಂದರೆಯಾಗುತ್ತದೆ. ಅದಕ್ಕೇ ಈಗ ಹಾಕಿರುವ ತೆರಿಗೆಯನ್ನು ವಾಪಸ್ ತೆಗೆದುಕೊಳ್ಳುವುದು ಒಳ್ಳೆಯದು.

ಶ್ರೀ ಹೆಚ್.ಎಂ.ರೇವಣ್ಣ:- ರೇಷ್ಮೆ ಟ್ವಿಸ್ಟರ್ಸ್ ಬಂದು ತಮ್ಮನ್ನು ಕೇಳಿದರು, 2 ಪರ್ಸೆಂಟ್ ಟ್ಯಾಕ್ಸ್ ಹಾಕಿರುವುದು ನಮಗೆ ಬಹಳ ತೊಂದರೆಯಾಗುತ್ತಿದೆ. ಆದ್ದರಿಂದ ಅದನ್ನು ತೆಗೆಯಬೇಕೆಂದು ಹೇಳಿದರು.

ಶ್ರೀ ಎಸ್.ಬಂಗಾರಪ್ಪ:- ಕಾಯರ್ ಪ್ರಾಡಕ್ಟ್ಸ್, ಅಂಬ್ರೆಲಾ, ರೇಷ್ಮೆ ಹುರಿ ಮತ್ತು ಖಂಡಸಾರಿ ಸಕ್ಕರೆ ಇತ್ಯಾದಿ ನಾವು ಬೇರೆ ರಾಜ್ಯಗಳದೂ ಕಂಪೇರ್ ಮಾಡುತ್ತಿದ್ದೇವೆ. ಇನ್ನೂ ಕೆಲವು ವಿಚಾರ ಬೇಕಾಗಿದೆ. ಈಗ ಯಾವ ಮಾಹಿತಿ ರೆಡಿಯಾಗಿದೆ ಅದಕ್ಕೆ ನಾವು ವಿಚಾರ ಮಾಡಿದ್ದೇವೆ. ಇನ್ನು ಕೆಲವಕ್ಕೆ ಅಭ್ಯಾಸ ಮಾಡಿ ಮಾಡಬೇಕು. ಏಕೆಂದರೆ ಕೆಲವಕ್ಕೆ ಎಕ್ಸೆಂಪ್‌ಶನ್ ಕೊಡುವುದರಿಂದ ಸೇಲ್ಸ್ ಜಾಸ್ತಿಯಾಗಿ ಅದರಿಂದ ನಮಗೆ ಇನ್‌ಕಂ ಕೂಡ ಬರುತ್ತದೆ. ಕೆಲವನ್ನು ಜಾಸ್ತಿ ಮಾಡಿದರೂ ಉಪಯೋಗ ಆಗುವುದಿಲ್ಲ. ಅದು ಬೇರೆ ರಾಜ್ಯಗಳಿಗೂ ಹೋಗಲು ಅನುಕೂಲ ವಾಗಿಬಿಡುತ್ತದೆ. ನಮ್ಮ ರೆವಿನ್ಯೂಸ್ ಹೋಗಿಬಿಡುತ್ತದೆ. ಇವನ್ನೆಲ್ಲ ನಾವು ವಿಚಾರ ಮಾಡಿ ನೋಡೋಣ. ಅಂಬ್ರೆಲಾ ಬಗ್ಗೆ ತಿಪಟೂರಿನವರು ಬಂದು ನನ್ನನ್ನು ಕಂಡು ಹೇಳಿದ್ದಾರೆ, ತಾವೂ ಹೇಳಿದ್ದೀರಿ. All the matters have been examined. ಮತ್ತು ಮೆಡಿಸಿನ್ ಬಗ್ಗೆ ಕೂಡ ತಾವು ಹೇಳಿದ್ದೀರಿ. ಇದನ್ನೆಲ್ಲಾ ಕೂಡಾ ಗಮನದಲ್ಲಿಟ್ಟುಕೊಂಡು ಮುಂದೆ ನಾವು ಸಾಧುವಾಗಿರತಕ್ಕಂಥ ತೀರ್ಮಾನವನ್ನು ಮಾಡುತ್ತೇವೆ. ಇಷ್ಟು ಮಾತ್ರ ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಎಂ.ವಿ.ವೆಂಕಟಪ್ಪ:-ಮಾನ್ಯ ಅಧ್ಯಕ್ಷಿಣಿಯವರೇ, ಸುಮಾರು ನೂರು ವರ್ಷಗಳಿಂದ ಅಲ್ಲದೇ ಇರತಕ್ಕಂಥ ಅತಿವೃಷ್ಟಿ ಈ ಐದು ಜಿಲ್ಲೆಗಳಲ್ಲಿ ಆಗಿದೆ. ಅತಿವೃಷ್ಟಿ ನೂರು ವರ್ಷಗಳಲ್ಲಿ ಈ ಐದು ಜಿಲ್ಲೆಗಳಲ್ಲಿ ಯಾವತ್ತೂ ಇರಲಿಲ್ಲ. ತಾವೇ ಒಂದು ಸಲ ಕಮಿಟ್ ಮಾಡಿಕೊಂಡಿದ್ದೀರಿ. ಈ ಐದು ಜಿಲ್ಲೆಗಳಲ್ಲಿ ಅತಿವೃಷ್ಟಿಯಿಂದ ಸುಮಾರು 65 ಕೋಟಿ ರೂಪಾಯಿ ಲಾಸ್ ಆಗಿದೆ. ಅಲ್ಲಿ ಕಮ್ಯುನಿಕೇಷನ್ ಕಟ್ ಆಗಿದೆ. ಅಲ್ಲಿ ತಾವು ಒಂದು ಸಲ ಹೇಳಿದ್ದಿರಿ. ಆದಷ್ಟು ಬೇಗ ನಾವು ಅಮೌಂಟನ್ನು ರಿಲೀಸ್ ಮಾಡುತ್ತೇವೆ ಎಂದು ಹೇಳಿದ್ದೀರಿ. ಐದು ಕೋಟಿ ರೂಪಾಯಿ ರೋಡ್ಸ್‌ಗೆ , ಐದು ಕೋಟಿ ರೂಪಾಯಿ ಮೈನರ್ ಇರಿಗೇಷನ್‌ಗೆ. ಈ ಐದು ಜಿಲ್ಲೆಗಳಲ್ಲಿ ಅತಿವೃಷ್ಟಿಯಿಂದ ಅರವತ್ತೈದು ಕೋಟಿ ರೂಪಾಯಿಗಳಿಗಿಂತ ಜಾಸ್ತಿ ನಷ್ಟವಾಗಿದೆ. ಒಂದೊಂದು ಜಿಲ್ಲೆಯಲ್ಲೇ 65ಕೋಟಿ ರೂಪಾಯಿ ಲಾಸ್ ಆಗಿದೆ. ಒಟ್ಟು 200 ಕೋಟಿ ರೂಪಾಯಿ ಲಾಸ್ ಆಗಿದೆ. ಅದಕ್ಕೋಸ್ಕರ ಮೈನರ್ ಇರಿಗೇಷನ್ ಪ್ಲಸ್ ರೋಡ್ಸ್‌ಗೆ ಐದು ಕೋಟಿ-ಐದು ಕೋಟಿ ರೂಪಾಯಿಗಳನ್ನು ಇನ್ನು ಎಫ್.ಡಿ.ಯವರು ರಿಲೀಸ್ ಮಾಡಿಲ್ಲ. ಅದನ್ನು 4-5ದಿವಸಗಳಲ್ಲಿ ಮಾಡದಿದ್ದರೆ ತೊಂದರೆಯಾಗುತ್ತದೆ ದೇವರು.

ಶ್ರೀ ಎಸ್.ಬಂಗಾರಪ್ಪ:-ತಾವು ಹೇಳಿದ್ದಾರಿ. ಅದೆಲ್ಲಾ ಗಮನದಲ್ಲಿಟ್ಟುಕೊಂಡು ಮುಂದಿನ ತೀರ್ಮಾನವನ್ನು ನಾವು ಮಾಡೋಣ. ಇಷ್ಟು ವಿಚಾರ ಹೇಳಿದ ಮೇಲೆ ಇನ್ನೂ ಅನೇಕ ಮಾನ್ಯ ಸದಸ್ಯರು ಮಾತನಾಡಿ ಹಲವಾರು ವಿಚಾರಗಳನ್ನು, ಸಲಹೆಗಳನ್ನು ತಾವು ಹೇಳಿದ್ದೀರಿ. ಅವುಗಳನ್ನು ಗಮನದಲ್ಲಿಟ್ಟು....

ಶ್ರೀ ಡಿ.ಹಲಗೇಗೌಡ:- ರಾಜ್ಯದ ಹಣಕಾಸು ಸಂಪನ್ಮೂಲ ಮತ್ತು ಕ್ರೂಢೀಕರಣ ವಿಷಯದಲ್ಲಿ ತಾವು ಆಶಾಭಾವನೆಯನ್ನು ವ್ಯಕ್ತಪಡಿಸಿ, ಬಹಳ ಆರೋಗ್ಯಕರವಾಗಿದೆ, ಚೆನ್ನಾಗಿದೆ ಎನ್ನತಕ್ಕಂಥ ಮಾತನ್ನು ಹೇಳಿದಿರಿ. ಈ ಹಿನ್ನೆಲೆಯಲ್ಲಿ ಡಾ. ಬಾಬಾಸಾಹೇಬ್ ಅಂಬೇಡ್ಕರ್‌ರವರ ಈ ಜನ್ಮ ಶತಾಬ್ದಿಯಲ್ಲಾದರೂ ಕೂಡ ಈ ಸಮಾಜ ಕಲ್ಯಾಣಕ್ಕಾಗಿ ಅಥವಾ ಈ ಸಂಸ್ಕೃತಿಯ ಉಳಿವಿಗಾಗಿ ಈ ಪಾನನಿರೋಧವನ್ನು ರಾಜ್ಯದಲ್ಲಿ ಪೂರ್ಣ ಜಾರಿಗೆ ತರುತ್ತೀರಾ? ಹಾಗೆಯೇ ಈ ರಾಷ್ಟ್ರಪಿತ ಗಾಂಧೀಜಿಯವರ ನೆನಪಿಗೋಸ್ಕರವಾಗಿಯಾದರೂ ಕೂಡ ಅವರ

ಮಾರ್ಗವನ್ನು ಅನುಸರಿಸಿ ನಡೆಯತಕ್ಕಂಥ ಕೆಲವು ಕಾರ್ಯಕ್ರಮಗಳನ್ನು ಸಮಾಜದಲ್ಲಿ ಅಳವಡಿಸಿಕೊಳ್ಳಲು ತಾವು ಏನಾದರೂ ವಿಶೇಷ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೀರಾ ?

ಶ್ರೀ ಎಸ್.ಬಂಗಾರಪ್ಪ:- ನಾನು ಬಾಬಾ ಸಾಹೇಬ್ ಅಂಬೇಡ್ಕರ್‌ರವರ ವಿಚಾರದಲ್ಲಿ ನಾನು ಈಗಾಗಲೇ ಸಭೆಯನ್ನು ಕೂಡ ಮಾಡಿದ್ದೇನೆ. ಸ್ಟೇಟ್ ಲೆವೆಲ್ ಕಮಿಟಿ ಇದೆ. ಸುಮಾರು 279 ಕೋಟಿ ರೂಪಾಯಿಗಳು ಇರತಕ್ಕಂಥ ಬೃಹತ್ ಯೋಜನೆಯನ್ನು ನಾವು ಹಾಕಿ ಕೊಡಿದ್ದೇವೆ. This money is pooled from various departments including construction of Ambedkar Bhavan. ಮೊದಲು ಸುಮಾರು ನಾಲ್ಕು ಕೋಟಿ ರೂಪಾಯಿಗಳಿತ್ತು. ಈಗ ಆರು-ಆರೂವರೆ ಕೋಟಿ ಹಣವನ್ನು ನಾವು ಮಾಡಿದ್ದೇವೆ. ಬೆಂಗಳೂರಿನಲ್ಲಿ ವರ್ಕ್ ಕೂಡ ಕಮೆನ್ಸ್ ಆಗಿದೆ. ಬೇರೆ ರೀತಿಯಲ್ಲಿಯೂ ಕೂಡ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಮಾಡಿದ್ದೇವೆ. There are so many programmes under that scheme. ಅದನ್ನು ಕೂಡ ನಾವು ಮಾಡುತ್ತಿದ್ದೇವೆ. ಇದರ ಬಗ್ಗೆ ನಿಮಗೆ ಕಳಕಳಿ ಬೇಕಾಗಿಲ್ಲ. ಕಾರ್ಯಕ್ರಮ ಬಹಳ ಬೃಹತ್ ಪ್ರಮಾಣದ್ದು. ಆಮೇಲೆ ಮತ್ತೊಂದು ವಿಚಾರ ಪ್ರಸ್ತಾಪ ಮಾಡಿ ಪಾನನಿರೋಧ ಜಾರಿಗೆ ತರುತ್ತೀರಾ ಎಂದು ಹೇಳುತ್ತಿದ್ದಾರೆ. ಅದನ್ನು ತಂದು ನೋಡಿ ಎಲ್ಲಾ ಆಗಿ, ಹ್ಯೂಜ್ ಟ್ರಾಜೆಡಿಗಳೆಲ್ಲಾ ಆಗಿ ಕಳ್ಳಭಟ್ಟಿ ಎಲ್ಲ ನಡೆದಿದೆ. ಶ್ರೀಮಾನ್ ಜತ್ತಿಯವರ ಕಾಲದಲ್ಲಿ ಪ್ರೊಹಿಬಿಷನ್ ತಂದಂತೆ ನನಗೆ ನೆನಪು. ಶ್ರೀಮಾನ್ ನಿಜಲಿಂಗಪ್ಪನವರ ಕಾಲದಲ್ಲಿ ಮತ್ತೆ ಅದಕ್ಕೆ ಇತಿಶ್ರೀಯನ್ನು ಹಾಡಿಬಿಟ್ಟರು. ಏತಕ್ಕೆ ? ಈ ವಿಚಾರ ನಿನ್ನೆ ಕೂಡ ಆ ಸದನದಲ್ಲಿ ಬಂದಿತು. ಅದು ನಡೆಯುವುದಿಲ್ಲ. ಅದರ ಬದಲು ಪ್ರೊಹಿಬಿಷನ್ ತೆಗೆದುಹಾಕುವುದು ಒಳ್ಳೆಯದು ಎಂದು ಆಗಲೇ ವಿಚಾರ ಮಾಡಿ ಇಷ್ಟು ವರ್ಷಗಳಿಂದ ನಡೆದುಕೊಂಡು ಬಂದಿದೆ. ಈಗ ನಾವು ಮತ್ತೆ ಪ್ರೊಹಿಬಿಷನನ್ನು ಹಾಕಿದರೆ ಮತ್ತೆ ಕಳ್ಳಭಟ್ಟಿ ಚಿರಂಜೀವಿ ಕಳ್ಳಭಟ್ಟಿಯಾಗಿ ಉಳಿದುಬಿಟ್ಟೀತು. ಅದಕ್ಕೋಸ್ಕರ ಬೇರೆಯದನ್ನು ನೋಡಿಕೊಳ್ಳಬೇಕು. ಹ್ಯೂಜ್ ಟ್ರಾಜಿಡಿ ಜಾಸ್ತಿಯಾಗುತ್ತದೆ. ಆದ್ದರಿಂದ ಸರ್ಕಾರ ಪ್ರೊಹಿಬಿಷನ್ ತರತಕ್ಕಂಥ ವಿಚಾರದಲ್ಲಿ ಯಾವುದು ಇಟ್ಟುಕೊಂಡಿಲ್ಲ. There were so many other implications on the negative side. ಇರುವುದರಿಂದ ಆ ವಿಚಾರವನ್ನು ಸರ್ಕಾರದವರು ಇಟ್ಟಿಲ್ಲ.

ಶ್ರೀ ಕೆ.ಹೆಚ್.ಹನುಮೇಗೌಡ:- ಬರೀ ಪೌಡರನ್ನು ಹಾಕಿ ಹೆಂಡವನ್ನು ತಯಾರು ಮಾಡುತ್ತಿದ್ದಾರೆ. ಇದು ಲಕ್ಷಾಂತರ ಜನರ ಜೀವನ್ಮರಣದ ಪ್ರಶ್ನೆಯಾಗಿದೆ. ಅವರನ್ನು ನೋಡಿದರಂತೂ ಗುಂಡಿಯಲ್ಲಿ ಕಿತ್ತುಕೊಂಡು ಬಂದಂಥ ಹೆಣದ ತರಹ ಕಾಣುತ್ತಾರೆ. ದಯಮಾಡಿ ಅವರ ಬಗ್ಗೆ ಕನಿಕರ ಇಟ್ಟುಕೊಂಡು ಉಳಿದದ್ದು ಹೇಗಾದರೂ ಆಗಲಿ. ಕೊನೆಯ ಪಕ್ಷ ಮೊದಲನೆ ಸ್ಟೆಪ್ ಆಗಿ ದಯವಿಟ್ಟು ಆ ಹೆಂಡವನ್ನಾದರೂ ತೆಗೆಯಿರಿ.

ಶ್ರೀ ಎಸ್.ಬಂಗಾರಪ್ಪ:- ತಮಗೆಲ್ಲ ಗೊತ್ತಿರುವ ಹಾಗೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಹೆಂಡ ಮಾರಾಟ ಮಾಡುವುದನ್ನು ನಾವು ಅಬಾಲಿಶ್ ಮಾಡಿದ್ದೇವೆ. ಸೌತ್ ಕೆನರಾದಲ್ಲಿ ನಾವು reintroduce ಮಾಡುವಾಗ ಏನಾಯಿತೆಂದು ತಮಗೆ ಗೊತ್ತಿದೆ. ಫುಡ್ ಆದರೂ ತೆಗೆದುಕೊಳ್ಳುತ್ತಾರೆ, ಎಲ್ಲಾ ಮಾಡತಕ್ಕದ್ದು ಇತ್ಯಾದಿ ವಿಚಾರ ಇದೆ. ಅದಲ್ಲದೆ ಮತ್ತೊಂದು ವಿಚಾರ ಏನೆಂದರೆ, ನಾವು ಬಾರ್ಡರ್ ಏರಿಯಾ bordering ಆಂಧ್ರಪ್ರದೇಶ ಅಲ್ಲಿ ಮಾತ್ರ ಅಂದರೆ ಗುಲ್ಬರ್ಗಾ ಜಿಲ್ಲೆಯ2-3 ತಾಲ್ಲೂಕ್‌ಗಳು, ರಾಯಚೂರು ಮತ್ತು ದೇವದುರ್ಗ ಅಲ್ಲಿಂದ ಸ್ಯಾಚೆಟ್‌ನಲ್ಲಿ ಕದ್ದು ಕದ್ದು ತಂದು ಹೆಂಡವನ್ನು ಮಾರತಕ್ಕದ್ದಲ್ಲಿ ಸಿಕ್ಕಾಪಟ್ಟೆ ನಮ್ಮ ರೆವಿನ್ಯೂ ಡ್ರಾಪ್ ಆಯಿತು. ಅದಕ್ಕಾಗಿ ಲಾಸ್ಟ್ ಇಯರ್ ಮಾತ್ರ ಬಾರ್ಡರ್ ತಾಲ್ಲೂಕಿನಲ್ಲಿ introduce ಮಾಡಿದ್ದೇವೆ.

ಶ್ರೀ ಕೆ.ಹೆಚ್.ಹನುಮೇಗೌಡ:- ಬೇರೆಕಡೆ ಮಾಡುವುದಿಲ್ಲ ತಾನೆ ?

ಶ್ರೀ ಎಸ್.ಬಂಗಾರಪ್ಪ:- ಹನುಮೇಗೌಡರೆ ಕರ್ನಾಟಕ ರಾಜ್ಯದಲ್ಲಿ ಹೆಂಡದ್ದು ಇಲ್ಲ. ಕಳೆದ ಸಾರಿ ಶ್ರೀ ವೀರೇಂದ್ರ ಪಾಟಿಲ್‌ರವರ ಕಾಲದಲ್ಲಿ ಅದು ಅನೌನ್ಸ್ ಮಾಡಿರತಕ್ಕ ವಿಚಾರ. ಅರಾಕ್ ಸೇಲ್ಸ್ ಮಾತ್ರ ನಮ್ಮ

ಮುಂದೆ ಇರತಕ್ಕದ್ದು. ಆಮೇಲೆ ಮಾನ್ಯ ಅನಂತಕೃಷ್ಣ ಅವರು ಎರಡು ವಿಚಾರಗಳನ್ನು ಪ್ರಸ್ತಾಪಮಾಡಿದ್ದರು. ನಾನು ಹೇಳುವುದಕ್ಕೆ ಮರೆತೆ. ಮೊದಲನೆಯದಾಗಿ political pension ಕೊಡತಕ್ಕದ್ದನ್ನು 500 ರೂಪಾಯಿಗಳಿಗೆ ಏರಿಸಬೇಕೆನ್ನತಕ್ಕದ್ದು ಮತ್ತು ಬಸ್ ಪಾಸಸ್ ಕೊಡಬೇಕೆನ್ನತಕ್ಕ ವಿಚಾರದ ಬಗ್ಗೆ ತಾವು ಹೇಳಿದ್ದೀರಿ. ಈಗಾಗಲೆ ಪಾಸ್ ಕೊಟ್ಟಿರುವುದರಿಂದ 70-80 crores of rupees, total loss to the K.S.R.T.C. ಅದು ಇರುವುದರಿಂದ ಮತ್ತೆ ಪಾಸ್‌ಗಳನ್ನು ಕೊಡಬೇಕೇ ಬೇಡವೇ ಎನ್ನತಕ್ಕದ್ದು ಇದೆ. ಹೆವಿ ಲಾಸಸ್‌ಗೆ ಅದು ಕಾಂಟ್ರಿಬ್ಯೂಟ್ ಮಾಡುತ್ತದೆ ಎನ್ನತಕ್ಕ ದೃಷ್ಟಿಯಿಂದ ಒಂದು political pension 500 ರೂಪಾಯಿ ಮಾಡುವ ಬಗ್ಗೆ ತೀವ್ರವಾಗಿ ವಿಚಾರ ಮಾಡುತ್ತದೆ. including bus pass.

ಶ್ರೀ ಕೆ.ಎಸ್.ಈಶ್ವರಪ್ಪ:- 10 ಸಾವಿರ ರೂಪಾಯಿ ತನಕ ಇರುವ ರಾಜ್ಯ ರೈತರ ಸಾಲ ಮನ್ನಾ ಆಗುತ್ತದೆಂದು ನಾವು ಅಂದುಕೊಂಡಿದ್ದೆವು. ಇಲ್ಲಿ ಬಡ್ಡಿ ಮನ್ನಾ ವನ್ನು ತಾವು ಮಾಡಿದ್ದೀರಿ. ಪೂರ್ಣ ಅಸಲನ್ನು ಯಾರು ಕಟ್ಟುತ್ತಾರೋ ಅವರಿಗೆ ಸಂಪೂರ್ಣ ಬಡ್ಡಿ ಮನ್ನಾ ಮಾಡಿದ್ದೇವೆಂದು ಹೇಳುತ್ತಿದ್ದೀರಿ. ಸಂಪೂರ್ಣ ಹಿಂದಿನಿಂದ ಎಷ್ಟೇ ಬಾಕಿ ಇದ್ದರೂ ಹಾಗೆಯೇ ಅಥವಾ 2-10-89ರ ತನಕ ಇದ್ದು ಅಲ್ಲಿಂದ ಶೇಕಡ 5 ರಷ್ಟು ಮಾತ್ರ ಬಡ್ಡಿ ಮನ್ನಾ, ಅಲ್ಲಿಂದ ಮುಂದೆ ಪೂರ್ಣ ಬಡ್ಡಿ ಮನ್ನಾ ಇದರ ಬಗ್ಗೆ ನನಗೆ ಗೊಂದಲ ಆಗಿದೆ. ಈ ದೃಷ್ಟಿಯಿಂದ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುವುದು ಇಷ್ಟೇ. ಇವತ್ತಿನತನಕ ಎಲ್ಲಾ ರೈತರದು ಸಂಪೂರ್ಣ ಬಡ್ಡಿ ಮನ್ನಾ ಮಾಡುತ್ತೀರೋ ಅಥವಾ 1989 ರ ತನಕ ಇದ್ದುದಕ್ಕೆ ಕನ್ಸೆಷನ್ ಕೊಟ್ಟು ಪೂರ್ಣ ಮನ್ನಾ ಮಾಡುತ್ತೀರೋ ಹೇಗೆ ಎಂದು ಕ್ಲಾರಿಫಿಕೇಷನ್ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್.ಬಂಗಾರಪ್ಪ:- ಉಳಿದಿರತಕ್ಕಂಥ ಮಾನ್ಯ ಸದಸ್ಯರುಗಳು ಹಲವಾರು ವಿಚಾರಗಳನ್ನು ಹೇಳಿದ್ದಾರೆ. ಅವನ್ನೆಲ್ಲಾ ಗಮನದಲ್ಲಿಟ್ಟು ಸೂಕ್ತವಾಗಿರತಕ್ಕ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಳ್ಳುತ್ತದೆಂದು ಹೇಳುತ್ತೇನೆ. ಈ ಬೇಡಿಕೆಗಳು ಏನು ಇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಅವರು ಕ್ಲಾರಿಫಿಕೇಷನ್ ಅನ್ನು ಕೇಳಿದರೆ ಉತ್ತರ ಕೊಡದಿದ್ದರೆ ಹೇಗೆ ?

ಶ್ರೀ ಎಸ್.ಬಂಗಾರಪ್ಪ:- ಅದಕ್ಕೆ ಎಷ್ಟು ಸಾರಿ ಕೊಡಬೇಕು.

(ಬಾರಿ ಗೊಂದಲ)

ಉಪಾಧ್ಯಕ್ಷಿಣಿಯವರು:- ಅವರು 3 ಗಂಟೆಕಾಲ ಸತತವಾಗಿ ಉತ್ತರ ಕೊಡುತ್ತಿದ್ದಾರೆ.

(ಗೊಂದಲ)

ಉಪಾಧ್ಯಕ್ಷಿಣಿಯವರು:- ಎರಡೂವರೆ ಗಂಟೆ, ಹತ್ತಿರ ಹತ್ತಿರ ಮೂರು ಗಂಟೆಗಳ ಕಾಲ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಪ್ರತಿಯೊಬ್ಬರು. . . . .

(ಗೊಂದಲ)

ಉಪಾಧ್ಯಕ್ಷಿಣಿಯವರು:- ಯಡಿಯೂರಪ್ಪನವರೇ, ತಾವು ತಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಳ್ಳಿ. ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರಲ್ಲಾ.

(ಗೊಂದಲ)

ಉಪಾಧ್ಯಕ್ಷಿಣಿಯವರು:- ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು. ಯಾರ್‍ಯಾರು, ಏನೇನು ಕ್ಲಾರಿಫಿಕೇಷನ್ ಕೇಳಿದರೋ, ಅದಕ್ಕೆಲ್ಲಾ ಸುಮಾರು ಎರಡೂವರೆ ಗಂಟೆ ಹೊತ್ತು ಉತ್ತರ ಕೊಟ್ಟಿದ್ದಾರೆ. ತಾವು ಏನು ಪ್ರಶ್ನೆ ಎತ್ತಿದ್ದೀರಿ, ಅದರ ಬಗ್ಗೆ ಅವರು ಆಗಲೇ ವಿಚಾರ ಮಾಡಿದ್ದಾರೆ. ಮತ್ತು ಅದರ ಬಗ್ಗೆ ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದಾರೆ. ಆದುದರಿಂದ, ತಾವೆಲ್ಲರೂ ದಯವಿಟ್ಟು ಕುಳಿತುಕೊಳ್ಳಬೇಕು.

ಶ್ರೀ ಎಲ್.ಆರ್.ಶಿವರಾಮೇಗೌಡ:- ರೈತರಿಗೂ ಇವರಿಗೂ ಏನೇನೂ ಸಂಬಂಧವಿಲ್ಲ. ಇವರು

ರೈತರನ್ನು ಬಾಡಿಗೆಗೆ ಕರೆದುಕೊಂಡು ಬಂದು ಇಲ್ಲಿ ನಾಟಕವಾಡುತ್ತಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನಾನು ಒಂದು ಕ್ಲಾರಿಫಿಕೇಷನ್ ಕೇಳಿಕೊಳ್ಳುತ್ತಿದ್ದೇನೆ. ಆದರೆ, ಒಂದೇ ವಿಚಾರ ಮಾತ್ರ ನಮಗೆ ಕ್ಲಿಯರ್ ಆಗಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಅನೌನ್ಸ್ ಮಾಡಬೇಕಾದರೆ ಹೇಳಿದರು. ಸಾಲ ಪಡೆದಿರುವಂಥ ರೈತರು ತಮ್ಮ ಅಸಲನ್ನು ಕಟ್ಟಿದರೆ ಬಡ್ಡಿ, ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುತ್ತೇವೆಂದು ಉತ್ತರ ಕೊಡುವಾಗ ಹೇಳಿದರು. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ಕ್ಲಾರಿಫಿಕೇಷನ್ ಕೇಳುತ್ತಿದ್ದೇನೆ. ಏನೆಂದರೆ, ಇದುವರೆಗೆ ಎಲ್ಲಾ ರೈತರು ಸಹಕಾರ ಸಂಘದಿಂದ ಪಡೆದಿರುವಂಥ ಸಾಲದ ಅಸಲನ್ನು ಪೂರ್ಣವಾಗಿ ಕಟ್ಟಿದರೆ, ಅವರುಗಳೆಲ್ಲರ ಬಡ್ಡಿಯನ್ನು ಮನ್ನಾ ಮಾಡುತ್ತೀರಾ ?ಅಥವಾ ಕೆಲವರಿಗೆ ಮಾತ್ರ ಇದು ಅನ್ವಯವಾಗುತ್ತದೆಯೇ ? ಎಂಬುದನ್ನು ಹೇಳಬೇಕು.

ಶ್ರೀ ಎಸ್.ಬಂಗಾರಪ್ಪ:-ನಾನು ಇದರ ಬಗ್ಗೆ ಉತ್ತರ ಕೊಟ್ಟಿದ್ದೇನೆ. ನೀವು ಉತ್ತರವನ್ನು ಫಾಲೋ ಮಾಡುವುದಿಲ್ಲ. This is the trouble we have. ನೀವು ಉತ್ತರವನ್ನು ಫಾಲೋ ಮಾಡದೆ ಹೀಗೆ ಮಾತನಾಡುತ್ತಾ ಕುಳಿತುಕೊಳ್ಳುವುದು, ಒಂದೊಂದು ಸಲ ಪ್ರಶ್ನೆ ಹಾಕಿಕೊಂಡು ಕುಳಿತುಕೊಳ್ಳುವುದು. ಇವೊತ್ತು ಯಾರು ಸುಸ್ತಿದಾರರಿದ್ದಾರೆ ? ನಾವು ಅವರಿಗೆ ಇನ್‌ಸೆಂಟಿವ್ ಕೊಡತಕ್ಕಂಥಾದ್ದು. ನೀವು ಹೇಳಿದ್ದು ಕೆಇಬಿ ರೈತರ ಸಾಲದ ಬಗ್ಗೆಯೇ ? ಅಥವಾ ಸಹಕಾರಿ ಸಂಘದ ಸಾಲದ ಬಗ್ಗೆಯೇ ?

ಶ್ರೀ ಬಿ.ಎಸ್.ಯಡಿಯೂರಪ್ಪ:- ಸಹಕಾರಿ ಸಂಘದ ಸಾಲದ ಬಗ್ಗೆ.

ಶ್ರೀ ಎಸ್.ಬಂಗಾರಪ್ಪ:-ನಾನು ಸಹಕಾರಿ ಸಂಘದ ಸಾಲದ ಬಗ್ಗೆ ಈಗಾಗಲೇಉತ್ತರ ಕೊಟ್ಟಿದ್ದೇನೆ. ನಾನು ಏನು ಹೇಳಿದ್ದೇನೆಂದರೆ, ಕೃಷಿಗೆ ಉತ್ತೇಜನ ಕೊಡತಕ್ಕಂಥ ಸ್ಕೀಮ್ ಪ್ರಕಾರ ನಾವೇನು ಮಾಡಿದ್ದೇವೆಂದರೆ, ಮಾರ್ಚಿ ಅಂತ್ಯದೊಳಗೆ ಬಾಕಿದಾರರು ಯಾರು ಕಟ್ಟುತ್ತಾರೋ, ಅಂದರೆ ಇಂಟರೆಸ್ಟ್ ಸಹ ಸೇರಿಸಿ ಕಟ್ಟಬೇಕು. ಆ ರೀತಿ ಸೇರಿಸಿ ಕಟ್ಟಿದ ಕೂಡಲೇ ನಾವು ಅವರಿಗೆ 5ಪರ್ಸೆಂಟ್ ಹಿಂದಕ್ಕೆ ಕೊಡುತ್ತೇವೆ. ಮಾನ್ಯ ಚಂದ್ರೇಗೌಡರು ಕೇಳಿದಾಗ ನಾವು ಅದನ್ನು ಕೊಡುವುದಿಲ್ಲವೆಂದು ಹೇಳಿದೆವು. ನಾನು ಉತ್ತರ ಕೊಡಬೇಕಾದರೆ ಹೇಳಿದೆ. ಮಾನ್ಯ ಚಂದ್ರೇಗೌಡರು 5 ಪರ್ಸೆಂಟ್ ಮುರಿದುಕೊಂಡು ಕೊಡಿ, ಇದು ಒಳ್ಳೆಯ ಸ್ಕೀಂ ಎನ್ನತಕ್ಕಂಥ ಮಾತನ್ನು ಹೇಳಿದರು. ನಾವು ಹಾಗೆ ಕೊಡುವುದಕ್ಕಾಗುವುದಿಲ್ಲ. ಆ ಅರೀತಿ ಮಾಡುವುದನ್ನು ನಬಾರ್ಡ್‌ನವರು ಒಪ್ಪುತ್ತಿಲ್ಲ. ನಬಾರ್ಡ್ ತೊಂದರೆ ಕೊಡುವುದರಿಂದ ನಾವೇನು ಮಾಡಿದ್ದೇವೆಂದರೆ, ಕೃಷಿಗೆ ಉತ್ತೇಜನ ಕೊಡುವುದಕ್ಕಾಗಿ, ನಾವು ಮಾಡುತ್ತೇವೆ, ಪೂರ್ತಿ ಕಟ್ಟಿರಿ ಎಂದು ಹೇಳಿದ್ದೇವೆ. ಮಾರ್ಚಿ ಅಂತ್ಯದ ನಂತರ ತಿರುಗಿ 5 ಪರ್ಸೆಂಟ್ ಹಣ ಕೊಡುತ್ತೇವೆಂದು ಹೇಳಿದ್ದೇವೆ. ಅನೇಕ ಜನರು ಕಟ್ಟಿದ್ದಾರೆ. ಬಾಕಿ ಹಾಗೆ ಬರುತ್ತಿದೆ. ನಮಗೆ ಟೈಂ ಸಾಕಾಗುವುದಿಲ್ಲವೆನ್ನುವ ದೃಷ್ಟಿಯಿಂದ ಮಾರ್ಚಿ ತಿಂಗಳ ಅಂತ್ಯಕ್ಕೆ ಇನ್ನು 3-4ದಿವಸಗಳು ಉಳಿದಿರುವುದರಿಂದ, ಇನ್ನೊಂದು ತಿಂಗಳು ಎಕ್ಸ್‌ಟೆಂಡ್ ಮಾಡಿದ್ದೇವೆ. ಅಷ್ಟರೊಳಗೆ ಯಾರು ಬಡ್ಡಿ ಸೇರಿಸಿ ಕಟ್ಟುತ್ತಾರೋ, ಆಗ ಅವರಿಗೆ 5ಪರ್ಸೆಂಟ್ ಹಣವನ್ನು ಹಿಂದಕ್ಕೆ ಕೊಡುತ್ತೇವೆ. This is all the statement I have.

ಶ್ರೀ ಬಿ.ಎಸ್.ಯಡಿಯೂರಪ್ಪ:- ಸ್ಟೇಟ್‌ಮೆಂಟ್ ಅನ್ನು ತಾವೇ ನೋಡಿ. ಅಸಲನ್ನು ಯಾರು ಕಟ್ಟಿರುತ್ತಾರೋ, ಅವರ ಬಡ್ಡಿ ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಿದ್ದೇವೆಂದು ಹೇಳಿದ್ದಾರೆ.

Sri.S.BANGARAPPA:- Out of the total interest, five percnt intrerest will go.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:- ಸರ್ಕಾರದ ರೈತವಿರೋಧಿ ನೀತಿಯನ್ನು ಪ್ರತಿಭಟಿಸಿ, ರೈತರ ಬಗ್ಗೆ ಕಳಕಳಿ ಇಲ್ಲದಂಥ, ಕೊಟ್ಟಿರತಕ್ಕ ವಚನವನ್ನು ಭಂಗ ಮಾಡತಕ್ಕಂಥ, ರೈತರಿಗೆ ದ್ರೋಹವನ್ನು ಮಾಡಿರತಕ್ಕಂಥ ಸರ್ಕಾರವನ್ನು ವಿರೋಧಿಸಿ ನಾವು ಸಭೆಯಿಂದ ಹೊರಗಡೆ ಹೋಗುತ್ತಿದ್ದೇವೆ.

(ಗೊಂದಲ)

ಉಪಾಧ್ಯಕ್ಷಿಣಿಯವರು:- ಈಗ ಯಾವುದೂ ಕೂಡ ಕಡತಕ್ಕೆ ಹೋಗುವುದಿಲ್ಲ.

(ಮಾನ್ಯ ಸದಸ್ಯರುಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪ, ಶ್ರೀ ಕೆ.ಎಸ್.ಈಶ್ವರಪ್ಪ, ಶ್ರೀ ಎ.ರುಕ್ಮಯ್ಯ ಪೂಜಾರಿ, ಶ್ರೀ ನಾರಾಯಣ ರಾವ್ ಮನಹಳ್ಳಿ ಅವರುಗಳು ಸಭಾತ್ಯಾಗ ಮಾಡಿದರು)

ಶ್ರೀಮತಿ ಕೆ.ಎಸ್.ನಾಗರತ್ನಮ್ಮ (ಯೋಜನಾ ಸಚಿವರು ಇವರಿಂದ ಉತ್ತರ)

+ ಶ್ರೀಮತಿ ಕೆ.ಎಸ್.ನಾಗರತ್ನಮ್ಮ (ಯೋಜನಾ ಸಚಿವೆಯವರು):-ಮಾನ್ಯ ಉಪಾಧ್ಯಕ್ಷಿಣಿಯವರೆ, ದಯಮಾಡಿ ಎಲ್ಲಾ ಸದಸ್ಯರು ಕುಳಿತುಕೊಳ್ಳಬೇಕು, ನಾನು ಬೇಗನೆ ನನ್ನ ಭಾಷಣವನ್ನು ಮುಗಿಸುತ್ತೇನೆ. ನಿಮಗೆಲ್ಲರಿಗೂ ಹೊಟ್ಟೆ ಹಸಿದಿರಬಹುದು. ನಾನು 4 ಗಂಟೆಯೊಳಗೆ ನನ್ನ ಭಾಷಣವನ್ನು ಮುಗಿಸುತ್ತೇನೆ. ನನ್ನ ಇಲಾಖೆಗೆ ಸಂಬಂಧಪಟ್ಟಂತೆ ಆರು ಜನ ಶಾಸಕ ಸಹೋದರರು ಅವರ ಅಭಿಪ್ರಾಯ ಮತ್ತು ಸಲಹೆಯನ್ನು ನೀಡಿದ್ದಾರೆ. ಅವರೆಲ್ಲರಿಗೂ ಕೂಡ ನಾನು ಆಭಾರಿಯಗಿದ್ದೇನೆ.

ಕಳೆದ ದಶಕದಲ್ಲಿ ಯೋಜನೆಗೆ ತೊಡಗಿಸತಕ್ಕ ಬಂಡವಾಳದ ಪ್ರಮಾಣ ಬಹಳ ಇಳಿಮುಖವಾಗಿದೆ. ಎಲ್ಲಾ ರಾಜ್ಯಗಳ ಯೋಜನೆಯ ಮೊತ್ತದಲ್ಲಿ ಕರ್ನಾಟಕದ ಪಾಲು 5ನೇ ಯೋಜನೆಯಲ್ಲಿ 5.5, 6ನೇ ಯೋಜನೆಯಲ್ಲಿ 4.8,7ನೇ ಯೋಜನೆಯಲ್ಲಿ 4ರಂತೆ ಇಳಿದಿತ್ತು. ಈ ಪ್ರಮಾಣವು 1992-93ರ ಪ್ಲಾನ್‌ನಲ್ಲಿ ಮುಂದುವರೆದು ಈಗ ನಮ್ಮ ಯೋಜನೆಯ ಗಾತ್ರ 2159 ಕೋಟಿಯಾಗಿದೆ. ಈ ರೀತಿ ಯೋಜನೆಯಲ್ಲಿ ಹೆಚ್ಚು ಬಂಡವಾಳವನ್ನು ತೊಡಗಿಸುವುದರಲ್ಲಿ ರಾಷ್ಟ್ರದಲ್ಲಿ ಕರ್ನಾಟಕದ್ದು ಬಹಳ ವಿಶೇಷವಾದ ವಿಚಾರವಾಗಿದೆ. ರಾಜ್ಯದ ಉತ್ಪಾದನೆ ಹೆಚ್ಚಾಗಬೇಕಾದರೆ ಯೋಜನೆಯಲ್ಲಿ ಹೆಚ್ಚಿನ ಬಂಡವಾಳವನ್ನು ತೊಡಗಿಸಬೇಕು. ಕೇವಲ ಸಂಬಳ ಸಾರಿಗೆ ಮುಂತಾದುವುಗಳಿಗೆ ಹಣವನ್ನು ಖರ್ಚು ಮಾಡಿದರೆ ಆರ್ಥಿಕ ಅಭಿವೃದ್ಧಿಯಾಗಲು ಸಾಧ್ಯವಾಗುವುದಿಲ್ಲ ಎನ್ನುವುದು ಎಲ್ಲರಿಗೂ ಕೂಡ ಗೊತ್ತಿರತಕ್ಕ ವಿಚಾರ. ದೊಡ್ಡ ಯೋಜನೆ ಎಂದರೆ ಹೆಚ್ಚು ಬಂಡವಾಳದ ಹೂಡಿಕೆ, ಆ ಮೂಲಕ ರಾಜ್ಯದ ಅಸೆಟ್ಸ್‌ನ್ನು ಹೆಚ್ಚಿಸಲು, ಕ್ರಿಯೇಟ್ ಮಾಡಲು ಸಾಧ್ಯವಾಗುತ್ತದೆ. ನಮಗೆ ಬರೇ ಭತ್ಯೆ ಸಂಬಳಸಾರಿಗೆಗೆ ಖರ್ಚು ಮಾಡಿ ಹಣವನ್ನು ಹಾಳುಮಾಡತಕ್ಕದ್ದು ಬೇಕಾಗಿಲ್ಲ. ನಮ್ಮ ಪ್ರಯತ್ನದ ಫಲ ಯೋಜನೆ, ಯೋಜನೆಯ ಮುಖಾಂತರ ರಾಜ್ಯದ ಜನರಿಗೆ ತಲುಪಬೇಕು, ಅವರಿಗೆ ಒಳ್ಳೆಯದಾಗಬೇಕು ಎನ್ನುವುದೇ ನಮ್ಮ ಉದ್ದೇಶ. ಈ ಕೆಲಸವನ್ನು ಬಹಳ ಜಾಗರೂಕತೆಯಿಂದ ಮಾಡುತ್ತಿದ್ದೇವೆ. ಈ ಸಲದ ಯೋಜನೆಯಲ್ಲಿ ನೀರಾವರಿಗೆ, ಪವರ್‌ಗೆ, ಶಿಕ್ಷಣಕ್ಕೆ, ಗೃಹನಿರ್ಮಾಣಕ್ಕೆ ಜಾಸ್ತಿ ಆದ್ಯತೆಯನ್ನು, , ಒತ್ತನ್ನು ಕೊಟ್ಟಿದ್ದೇವೆ.

1990-91ರಲ್ಲಿ ನೀರಾವರಿಗೆ 211.33 ಕೋಟಿ ಇದ್ದರೆ 1991-92ರಲ್ಲಿ 247.13ಇತ್ತು. ಇದು 6.9 ಪರ್‌ಸೆಂಟ್ ಆಯಿತು. ನಾವು 1992-93 ರಲ್ಲಿ 349.85 ಕೋಟಿ ಹೆಚ್ಚಿಗೆ ಮಾಡಿದ್ದೇವೆ.

1990-91 ರಲ್ಲಿ ಪವರ್‌ಗೆ 276 ಕೋಟಿ ಇದ್ದರೆ 1991-92ರಲ್ಲಿ 372.13, 1992-93ರಲ್ಲಿ 495.57 ಇದೆ.

1990-91ರಲ್ಲಿ ಕೈಗಾರಿಕೆಗಳಿಗೆ 76.44 ಇದ್ದರೆ 1991-92 ರಲ್ಲಿ 107.67 ಕೋಟಿ ಇತ್ತು. ಈಗ1992-93 ರಲ್ಲಿ 76.82 ಇದೆ.

1990-91 ರಲ್ಲಿ ಶಿಕ್ಷಣಕ್ಕೆ 71.55 ಇದ್ದರೆ 1991-92ರಲ್ಲಿ 98.41 ಇತ್ತು 1992-93ರಲ್ಲಿ 205.46 ಇದೆ.

ಆರೋಗ್ಯ ಇಲಾಖೆಯಲ್ಲಿ 1990-91ರಲ್ಲಿ 41.52 ಇದ್ದರೆ 1991-92 ರಲ್ಲಿ 47ಇದೆ, 1992-93ರಲ್ಲಿ 68.46 ಇದೆ. ಹೌಸಿಂಗ್‌ನಲ್ಲಿ 1990-91 ರಲ್ಲಿ 29.32 ಇದ್ದರೆ 1991-92ರಲ್ಲಿ 55.56 ಇದೆ, 1992-93ರಲ್ಲಿ 118.10 ಇದೆ. ಇಷ್ಟರಮಟ್ಟಿಗೆ ನಾವು ಜಾಸ್ತಿ

ಒತ್ತು ಕೊಟ್ಟು ಜನಗಳಿಗೆ ಸಹಾಯ ಮಾಡಬೇಕೆಂದು ನಾವು ಏರ್ಪಾಡು ಮಾಡಿಕೊಂಡಿದ್ದೇವೆ. ಪ್ಲಾನಿಂಗ್ ಕಮೀಷನರ್‌ರವರು ನಮ್ಮ ಯೋಜನೆಯನ್ನು ಬಹಳಮೆಚ್ಚಿ ಶ್ಲಾಘಿಸಿದ್ದಾರೆ. ಅದರ ಫಲವಾಗಿಯೇ ನಮ್ಮ ಯೋಜನೆಯ ಗಾತ್ರವನ್ನು ಹೆಚ್ಚಿಸುವುದಕ್ಕೆ ಸಾಧ್ಯವಾಯಿತು. ನಮ್ಮ ಯೋಜನೆಯ ಅಡಿಯಲ್ಲಿ ಮೂರು ಮುಖ್ಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಅದು ಬಾರ್ಡ್‌ರ್ ಏರಿಯಾ ಡೆವಲಪ್‌ಮೆಂಟ್ ಪ್ರೋಗ್ರಾಂ. 1991-92ರಲ್ಲಿ 10ಕೋಟಿ ರೂಪಾಯಿ ಆಲೋಕೇಷನ್‌ನಲ್ಲಿ 25 ಲಕ್ಷ ಗುಲ್ಬರ್ಗಾ ಡಿವಿಜನ್ ಹೊರತಾಗಿ ಎಲ್ಲಾ ತಾಲ್ಲೂಕುಗಳಿಗೆ ವಿತರಣೆ ಮಾಡಿದ್ದೇವೆ. 6ರಿಂದ 10 ಲಕ್ಷ ರೂಪಾಯಿ ಗುಲ್ಬರ್ಗಾ ಡಿವಿಜನ್ ತಾಲ್ಲೂಕಿಗೆ ಕೊಟ್ಟಿದ್ದೇವೆ. ಹಾಗೆಯೇ ಚಿಂಚೋಳಿಗೆ 90 ಲಕ್ಷ ಕೊಟ್ಟಿದ್ದೇವೆ. ಪಾವಗಡಕ್ಕೆ 90 ಲಕ್ಷ ಕೊಟ್ಟಿದ್ದೇವೆ. ಇದರಿಂದ ಬಹಳ ಹಿಂದುಳಿದ ಪ್ರದೇಶವನ್ನು ಸರಿಸಮಾನವಾಗಿ ನೋಡಿಕೊಳ್ಳುವುದಕ್ಕೆ ಮತ್ತು ಬಾರ್ಡ್‌ರ್ ಏರಿಯಾಗಳಿಗೆ ಸವಲತ್ತುಗಳನ್ನು ಮಾಡಿಕೊಡುವುದಕ್ಕೆ ಅನುಕೂಲ ಮಾಡಿಕೊಟ್ಟಿದ್ದೇವೆ. ಈ ವರ್ಷದಲ್ಲಿ ಅಂದರೆ 1992-93 ರಲ್ಲಿ 10 ಕೋಟಿ ರೂಪಾಯಿ ಅಲೋಕೇಷನ್ ಇದ್ದುದನ್ನು 15 ಕೋಟಿ ರೂಪಾಯಿಗೆ ಮಾಡಿ ರಾಜ್ಯದ ಎಲ್ಲಾ ಬಾರ್ಡ್‌ರ್ ಏರಿಯಾ ತಾಲ್ಲೂಕುಗಳನ್ನು ಸರಿಸಮಾನವಾಗಿ ಮಾಡಿಕೊಳ್ಳುವುದಕ್ಕೆ ನಮ್ಮಲಿರುವ ಹಣ ಕಡಿಮೆಯಾದರೂ ನಾವು ಇದಕ್ಕೆ ಅನುಕೂಲ ಮಾಡಿಕೊಟ್ಟಿದ್ದೇವೆ. ಇದಕ್ಕೆ ಬಹಳಷ್ಟು ಶಾಸಕರ ಡಿಮ್ಯಾಂಡ್ ಇದೆ. ಆದರೆ ನಮ್ಮ ಹತ್ತಿರ ಹಣ ಕಡಿಮೆ ಇದೆ. ಶಾಸಕರೆಲ್ಲರೂ ನಮಗೆ ಕೋ ಆಪರೇಟೀವ್ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಇನ್ನು ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಇದ್ದು, ಇದು ಗುಲ್ಬರ್ಗಾ ಡಿವಿಜನ್‌ನಲ್ಲಿ ಐತಿಹಾಸಿಕ ಬ್ಯಾಕ್‌ವರ್ಡ್‌ನೆಸ್ ಇರುವುದರಿಂದ ಇದನ್ನು ಹೇಗಾದರೂ ಮಾಡಿ ರಾಜ್ಯದ ಎಲ್ಲಾ ಡಿವಿಜನ್‌ಗಳಿಗೆ ಸರಿಸಮನಾಗಿ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಈಗ ತಾನೇ ಇದಕ್ಕೆ ಒಂದು ಆಕ್ಟ್ ಮಾಡಿ ಈಗ ತಾನೇ ಬೋರ್ಡ್ ರಚಿಸುವುದಕ್ಕೆ ನಾವು ಸಿದ್ಧ ಮಾಡಿಕೊಂಡಿದ್ದೇವೆ. 1991-92 ರಲ್ಲಿ 50 ಕೋಟಿ ರೂಪಾಯಿ ಇದ್ದದ್ದು, 1992-93ರಲ್ಲಿ 65 ಕೋಟಿ ರೂಪಾಯಿಗಳನ್ನು ಇದಕ್ಕೆ ಇಟ್ಟಿದ್ದೇವೆ. ಮಲೆನಾಡು ಡೆವಲಪ್‌ಮೆಂಟ್ ಬೋರ್ಡ್‌ಗೆ ಸಂಬಂಧಪಟ್ಟಂತೆ ಒಂದು ಆಕ್ಟ್ ಆಗಿ ಶೀಘ್ರದಲ್ಲಿಯೇ ಬೋರ್ಡ್ ಮಾಡುವುದಕ್ಕೆ ನಾವು ಏರ್ಪಾಡು ಮಾಡಿದ್ದೇವೆ. ಇದಕ್ಕೆ 1991-92 ರಲ್ಲಿ 10 ಕೋಟಿ ರೂಪಾಯಿ ಇದ್ದುದು, ಈಗ 1992-93ರಲ್ಲಿ 35 ಕೋಟಿ ರೂಪಾಯಿಗಳನ್ನು ಇದಕ್ಕೋಸ್ಕರ ಇಟ್ಟಿದ್ದೇವೆ. ಈ ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ಬೇರೆ ಬೇರೆ ಡಿಪಾರ್ಟ್‌ಮೆಂಟ್‌ಗಳಿಗೆ ಗೈಡ್ ಲೈನ್ಸ್ ಮತ್ತು ಪ್ರೋಗ್ರಾಂಗಳನ್ನು ರೂಢಿಸುವುದಕ್ಕೆ ಸಹಾಯ ಮಾಡುತ್ತದೆ. ಇದರಲಿ ಎಕ್ಸ್‌ಪರ್ಟ್ ತಂಡವಿದ್ದು ಇವರ ಕಾರ್ಯಾಚರಣೆ ಚಟುವಟಿಕೆಗಳಲ್ಲಿ ಬಹಳ ಮಟ್ಟಿಗೆ ಬೇರೆ ಡಿಪಾರ್ಟ್‌ಮೆಂಟ್‌ಗಳಿಗೆ ಸಹಾಯ ಮಾಡುತ್ತದೆ. ಈ ಎಕ್ಸ್‌ಪರ್ಟ್ ಕಮಿಟಿಯ ಬಗ್ಗೆ ದೆಹಲಿಯಲ್ಲಿಯೂ ಬಹಳ ಅಪ್ರಿಸಿಯೇಟ್ ಮಾಡಿದ್ದಾರೆ. ಇದು 8 ನೇ ಪಂಚವಾರ್ಷಿಕ ಯೋಜನೆ ತಯಾರು ಮಾಡಿದೆ, 1992-93 ನೇ ಸಾಲಿನ ಪ್ಲಾನ್ ತಯಾರು ಮಾಡಿದೆ. ಗಾಡ್‌ಗಿಲ್ ಫಾರ್ಮುಲ ಬಗ್ಗೆ ಟಿಪ್ಪಣಿಯನ್ನು ಪ್ರಶಂಸನೀಯವಾಗಿ ಕೊಟ್ಟಿದೆ. 8ನೇ ಪಂಚವಾರ್ಷಿಕ ಯೋಜನೆಯನ್ನು ಇನ್ನೂ ಫೈನಲೈಸ್ ಮಾಡಬೇಕಾಗಿದೆ. ಶೀಘ್ರದಲ್ಲಿಯೇ ಗೌರ್ನಮೆಂಟ್ ಆಫ್ ಇಂಡಿಯಾದವರು ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಮೀಟಿಂಗ್ ಕರೆಯಲಿದ್ದಾರೆ. ಅಲ್ಲಿ 8ನೇ ಪಂಚವಾರ್ಷಿಕ ಯೋಜನೆಯನ್ನು ಫೈನಲೈಸ್ ಮಾಡಲಾಗುತ್ತದೆ. ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಮತ್ತು ಮಲೆನಾಡು ಡೆವಲಪ್‌ಮೆಂಟ್ ಬೋರ್ಡ್‌ಗಳನ್ನು ಅಸ್ತಿತ್ವಕ್ಕೆ ತಂದಿದೆ. 1991-92ರ ಎಕನಾಮಿಕ್ ಸರ್ವೆ ಪ್ರಿಪೇರ್ ಮಾಡಿ ಲೆಜಿಸಲೇಚರ್ ಮುಂದೆ ಇಟ್ಟಿದೆ. ಇಲ್ಲಿರುವ ಕಂಪ್ಯೂಟರೈಸ್ ಸೆಂಟರ್ ಎಲ್ಲಾ ಡಿಪಾರ್ಟ್‌ಮೆಂಟ್‌ಗಳಿಗೂ ಸಹಾಯ ಮಾಡುತ್ತಿದೆ. ಮತ್ತು ಇದರ ಬಗ್ಗೆ 350ಅಧಿಕಾರಿಗಳಿಗೆ ಟ್ರೈನಿಂಗ್ ಕೊಟ್ಟಿದೆ. ಹೀಗಾಗಿ ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ಅನೇಕ ವಿಧವಾದ ಕೆಲಸಗಳನ್ನು ಮಾಡಿ ಎಲ್ಲಾ ಡಿಪಾರ್ಟ್‌ಮೆಂಟ್‌ಗಳಿಗೂ ಒಂದು ಗೈಡ್ ಕೊಟ್ಟು, ಸಹಾಯಕಾರಿಯಾಗಿದೆ. ಇನ್ನು ಇನ್ಸಿಟಿಟ್ಯೂಷನ್ ಫೈನಾನ್ಸ್ ; ಸ್ಟ್ಯಾಟಿಸ್ಟಿಕ್ಸ್ ಡಿಪಾರ್ಟ್‌ಮೆಂಟ್ ಏನಿದೆ

ಈ ಡಿಪಾರ್ಟ್‌ಮೆಂಟ್ ಒಂದು ರೀತಿಯ ಎಲೆಮರೆ ಕಾಯಿ ಇದ್ದಹಾಗೆ ಎಲ್ಲಾ ಡಿಪಾರ್ಟ್‌ಮೆಂಟ್‌ಗಳಿಗೂ ಸಹಾಯ ಮಾಡುತ್ತಿದೆ. ಎಲ್ಲಾ ಡಿಪಾರ್ಟ್‌ಮೆಂಟ್‌ಗಳಿಗೂ ಈ ಡಿಪಾರ್ಟ್‌ಮೆಂಟ್ ಬ್ಯಾಂಕ್, ಡಿಪಾರ್ಟ್‌ಮೆಂಟ್‌ಗಳಿಗೂ ಮತ್ತು ರಾಜ್ಯದ ಉನ್ನತಿಗೆ ಹಣ ಕೊಡುವಂಥ ಎಲ್ಲಾ ಇನ್ಸಿಟಿಟ್ಯೂಷನ್‌ಗಳಿಗೂ ಕೋಆರ್ಡಿನೇಟ್ ಮಾಡಿ ರಾಜ್ಯದ ಅಭಿವೃದ್ಧಿ ಆಗುವ ಎಲ್ಲಾ ಪ್ರೋಗ್ರಾಮ್‌ಗಳಿಗೂ ಸಹಾಯ ಮಾಡುತ್ತಿದೆ. ವ್ಯವಸಾಯ, ಸಣ್ಣ ಕೈಗಾರಿಕೆ, ಸಣ್ಣ ಪುಟ್ಟ ಬಿಸನೆಸ್ ಇವುಗಳಿಗೆ ಅನೇಕ ರೀತಿಯಲ್ಲಿ ಹಣ ಒದಗಿಸುವುದಕ್ಕೆ ಕೆಲಸ ಮಾಡುತ್ತಾ ಇದೆ. 20 ಪಾಯಿಂಟ್ಸ್ ಪ್ರೋಗ್ರಾಂಗಳಿಗೆ 1099.56 ಕೋಟಿ ರೂಪಾಯಿ ಒದಗಿಸಿ ಸುಮಾರು 18 ಲಕ್ಷ ಫಲಾನುಭವಿಗಳಿಗೆ ಸಹಾಯ ಮಾಡಿದೆ. ಆಗಿಂದಾಗ್ಗೆ ಸ್ಟೇಟ್ ಲೆವೆಲ್ ಬ್ಯಾಂಕರ್ಸ್ ಕಮಿಟಿಯವರೊಂದಿಗೆ ಮೀಟಿಂಗ್‌ಗಳನ್ನು ಮಾಡಿ ನಮ್ಮ ಅಭಿವೃದ್ಧಿ ಕಾರ್ಯಕ್ರಮಕ್ಕೂ ಅವರಿಗೂ ಇರುವ ಪ್ರಾಬ್ಲಮ್‌ಗಳನ್ನು ಚರ್ಚಿಸಿ ಮತ್ತು ಅದರ ನಿವಾರಣೆಗೆ ಸತತ ಪ್ರಯತ್ನ ಮಾಡುತ್ತಾ ಇದೆ. 11ನೇ ಮಾರ್ಚ್ 1992ರಲ್ಲಿ ನಬಾರ್ಡ್ ಎಂ.ಡಿ. ಮತ್ತು ನಮ್ಮ ಚೀಫ್ ಸೆಕ್ರೆಟರಿ ಮತ್ತು ಇತರ ಆಫೀಸರ್‌ಗಳ ಮೀಟಿಂಗ್ ನಡೆದು, ಯಾವ ರೀತಿ ಹಣ ಒದಗಿಸಿಕೊಳ್ಳಬೇಕು ಅನ್ನುವ ಬಗ್ಗೆ ವಿಶೇಷ ತರವಾದ ಚರ್ಚೆ ನಡೆಸಿತು. ಇದರಲ್ಲಿ ಒಂದು ಮುಖ್ಯ ಅಂಶ ಏನೆಂದರೆ, ಜನ ಸಾಲ ತೆಗೆದುಕೊಳ್ಳುತ್ತಾರೆ, ಸಾಲವನ್ನು ವಾಪಸ್ಸು ಕೊಡುವುದಿಲ್ಲ. ಹೀಗಾಗಿ, ನಮಗೆ ರೀಸೈಕ್ಲಿಂಗ್‌ಗೆ ಬಹಳ ತೊಂದರೆಯಾಗಿದೆ. ಆದುದ್ದರಿಂದ ಸರ್ಕಾರ ಜಾಸ್ತಿ ಇದಕ್ಕೆ ನಿಗಾ ಕೊಟ್ಟು ಸಾಲ ವಸೂಲು ಮಾಡಿಕೊಡಬೇಕು ಎಂದು ನಬಾರ್ಡ್‌ನವರು, ಬ್ಯಾಂಕಿನವರು ಸರ್ಕಾರವನ್ನು ಬಹಳ ಮಟ್ಟಿಗೆ ವಿಶೇಷವಾಗಿ ಪ್ರಾರ್ಥಿಸಿದ್ದಾರೆ. ಮತ್ತು ಸೂಚನೆಯನ್ನು ಕೊಟ್ಟಿದ್ದಾರೆ, ಇದರಿಂದಾಗಿ ನಾವು ಕೊಟ್ಟ ಹಣವನ್ನು ವಸೂಲು ಮಾಡುವುದಕ್ಕೆ ವಿಶೇಷ ತರವಾದ ಪ್ರಯತ್ನ ಪಡಬೇಕು ಎಂದು ನಾನು ನಮ್ಮ ಇಲಾಖೆಯವರಿಗೆ ಸೂಚನೆ ಕೊಟ್ಟಿದ್ದೇನೆ. ನಮ್ಮ ಇಲಾಖೆಯಿಂದ್ ಡಿವಿಜನಲ್ ರೂರಲ್ ಬ್ಯಾಂಕ್‌ಗಳಿಗೆ ಸೆಂಟ್ರಲ್ ಗೌರ್ನಮೆಂಟ್ ಮತ್ತು ಸ್ಪಾನ್ಸರ್ಡ್ ಬ್ಯಾಂಕುಗಳಿಂದ, ಸ್ಟೇಟ್ ಗೌರ್ನಮೆಂಟ್ ನಿಂದ ಶೇಕಡ 15ರಷ್ಟು, ಸೆಟ್ರಲ್ ಗೌರ್ನಮೆಂಟ್‌ನಿಂದ ಶೇಕಡ 50 ರಷ್ಟು, ಸ್ಪಾನ್ಸರ್ಡ್ ಬ್ಯಾಂಕಿನಿಂದ ಶೇಕಡ 35 ರಷ್ಟು , ರೂರಲ್ ಬ್ಯಾಂಕ್‌ಗಳಿಗೆ ಅಸಿಸ್ಟೆನ್ಸ್ ಬರುತ್ತಾ ಇದೆ. ಈ ಷೇರ್ ಕ್ಯಾಪಿಟಲ್ ಪ್ರಮಾಣದಲ್ಲಿ 15-50-35 ಬರುತ್ತಾ ಇರುವುದು, 7ನೇ ಪ್ಲಾನ್‌ನಲ್ಲಿ ನಮ್ಮ ಸ್ಟೇಟ್ ಗೌರ್ನಮೆಂಟ್ 93.75 ಲಕ್ಷ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಿತು 1990-91ರಲ್ಲಿ 16ಲಕ್ಷ ರೂಪಾಯಿಗಳನ್ನು ಪ್ರೊವೈಡ್ ಮಾಡಿ ಪೂರ್ತಿಯಾಗಿ ರಿಲೀಸ್ ಮಾಡಿದೆ. 1991-92 ರಲ್ಲಿ 18ಲಕ್ಷ ಕೊಟ್ಟು ಎನ್‌ಟೈರ್ ಅಮೌಂಟ್‌ನ ಲ್ಲಿ ಇನ್ನು ಒಂದು ಲಕ್ಷ ಬಾಕಿ ಇದ್ದುದ್ದನ್ನು ಗ್ರ್ಯಾಂಟ್‌ನಲ್ಲಿ ಈಗ ಕೊಟ್ಟಿದೆ. 8 ನೇ ಪ್ಲಾನ್‌ನಲ್ಲಿ 140 ಲಕ್ಷ ಕೊಡಬೇಕು ಎಂದು ಯೋಚನೆ ಮಾಡಿದೆ. ಇದರಲ್ಲಿ 1992-93ಕ್ಕೆ 28 ಲಕ್ಷ ರೂಪಾಯಿಗಳನ್ನು ಇದಕ್ಕೆ ಇನ್‌ವೆಸ್ಟ್‌ಮೆಂಟ್ ಮಾಡಬೇಕು ಎಂದು ಏರ್ಪಾಡು ಮಾಡಿದೆ. ಹೀಗಾಗಿ ಈ ಒಂದು ಡಿಪಾರ್ಟ್‌ಮೆಂಟ್ ಇನ್ನೂ ಅನೇಕ ಕೆಲಸಗಳನ್ನು ಮಾಡುತ್ತಾ ಇದೆ. ಇದು ಒಂದು ದೊಡ್ಡ ಡಿಪಾರ್ಟ್‌ಮೆಂಟ್. ಇಷ್ಟೇ ಅಲ್ಲದೆ ಇದು ಇನ್ನೂ ಅನೇಕ ತರಹದ ಕೆಲಸಕಾರ್ಯಗಳನ್ನು ಮಾಡುತ್ತಾ ಇದೆ. Monitoring of rainfall and whether conditions, index of Agricultural produce, index of production, cost of living, estaimate of State income, etc, statistical abstract of agriculture, registration of births and deaths, census of physically disabled etc. ಇದೆಲ್ಲವನ್ನೂ ಒಳಗೊಂಡ ನೂರಾರು ಪಬ್ಲಿಕೇಷನ್ ಕೂಡ ಈ ನಮ್ಮ ಡಿಪಾರ್ಟ್‌ಮೆಂಟ್ ಮಾಡಿದೆ. ಇದು ಒಂದು ಬಹಳ ಮುಖ್ಯವಾದಂಥ ಡಿಪಾರ್ಟ್‌ಮೆಂಟ್. ಎಲ್ಲಾ ಡಿಪಾರ್ಟ್‌ಮೆಂಟ್‌ಗಳಿಗೂ ಸಹಾಯ ಮಾಡಿಕೊಂಡು, ನಾನು ಮೊದಲೇ ಹೇಳಿದ ಹಾಗೆ ಎಲೆ ಮರೆಯ ಕಾಯಿಯಂತೆ ಎಲ್ಲಾ ಕೆಲಸಗಳನ್ನು ಮಾಡಿಕೊಂಡು ಹೋಗತಕ್ಕಂಥ ಡಿಪಾರ್ಟ್‌ಮೆಂಟ್. ಇದಕ್ಕೆ ಜಾಸ್ತಿ ಮಾನ್ಯತೆ ಕೊಡಬೇಕು ಎಂದು ನಾನು ಅಭಿಪ್ರಾಯ ಪಡುತ್ತೇನೆ. ಇದಕ್ಕೆ ಹೆಚ್ಚಿನ ಮಾನ್ಯತೆ ಕೊಟ್ಟಷ್ಟೂ ಕೆಲಸಗಳು

ಜಾಸ್ತಿಯಾಗುತ್ತದೆ. ಈ ಡಿಪಾರ್ಟ್‌ಮೆಂಟ್‌ಗೆ ಸರಿಯಾದ ಸವಲತ್ತುಗಳು ಇಲ್ಲ. ಆ ಸವಲತ್ತುಗಳನ್ನು ಒದಗಿಸಿಕೊಡಬೇಕೆಂದು ನಾನು ಪ್ರಯತ್ನ ಪಡುತ್ತಾ ಇದ್ದೇನೆ. ಈ ಡಿಪಾರ್ಟ್‌ಮೆಂಟ್ ಸರಿಯಾದ ರೀತಿಯಲ್ಲಿ ಉಪಯೋಗಿಸಿ ಕೊಳ್ಳಬೇಕೆಂದು ನನ್ನ ಅಭಿಪ್ರಾಯ. ಇಲ್ಲಿ ನಮ್ಮ 4-5 ಜನ ಶಾಸಕರು ಕೆಲವು ವಿಷಯಗಳನ್ನು ಕೇಳಿದ್ದಾರೆ. ಮಾನ್ಯ ಸದಸ್ಯರಾದ ವಿಶ್ವನಾಥರವರು ಮಂಡಲ ಪಂಚಾಯತಿಗಳು ಯೋಜನೆ ಮಾಡುವುದನ್ನು ಕಟ್ ಮಾಡಿ ತಾಲ್ಲೂಕು ಮಟ್ಟಕ್ಕೆ ವರ್ಗಾಯಿಸಬೇಕೆಂದು ಹೇಳಿದ್ದಾರೆ. ಈಗ ಜಿಲ್ಲಾ ಪರಿಷತ್ ಆಕ್ಟ್‌ಗೆ ತಿದ್ದುಪಡಿ ಬರುತ್ತಿದೆ. ಇದರ ಬಗ್ಗೆ ಯೋಚನೆ ಮಾಡಬಹುದು. ಮಾನ್ಯ ಸದಸ್ಯರಾದ ರಾಜುಗೌಡರು ಯೋಜನಾ ವೆಚ್ಚಕ್ಕಿಂತ ಸಿಬ್ಬಂದಿಗೇ ಹೆಚ್ಚು ಖರ್ಚಾಗುತ್ತಿದೆ ಎಂದು ಹೇಳಿದ್ದಾರೆ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದನ್ನು ನಾನು ಅಲ್ಲಗಳೆಯುವುದಿಲ್ಲ. ಹಣಕಾಸಿನ ಆಯೋಗದವರೂ ಕೂಡ ಇದನ್ನು ಒಪ್ಪಿಕೊಂಡಿದ್ದಾರೆ. ಇದನ್ನು ಸಾಕಷ್ಟು ಕಡಿಮೆ ಮಾಡಬೇಕೆಂದು ನಮ್ಮ ಅಭಿಪ್ರಾಯವಿದೆ. ಈ ದಿಶೆಯಲ್ಲಿ ನಾವು ಪ್ರಯತ್ನ ಪಡುತ್ತಿದ್ದೇವೆ. ಇದೇ ರೀತಿ ಮಾನ್ಯ ಸದಸ್ಯರಾದ ಶಿವರಾಮೇಗೌಡರೂ ಕೂಡ ಇದೇ ಮಾತನ್ನೇ ಹೇಳಿದ್ದಾರೆ. ಇಷ್ಟು ಸಂಬಳ ನೀಡುವುದನ್ನು ನಿಲ್ಲಿಸಬೇಕೆಂದು ಹೇಳಿದ್ದಾರೆ. ಅದಕ್ಕೆ ನಾನು ಆಗಲೆ ಉತ್ತರ ಕೊಟ್ಟಿದ್ದೇನೆ. ಮಾನ್ಯ ವಾಟಾಳ್ ನಾಗರಾಜ್‌ರವರು ಜನಸಂಖ್ಯಾ ನಿಯಂತ್ರಣದ ಬಗ್ಗೆ ಹೇಳಿದ್ದಾರೆ. ನಮ್ಮ ಜನಸಂಖ್ಯಾ ನಿಯಂತ್ರಣ ಯೋಜನೆ ಸಮರ್ಪಕ ರೀತಿಯಲ್ಲಿ ಆಗಿದೆ ಎಂಬುದನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಪಾಪ್ಯುಲೇಶನ್ ಗ್ರೋತ್ ಸಾಕಷ್ಟು ಮಟ್ಟಿಗೆ ಕಡಿಮೆಯಾಗಿದೆ ಎಂದು ಹೇಳಬಯಸುತ್ತೇನೆ. ಈಗ ಇದರ ಬಗ್ಗೆ ನನ್ನ ಹತ್ತಿರ ಅಂಕಿಅಂಶಗಳಿಲ್ಲ. ನಮ್ಮ ಪಾಪ್ಯುಲೇಷನ್ ಗ್ರೋತ್ ಬಹಳ ಮಟ್ಟಿಗೆ ಇಳಿದಿದೆ ಮತ್ತು ಇನ್ನು ಮುಂದೆ ಇನ್ನೂ ಇಳಿಯುವುದಕ್ಕೆ ನಾವು ಪ್ರಯತ್ನ ಪಡುತ್ತೇವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಗ್ಯಾಡ್ಗಿಲ್ ಸೂತ್ರದಿಂದ ನಮಗೆ ಅನ್ಯಾಯವಾಗಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದು ತಪ್ಪು ಅಭಿಪ್ರಾಯ. ನಮಗೆ ಗಾಡ್ಗಿಲ್ ಸೂತ್ರದಿಂದ ಉಪಯೋಗವಾಗಿದೆಯೇ ಹೊರತು ಅನ್ಯಾಯವಾಗಿಲ್ಲ. ಈ ವಿಚಾರದಲ್ಲಿ ನಾವು ಕೊಟ್ಟಂಥ ಟಿಪ್ಪಣಿ ಪ್ಲಾನಿಂಗ್ ಕಮಿಷನ್‌ನವರು ಒಪ್ಪಿಕೊಂಡು ನಮಗೆ ಹೆಚ್ಚಿನ ಹಣವನ್ನು ಕೊಟ್ಟಿದ್ದಾರೆ. ಮಾನ್ಯ ಸದಸ್ಯರಾದ ಸಿದ್ದಯ್ಯನವರು ಬಡತನ ನಿರ್ಮೂಲನಾ ಕಾರ್ಯಕ್ರಮ ಬಹಳ ಉಪಯುಕ್ತ ಎನ್ನತಕ್ಕದ್ದನ್ನು ನಿಖರಪಡಿಸಬೇಕೆಂದು ಹೇಳಿದ್ದಾರೆ ಮತ್ತು ಬಡತನ ರೇಖೆ ಅಡಿಯಲ್ಲಿ ಎಷ್ಟು ಜನರಿದ್ದಾರೆಂಬ ಮಾಹಿತಿಯನ್ನು ನೀಡಬೇಕೆಂದು ಹೇಳಿದ್ದಾರೆ. 1977-78ರಲ್ಲಿ 50.8 ಪರ್ಸೆಂಟ್ ಇದ್ದದ್ದು 1983-84ರಲ್ಲಿ 35 ಪರ್ಸೆಂಟ್ ಆಯಿತು. 1987-88ರಲ್ಲಿ 32 ಇದ್ದದ್ದು 8ನೇ ಯೋಜನೆಯ ಕೊನೆಗೆ ನಮ್ಮ ಬಡತನವನ್ನು 25ಪರ್ಸೆಂಟ್‌ಗಿಂತಲೂ ಕಡಿಮೆ ಮಾಡಬೇಕೆಂದು ಸರ್ಕಾರದ ವತಿಯಿಂದ ವಿಶೇಷ ಯೋಜನೆಗಳನ್ನು ಹಾಕಿಕೊಂಡಿದ್ದೇವೆ. ಈ ದೆಸೆಯಲ್ಲಿ ಪ್ರಯತ್ನ ಕೂಡ ನಡೆಯುತ್ತಿದೆ. ಮಾನ್ಯ ಶಾಸಕರು, ಅಧಿಕಾರಿಗಳು ಎಲ್ಲರೂ ಒಟ್ಟಿಗೇ ಸೇರಿ ಕೆಲಸಮಾಡಿದರೆ ಬಡತನ ರೇಖೆಯಿಂದ ಬಡವರನ್ನು ಮೇಲಕ್ಕೆತ್ತಬಹುದೆಂದು ಹೇಳಿ ನನ್ನ ಇಲಾಖೆಗೆ ಸಂಬಂಧಪಟ್ಟಂತೆ ಸಭೆಯ ಮುಂದೆ ಇಟ್ಟಿರತಕ್ಕ ಬೇಡಿಕೆಯನ್ನು ಸರ್ವಾನುಮತದಿಂದ ಅನುಮೋದಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ್ (ಲಾಟರಿ ಮತ್ತು ಸಣ್ಣ ಉಳಿತಾಯ ಸಚಿವರು) ಅವರಿಂದ ಉತ್ತರ

+ ಶ್ರೀ ಟಿ. ಎಂ. ಮಂಜುನಾಥ್ (ಲಾಟರಿ ಮತ್ತು ಸಣ್ಣ ಉಳಿತಾಯ ಸಚಿವರು):-ಮಾನ್ಯ ಉಪಾಧ್ಯಕ್ಷಿಣಿಯವರೆ, ನನ್ನ ಖಾತೆಗೆ ಸಂಬಂಧಪಟ್ಟಂತೆ 3ಬೇಡಿಕೆಗಳಲ್ಲೂ ಅತ್ಯಂತ ಪ್ರಗತಿಯನ್ನು ಸಾಧಿಸಿದೆ ಎನ್ನತಕ್ಕ ಮಾತನ್ನು ನಾನು ಬಹಳ ಸಂತೋಷದಿಂದ ಹೇಳಬಯಸುತ್ತೇನೆ. ಈ ಸಭೆಯ ಹಿರಿಯ ಸದಸ್ಯರಾದ ಮಾನ್ಯ ಅನಂತಕೃಷ್ಣ ರವರು, ಮಾನ್ಯ ಇದಿನಬ್ಬರವರು ಇನ್ನೂ ಕೆಲವು ನನ್ನ ಸ್ನೇಹಿತರು ಲಾಟರಿಯ ಬಗ್ಗೆ ಮತ್ತು ಸಣ್ಣ ಉಳಿತಾಯದ ಬಗ್ಗೆ ತಮ್ಮ ತಮ್ಮ ಅಭಿಪ್ರಾಯಗಳನ್ನು ಇಟ್ಟು ಚರ್ಚೆ ಮಾಡಿದ್ದಾರೆ. ಅವರು ಕೊಟ್ಟಿರತಕ್ಕ ಸಲಹೆಗಳನ್ನು ತೆಗೆದುಕೊಂಡು ಮುಂದೆ ಅವನ್ನು ಕಾರ್ಯರೂಪಕ್ಕೆ ತರುತ್ತೇನೆಂದು ಹೇಳಬಯಸುತ್ತೇನೆ. ಈ ಸಂದರ್ಭದಲ್ಲಿ ಸಣ್ಣ ಉಳಿತಾಯದ ಬಗ್ಗೆ ಕೆಲವಾರು ವಿಚಾರಗಳನ್ನು ಇಲ್ಲಿ ಹೇಳದಿದ್ದರೆ ನನ್ನ ಕರ್ತವ್ಯಲೋಪ

ಆದಂತಾಗುತ್ತದೆಂದು ಭಾವಿಸುತ್ತೇನೆ. ಸಣ್ಣ ಉಳಿತಾಯ ಈ ವರ್ಷದ ಮಧ್ಯಭಾಗದಲ್ಲಿ ಕುಂಠಿತವನ್ನು ಕಂಡಾಗ ಮಾನ್ಯ ಮುಖ್ಯ ಮಂತ್ರಿಗಳ ನೇತೃತ್ವದಲ್ಲಿ ಕೇಂದ್ರ ಸರ್ಕಾರದ ವಿತ್ತಮಂತ್ರಿಗಳಾದ ಡಾ. ಮನ್‌ಮೋಹನ್ ಸಿಂಗ್ ಮತ್ತು ಬಲವೀರಸಿಂಗ್‌ರನ್ನು ಭೇಟಿ ಮಾಡಿದ ಮೇಲೆ ಅವರು ಇದಕ್ಕೆ ಬಡ್ಡಿಯನ್ನು ಹೆಚ್ಚಿಗೆ ಮಾಡಿದ್ದರಿಂದ ಇವತ್ತು ಪ್ರಗತಿಯನ್ನು ಕಂಡಿದ್ದೇವೆ. ಅವರು ನಮ್ಮ ಕರ್ನಾಟಕದ ಬಗ್ಗೆ ಒಂದು ಒಳ್ಳೆಯ ಅಭಿಪ್ರಾಯವನ್ನು ಏನು ವ್ಯಕ್ತಪಡಿಸಿದ್ದಾರೆಂದರೆ, ಇಷ್ಟೊಂದು ಆಸಕ್ತಿಯನ್ನು ಈ ಇಲಾಖೆಯ ಬಗ್ಗೆ ವಹಿಸಿರತಕ್ಕ ಸರ್ಕಾರ ಎಂದರೆ ಇಡೀ ರಾಷ್ಟ್ರದಲ್ಲಿ ಕೇವಲ ಕರ್ನಾಟಕ ಸರ್ಕಾರ ಒಂದೇ ಎಂದಿದ್ದಾರೆ. ಈ ಅಂಕಿಅಂಶಗಳನ್ನು ನೋಡಿದರೆ ಸಣ್ಣ ರಾಜ್ಯಗಳನ್ನು ಬಿಟ್ಟರೆ ದೊಡ್ಡ ರಾಜ್ಯಗಳ ಪೈಕಿ ನಮ್ಮ ಕಾರ್ನಾಟಕ ರಾಜ್ಯ ಉತ್ತಮ ಸಾಧನೆಯನ್ನು ಸಾಧಿಸಿದೆ ಎಂಬುದನ್ನು ಅತ್ಯಂತ ಸಂತೋಷದಿಂದ ನಾನು ಹೇಳಬಯಸುತ್ತೇನೆ. ಉತ್ತರ ಪ್ರದೇಶ ಮತ್ತು ವೆಸ್ಟ್ ಬೆಂಗಾಲ್‌ನಂತಹ ದೊಡ್ಡ ರಾಜ್ಯಗಳೂ ಕೂಡ - 38ಪರ್ಸೆಂಟ್ -, 35.99 ಪರ್ಸೆಂಟ್ ಗಳಿಸಿದ್ದರೆ ಇವತ್ತು ನಮ್ಮ ಕರ್ನಾಟಕ ರಾಜ್ಯ + 1 ಪರ್ಸೆಂಟನ್ನು ಗಳಿಸಿ ಇಡೀ ರಾಷ್ಟ್ರದಲ್ಲೇ ಅತ್ಯಂತ ಉತ್ತಮ ಗಳಿಕೆಯನ್ನು ಸಂಪಾದನೆ ಮಾಡಿದೆ. ಇವತ್ತಿನ ದಿವಸ ಈ ಗಳಿಕೆಯಿಂದ ನಮ್ಮ ರಾಜ್ಯದ ಖಜಾನೆಗೆ 211 ಕೋಟಿ ರೂಪಾಯಿಗಳು ಕೇಂದ್ರ ಸರ್ಕಾರದಿಂದ ಸಾಲ ಬಂದಿದೆ. ಅಷ್ಟೇ ಅಲ್ಲ, ಇದಕ್ಕೆ ಮೂರು ಇಲಾಖೆಗಳು ಅಂದರೆ ಸಣ್ಣ ಉಳಿತಾಯ, ಲಾಟರಿ ಮತ್ತು ರಾಜ್ಯ ವಿಮಾ ಇಲಾಖೆಗಳಲ್ಲಿರತಕ್ಕಂಥ ನಿರ್ದೇಶಕರು, ಪ್ರಾಮಾಣಿಕವಾದ ಅಧಿಕಾರಿಗಳು, ತಳಗಡೆಯಿಂದ ಬಂದಿರತಕ್ಕಂಥ ಈ ಅಧಿಕಾರಿಗಳ ನೆರವಿನಿಂದ ಇವತ್ತು ಸಣ್ಣ ಉಳಿತಾಯದಲ್ಲಿ ಅತ್ಯಂತ ಪ್ರಗತಿಯನ್ನು ನಾವು ಮಾಡಿದ್ದೇವೆ. ಅಷ್ಟೇ ಅಲ್ಲ, ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ಈ ಇಲಾಖೆಯನ್ನು ಖಾಸಗಿಯವರಿಗೆ ಕೊಡಬೇಕು ಎನ್ನತಕ್ಕ ದೃಷ್ಟಿಯಿಂದ ಹೇಳಿದರು. ಇವತ್ತು ನಮ್ಮ ರಾಜ್ಯದಲ್ಲಿ 400 ರೀತಿಯ ಲಾಟರಿ ಟಿಕೆಟ್‌ಗಳು ಮಾರಾಟವಾಗುತ್ತಿದೆ. ಇದರಲ್ಲಿ ದಿವಸ ಒಂದಕ್ಕೆ ಒಂದು ಕೋಟಿ ರೂಪಾಯಿ ನಮ್ಮ ರಾಜ್ಯದ ಹಣ ಹೊರಗಡೆ ಹೋಗುತ್ತಿದೆ. ಇದನ್ನು ತಡೆಗಟ್ಟಬೇಕೆಂದು ನಮ್ಮ ಅಧಿಕಾರಿಗಳು ಅವರ ಬಗ್ಗೆ ನೋಟೀಸನ್ನು ಕೊಟ್ಟಿದ್ದಾರೆ. ಅಷ್ಟೇ ಅಲ್ಲ, ಬಹಳ ಮುಖ್ಯವಾಗಿ ಲಾಟರಿ ಟಿಕೆಟ್ಟನ್ನು ಮಾರುವುದರಿಂದ ಸುಮಾರು ಒಂದು ಲಕ್ಷ ಜನ ಇವತ್ತು ಕೆಲಸವನ್ನು ಮಾಡುತ್ತಿದ್ದಾರೆ. ಇದರ ಬಗ್ಗೆಯೂ ನಾವು ಆಸಕ್ತಿಯನ್ನು ತೋರಿಸಬೇಕಾಗಿದೆ. ಇವತ್ತು ನಮ್ಮ ರಾಜ್ಯದಲ್ಲಿ 80 ಸಾವಿರ ಜನ ಲಾಟರಿ ಟಿಕೆಟ್ಟುಗಳನ್ನು ಮಾರತಕ್ಕಂಥವರಿದ್ದಾರೆ. ಮೂರು ಸಾವಿರ ಜನ ಅಧಿಕೃತ ಏಜೆಂಟರುಗಳಿದ್ದಾರೆ. ರಾಷ್ಟ್ರದ ಒಳಗಡೆ ಇರತಕ್ಕಂಥವರು ಮತ್ತು ನಮ್ಮ ರಾಜ್ಯದಿಂದ ಹೊರಗಡೆ ಇರತಕ್ಕಂಥವರು ಸುಮಾರು 20 ಸಾವಿರ ಜನ ನಿರುದ್ಯೋಗಿಗಳು ಇವತ್ತಿನ ದಿವಸ ಲಾಟರಿಯಿಂದ ಜೀವನವನ್ನು ಮಾಡುತ್ತಿದ್ದಾರೆ. ನಿಮಗೆ ಹೇಳುತ್ತಿದ್ದೇವೆ. ಈ ವರ್ಷಕ್ಕೆ ನಾಲ್ಕೂವರೆ ಕೋಟಿ ರೂಪಾಯಿಗಳ ಆದಾಯವಿರತಕ್ಕಂಥದ್ದು ಮುಂದಿನ ವರ್ಷದಲ್ಲಿ ಲಾಟರಿ ಒಂದರಲ್ಲೇ ಆರುವರೆ ಕೋಟಿ ರೂಪಾಯಿಗಳ ಪ್ರಗತಿಯನ್ನು ನಾವು ಸಾಧನೆ ಮಾಡುವವರಿದ್ದೇವೆ.

ಎರಡನೆಯದಾಗಿ ಕೆ.ಜಿ.ಐ.ಡಿ. ಏನು ಇದೆ, ಇನ್‌ಷೂರೆನ್ಸ್ ಡಿಪಾರ್ಟ್‌ಮೆಂಟ್, ಇದು ಇಡೀ ರಾಷ್ಟ್ರದಲ್ಲಿ ಅತ್ಯಂತ ಹಳೆಯದಾಗಿರತಕ್ಕಂಥದ್ದು. ಇದು ಸ್ಥಾಪನೆಯಾಗಿ ಸುಮಾರು 100 ವರ್ಷಗಳೇ ಆಗಿದೆ. ಇದರಲ್ಲಿ ನಮ್ಮ ರಾಜ್ಯದಲ್ಲಿ ಏನು ಸಿಬ್ಬಂದಿವರ್ಗದವರು ಇದ್ದಾರೆ ಅಧಿಕಾರಿವರ್ಗದವರು ಇದ್ದಾರೆ, ಅವರಲ್ಲಿ 100 ಕ್ಕೆ 93 ಭಾಗ ಇದರಲ್ಲಿ ಒಳಪಡಿಸಿ ಇವತ್ತಿನದಿವಸ ಸುಮಾರು ಎಂಟು ಲಕ್ಷ ಪಾಲಿಸಿಗಳನ್ನು ಕೊಟ್ಟು ಸುಮಾರು 930 ಕೋಟಿ ರೂಪಾಯಿಗಳ ಮೌಲ್ಯದ ಹಣವನ್ನು ಈ ಒಂದು ಪಾಲಿಸಿಗಳ ಮುಖಾಂತರ ಸರ್ಕಾರ ತುಂಬತಕ್ಕಂಥ ಪ್ರಯತ್ನ ಮಾಡಿದೆ. ಅಷ್ಟೇ ಅಲ್ಲ, ಈ ಒಂದು ಇಲಾಖೆಯಿಂದ ನಮ್ಮ ಸರ್ಕಾರಕ್ಕೆ ಈ ವರ್ಷ 35 ಕೋಟಿ ರೂಪಾಯಿಗಳ ವರಮಾನ ಬಂದಿದೆ. ನನ್ನ ಇಲಾಖೆ ಒಂದರಿಂದಲೇ ಈ ರಾಜ್ಯದ ಖಜಾನೆಗೆ ಸುಮಾರು 211 ಕೋಟಿ ರೂಪಾಯಿಗಳು ಬಂದಿರತಕ್ಕಂಥದ್ದಾಗಿದೆ. ಮತ್ತು ರಾಜ್ಯದ ವಿಮಾ ಇಲಾಖೆಯಿಂದ 318 ಕೋಟಿ ರೂಪಾಯಿಗಳು ಸರ್ಕಾರದ ಬೊಕ್ಕಸಕ್ಕೆ ಬಂದಿದೆ. ಈ ಮೂರು ಇಲಾಖೆಗಳಿಂದ ಒಟ್ಟು ಸುಮಾರು

ಹೆಚ್ಚಿಗೆ600 ಕೋಟಿ ರೂಪಾಯಿಗಳು ಸರ್ಕಾರದ ಬೊಕ್ಕಸದಲ್ಲಿ ಇದೆಯೆಂದು ಹೇಳತಕ್ಕಂಥ ಸಂತೋಷದ ವಿಚಾರವನ್ನು ಹೇಳುತ್ತಾ, ಈ ಸಂದರ್ಭದಲ್ಲಿ ಸದನಕ್ಕೆ ಅನುಮತಿ ಕೋರುತ್ತಿದ್ದೇವೆ. ನಮ್ಮ ರಾಜ್ಯದ ಮಾನ್ಯ ಮುಖ್ಯ ಮಂತ್ರಿಗಳಿಂದಲೂ ಸಹಾಯ ಕೋರುತ್ತಿದ್ದೇನೆ. ರಾಜ್ಯ ವಿಮಾ ಇಲಾಖೆಗೆ 100ವರ್ಷಗಳು ಮುಗಿಯುತ್ತಿರುವುದರಿಂದ ನೂರು ವರ್ಷದ ಹಬ್ಬವನ್ನು ಅತ್ಯಂತ ವಿಜೃಂಭಣೆಯಿಂದ ಮಾಡಬೇಕಾಗಿದೆ. ಆದ್ದರಿಂದ ಅಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿವರ್ಗದವರಿಗೆ ಒಂದು ತಿಂಗಳ ಬೋನಸ್ ಕೊಡಬೇಕೆನ್ನುವ ದೃಷ್ಟಿಯಿಂದ ಒಟ್ಟು 30 ಲಕ್ಷ ರೂಪಾಯಿಗಳನ್ನು ಖರ್ಚುಮಾಡಬೇಕೆನ್ನುವಂಥ ಒಂದು ಪ್ಲಾನ್ ಕೂಡ ತಯಾರು ಮಾಡಿ ಈಗಾಗಲೇ ಫೈನಾನ್ಸ್ ಡಿಪಾರ್ಟ್ ಮೆಂಟ್‌ಗೆ ಕಳುಹಿಸಲಾಗಿದೆ. ನಮ್ಮ ಈ ಮೂರು ಇಲಾಖೆಗಳಿಗೂ ಸಹಿತ ಹಣಕಾಸಿನ ಕಾರ್ಯದರ್ಶಿಯವರು ಅತ್ಯಂತ ಉತ್ತಮವಾದ ಸಹಕಾರವನ್ನು ಕೊಡುತ್ತಿದ್ದಾರೆ. ಈ ಒಂದು ದೃಷ್ಟಿಯಿಂದ ಅತ್ಯಂತ ಮುಖ್ಯವಾಗಿ ರಾಜ್ಯದ ಬೊಕ್ಕಸಕ್ಕೆ ಹಣವನ್ನು ತುಂಬತಕ್ಕಂಥ ಈ ಮೂರು ಇಲಾಖೆಯಲ್ಲಿಯೂ ಸಹಿತ ಪ್ರಮಾಣಿಕರಾದ ಅಧಿಕಾರಿಗಳು ಕೆಲಸ ಮಾಡಿದ್ದಾರೆ, ರಾಜ್ಯಕ್ಕೆ ಒಳ್ಳೆಯ ಹೆಸರನ್ನು ತಂದಿದ್ದಾರೆ. ಅಷ್ಟೇ ಅಲ್ಲ, ಏನು ಕಾರ್ಮಿಕರಿದ್ದಾರೆ, ರಾಜ್ಯದ ನೌಕರರಿದ್ದಾರೆ ಅವರಿಗೆ 28 ಕೋಟಿ ರೂಪಾಯಿಗಳ ಸಾಲವನ್ನು ಪಾಲಿಸಿಗಳ ಮೇಲೆ ಕೊಟ್ಟಿದ್ದೇವೆ. ಈ ವರ್ಷ ಒಂದು ಸಾವಿರ ಇರತಕ್ಕಂಥ ಪಾಲಿಸಿಗಳಿಗೆ 70 ರೂಪಾಯಿಗಳನ್ನು ಹೆಚ್ಚಿಗೆ ಕೊಡಬೇಕೆನ್ನುವ ಉದ್ದೇಶವೂ ಇದೆ. ಮುಂದಿನ ವರ್ಷ ಅದು 82 ರೂಪಾಯಿಗಳು ಆಗಬಹುದು. ಈ ಎಲ್ಲ ಕಾರ್ಯಕ್ರಮಗಳನ್ನು ಸಮಗ್ರವಾದ ದೃಷ್ಟಿಯಿಂದ ಹಾಕಿಕೊಂಡಿರುವ ಈ ಇಲಾಖೆ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ ಎನ್ನತಕ್ಕಂಥ ಮಾತನ್ನು ಹೇಳುತ್ತೇವೆ. ಇನ್ನೂ ಅನೇಕ ವಿಚಾರಗಳನ್ನು ಹೇಳಬಯಸುತ್ತೇನೆ. ಸಣ್ಣ ಉಳಿತಾಯದ ಬಗ್ಗೆ ಹೇಳತಕ್ಕಂಥದ್ದೇನೆಂದರೆ, ಅನೇಕ ಅಧಿಕಾರಿಗಳು ನಮಗೆ ಸಹಕರಿಸದಿರುವುದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇವೆ. ಅನೇಕ ಜಿಲ್ಲಾಧಿಕಾರಿಗಳು ಬಹಳ ತಾತ್ಸಾರ ಮನೋಭಾವನೆ ಹೊಂದಿದ್ದಾರೆ, ಎಕ್ಸೈಜ್‌ನ ಕೆಲವು ಅಧಿಕಾರಿಗಳೆಂದು ಹೇಳಬೇಕಾಗುತ್ತದೆ, ಎಲ್ಲ ಅಧಿಕಾರಿಗಳೆಂದು ಹೇಳಲಿಕ್ಕೆ ಆಗುವುದಿಲ್ಲ. ಕೆಲವು ಅಧಿಕಾರಿಗಳು ಮಾತ್ರ ಇದಕ್ಕೆ ಸಹಕಾರವನ್ನು ಕೊಟ್ಟಿಲ್ಲ. ಆರ್.ಟಿ.ಓ.ಗಳು ಮತ್ತು ಕೆಲವು ಅಧಿಕಾರಿಗಳು ಸಹಕಾರ ಕೊಡದೆ ಹೋದರೂ ಸಹಿತ ಶೇಕಡಾ 80 ಭಾಗ ಹಣವನ್ನು ಕ್ರೋಢೀಕರಿಸುವುದರಲ್ಲಿ ಇಡೀ ರಾಷ್ಟ್ರದಲ್ಲಿ ಪ್ರಪ್ರಥಮವಾಗಿ ಕರ್ನಾಟಕ ರಾಜ್ಯದ ಸಣ್ಣ ಉಳಿತಾಯ ಇಲಾಖೆ ಕೆಲಸ ಮಾಡುತ್ತಿದೆ ಎಂದು ಅತ್ಯಂತ ಸಂತೋಷದಿಂದ ಹೇಳುತ್ತೇನೆ. ನಮ್ಮ ಸದಸ್ಯರಲ್ಲಿ ಅತಿವಿನಯದಿಂದ ನಾನು ಬೇಡಿರತಕ್ಕಂಥ 30 ಕೋಟಿ ರೂಪಾಯಿಗಳನ್ನು ತಾವು ಎಲ್ಲರೂ ಸಹಿತ ಸರ್ವಾನುಮತದಿಂದ ಒಪ್ಪಿಗೆಯನ್ನು ಕೊಡುತ್ತೀರಿ ಎನ್ನು ಆಶಯವನ್ನು ವ್ಯಕ್ತಪಡಿಸಿ, ಈ ವರದಿಯನ್ನು ತಮ್ಮ ಮುಂದಿಟ್ಟು, ತಮ್ಮ ಅಪ್ಪಣೆಯನ್ನು ಕೇಳುತ್ತಿದ್ದೇನೆ.

ಉಪಾಧ್ಯಕ್ಷಿಣಿಯವರು:-ಈಗ ಬೇಡಿಕೆಗಳ ಮೇಲಿನ ಚರ್ಚೆ ಮುಕ್ತಾಯವಾಯಿತು. ನಾನು ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವೇನೆಂದರೆ,

"ದಿನಾಂಕ 31-3-1993 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಬೇಡಿಕೆಗಳ ಸಂಖ್ಯೆ 15,16,17,18,20,37,38,39,41,42,ಮತ್ತು 19 ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜ್ಯಸ್ವ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಿಗದಿಪಡಿಸಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡಬೇಕು."

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ.)

ಅಭಿಯಾಚನೆ ಕ್ರಮಾಂಕ 15 ವರಮಾನ ತೆರಿಗೆ, ವೃತ್ತಿಗಳು, ಮಾರಾಟ ಮತ್ತು ಇತರ ಸೇವೆಗಳು.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1993 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವರಮಾನ ತೆರಿಗೆ, ವೃತ್ತಿಗಳು, ಮಾರಾಟ ಮತ್ತು ಇತರ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 78,82,12,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 16 ಖಜಾನೆ ಮತ್ತು ಲೇಖಾ ಇಲಾಖೆಗಳ ಆಡಳಿತ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1993 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಖಜಾನೆ ಮತ್ತು ಲೇಖಾ ಇಲಾಖೆಗಳ ಆಡಳಿತಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 14,49,16,000ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂತ 17 ವಿಶ್ರಾಂತಿವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳು.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1993 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 312,79,97,000ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 18 ಸರಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1993 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸರ್ಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 6,30,00,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 16,17,00,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 20 ಇತರ ವಿವಿಧ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1993 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಇತರೇ ವಿವಿಧ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 19,58,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 5,85,00,000 ರೂಪಾಯಿಗಳಿಗೆ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 37 ಚುನಾವಣೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1993ರಂದು ಕೊನೆಗಳ್ಳುವ ಆರ್ಥಿಕ ವರ್ಷದಲ್ಲಿ ಚುನಾವಣೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 6,31,68,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 38 ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1993 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯಪಾಲರು ಮಂತ್ರಿಗಳು ಮತ್ತು ಲೇಕಸೇವಾ ಆಯೋಗಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 2,67,59,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 39 ಸಚಿವಾಲಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1993 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಚಿವಾಲಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 22,09,37,000ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 41 ಸಾಮಾನ್ಯ ಆಡಳಿತ ಇತ್ಯಾದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1993 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಾಮಾನ್ಯ ಆಡಳಿತ ಇತ್ಯಾದಿ ಅಭಿಯಾಚನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 21,44,28,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 16,62,00,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 42 ಯೋಜನಾ ಇಲಾಖೆಯ ಅಭಿಯಾಚನೆಗಳು ಇತ್ಯಾದಿ.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1993 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಯೋಜನಾ ಇಲಾಖೆಯ ಅಭಿಯಾಚನೆಗಳು ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 123,42,19,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 28,00,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 19 ಸಣ್ಣ ಉಳಿತಾಯಗಳು ರಾಜ್ಯ ಲಾಟರಿ ಮತ್ತು ವಿಮೆಗಳಿಗೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1993 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಣ್ಣ ಉಳಿತಾಯ ರಾಜ್ಯ ಲಾಟರಿ ಮತ್ತು ವಿಮೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 30,78,81,000ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಶಾಸನ ರಚನಾ ಕಾರ್ಯಕಲಾಪಗಳು

ವಿಧೇಯಕಗಳ ಮಂಡನೆ.

1. 1992ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ:2) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಎಸ್.ಬಂಗಾರಪ್ಪ (ಮುಖ್ಯಮಂತ್ರಿಯವರು):-ಮಾನ್ಯ ಉಪಾಧ್ಯಕ್ಷರೇ, 1992ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ:2)ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷಿಣಿಯವರು:- ಪ್ರಸ್ತಾವ ಏನೆಂದರೆ "1992ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ:2) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಸ್.ಬಂಗಾರಪ್ಪ: (ಮುಖ್ಯಮಂತ್ರಿಯವರು):-ಮಾನ್ಯ ಉಪಾಧ್ಯಕ್ಷರೆ,1992ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ:2)ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷಿಣಿಯವರು: * ಅನುಬಂಧಗಳು ವಿಧೇಯಕವನ್ನು ಮಂಡಿಸಲಾಗಿದೆ

2. 1992ರ ಕರ್ನಾಟಕ ಮಾರಾಟ ತೆರಿಗೆ(ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಎಸ್. ಬಂಗಾರಪ್ಪ: (ಮುಖ್ಯಮಂತ್ರಿಗಳು):- ಮಾನ್ಯ ಉಪಾಧ್ಯಕ್ಷಿಣಿಯವರೆ 1992ರ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ)ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.